ಮೈಸೂರು ಸುಲ್ತಾನರ ಆಳ್ವಿಕೆಯಲ್ಲಿ ಬೆಂಗಳೂರು

(ಕನ್ನಡ ವಿಶ್ವವಿದ್ಯಾಲಯ, ಹಂಪಿ, ಚರಿತ್ರೆ ವಿಭಾಗಕ್ಕೆ ಎಂ.ಫಿಲ್. ಪದವಿಗಾಗಿ ಸಲ್ಲಿಸಿದ ನಿಬಂಧ)

ಸಂಶೋಧಕರು

ಮುನಿರಾಜ್ ಎಸ್

ಮಾರ್ಗದರ್ಶಕರು

ಡಾ.ಕೆ.ಮೋಹನ್‌ಕೃಷ್ಣ ರೈ

ಸಹ ಪ್ರಾಧ್ಯಾಪಕರು

ಚರಿತ್ರೆ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

ಅಕ್ಟೋಬರ್ ೨೦೦೯

ಮೈಸೂರು ಸುಲ್ತಾನರ ಆಳ್ವಿಕೆಯಲ್ಲಿ ಬೆಂಗಳೂರು

(ಕನ್ನಡ ವಿಶ್ವವಿದ್ಯಾಲಯ, ಹಂಪಿ, ಚರಿತ್ರೆ ವಿಭಾಗಕ್ಕೆ ಎಂ.ಫಿಲ್. ಪದವಿಗಾಗಿ ಸಲ್ಲಿಸಿದ ನಿಬಂಧ)

ಸಂಶೋಧಕರು
ಮುನಿರಾಜ್ ಎಸ್

ಮಾರ್ಗದರ್ಶಕರು
ಡಾ.ಕೆ.ಮೋಹನ್‌ಕೃಷ್ಣ ರೈ
ಸಹ ಪ್ರಾಧ್ಯಾಪಕರು

ಚರಿತ್ರೆ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಅಕ್ಟೋಬರ್ ೨೦೦೯

ದೃಢೀಕರಣ ಪತ್ರ

'ಮೈಸೂರು ಸುಲ್ತಾನರ ಆಳ್ವಿಕೆಯಲ್ಲಿ ಬೆಂಗಳೂರು' ಎಂಬ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಗಾಗಿ ಮುನಿರಾಜ್.ಎಸ್., ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಪ್ರಸ್ತುತ ನಿಬಂಧವನ್ನು ಈ ಮೊದಲು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ
ದಿನಾಂಕ : ೧೫.೧೦.೦೮

ಡಾ. ಮೋಹನ್‌ಕೃಷ್ಣ ರೈ
ಮಾರ್ಗದರ್ಶಕರು ಹಾಗೂ ಸಹ ಪ್ರಾಧ್ಯಾಪಕರು
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಪ್ರಮಾಣ ಪತ್ರ

'ಮೈಸೂರು ಸುಲ್ತಾನರ ಆಳ್ವಿಕೆಯಲ್ಲಿ ಬೆಂಗಳೂರು' ಎಂಬ ನಿಬಂಧವನ್ನು ಡಾ.ಕೆ.ಮೋಹನ್‌ಕೃಷ್ಣ ರೈ, ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್. ಪದವಿಗಾಗಿ ಸಮಾಜ ವಿಜ್ಞಾನಗಳ ನಿಕಾಯದ ಚರಿತ್ರೆ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ನಿಬಂಧವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ
ದಿನಾಂಕ : ೧೩.೧೦.೦೮

(ಮುನಿರಾಜ್ ಎಸ್)
ಸಂಶೋಧಕ
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

[illegible]

[illegible]

[illegible]

[illegible]

ಪರಿವಿಡಿ

• • •

[illegible]

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ ಹಾಗೂ ಸ್ವರೂಪ, ರಚನಾಶಾಸ್ತ್ರದ ಆಯಾಮಗಳು

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ ಹಾಗೂ ಸ್ವರೂಪ, ರಚನಾಶಾಸ್ತ್ರದ ಆಯಾಮಗಳು

೧೮ನೇ ಶತಮಾನದ ದ್ವಿತೀಯಾರ್ಧವು ಬಹಳ ಮುಖ್ಯವಾದ ಮೂರು ಘಟನೆಗಳನ್ನು ಕಂಡಿತು. ಅವುಗಳೆಂದರೆ ಮೊಘಲ್ ಸಾಮ್ರಾಜ್ಯದ ಅವನತಿ[೧], ಮರಾಠ ಶಕ್ತಿಯ ಏಳಿಗೆ[೨] ಹಾಗೂ ವಸಾಹತುಗಾರರ ಪ್ರಭುತ್ವದ ಉದಯ[೩], ಕರ್ನಾಟಕವು ಮೈಸೂರು ಸುಲ್ತಾನರ ನಾಯಕತ್ವದಲ್ಲಿ ಈ ಮೂರು ಶಕ್ತಿಗಳನ್ನು ಎದುರಿಸಬೇಕಾಯಿತು. ದಳವಾಯಿಗಳ ಹಿತಾಸಕ್ತಿಗಳ ಸಂಘರ್ಷವನ್ನು, ಅದರಿಂದುಂಟಾದ ಗೊಂದಲವನ್ನು ತನ್ನ ಉಪಯೋಗಕ್ಕೆ ಬಳಸಿಕೊಂಡವನು ಹೈದರ್. ಮೈಸೂರು ರಾಜ್ಯವನ್ನು ತನ್ನ ಶತ್ರುಗಳೆಲ್ಲರ ಶಕ್ತಿಯನ್ನು ಎದುರಿಸಲು ತಕ್ಕ ಬಲಿಷ್ಠ ರಾಜ್ಯವನ್ನಾಗಿ ರೂಪಿಸಿದನು. ಮೊಘಲ್ ಸಾಮ್ರಾಜ್ಯದ ವಾರಸುದಾರನೆಂದು ಬೀಗುತ್ತಿದ್ದ ಹೈದರಾಬಾದಿನ ನಿಜಾಮನ ರೆಕ್ಕೆಗಳನ್ನು ಕತ್ತರಿಸಿ, ಅವನು ಉಳಿಯಲು ಇತರರ ಸಹಾಯ ಬೇಡುವಂತೆ ಮಾಡಿದನು. ಪ್ರಭುತ್ವದ ಏಳಿಗೆಯಲ್ಲಿದ್ದ ಮರಾಠರೊಂದಿಗೆ ಯುದ್ಧಗಳಲ್ಲಿ ಮುತ್ಸದ್ಧಿ ತನದಿಂದ ಉಪಾಯವಾಗಿ ನಡೆದುಕೊಂಡು ಅವರು ಕೃಷ್ಣ ನದಿಯ ಪ್ರದೇಶಗಳಲ್ಲಿನ ತಮ್ಮ ರಾಜ್ಯದ ಭಾಗವನ್ನು ಮೈಸೂರಿಗೆ ಬಿಟ್ಟು ಕೊಡುವ ಹಾಗೆ ಮಾಡಿದನು. ಹೈದರನು ಮೇಲೇರುತ್ತಿದ್ದ ಬ್ರಿಟಿಷ್ ಅಧಿಕಾರದ ವಿರುದ್ಧವಾಗಿ ಅತ್ಯಂತ ಮಹತ್ವದ ಪಾತ್ರವನ್ನು ನಿರ್ವಹಿಸಿದನು. ಬ್ರಿಟಿಷರಿಂದ ಭಾರತದ ಸಾರ್ವಭೌಮತ್ವಕ್ಕೆ ಭಾರಿ ಅಪಾಯವಿದೆ ಎಂದು ಮನಗಂಡ ಏಕೈಕ ಅರಸ ಟಿಪ್ಪು. ಬ್ರಿಟಿಷರ ಉದ್ದೇಶಗಳನ್ನು ಛಿದ್ರಗೊಳಿಸಲು ಟಿಪ್ಪು ತನ್ನ ಸರ್ವಶಕ್ತಿಯನ್ನು ಉಪಯೋಗಿಸಿದನು. ಇವೆಲ್ಲದರ ಫಲವಾಗಿ ಅವನ ಆಳ್ವಿಕೆಯು ಯುದ್ಧದ ನಡುವೆ ಆರಂಭವಾಗಿ ಯುದ್ಧದೊಂದಿಗೆ ಕೊನೆಗೊಂಡಿತು.

ಯಲಹಂಕ ನಾಡ ಪ್ರಭುಗಳೆಂದು ಖ್ಯಾತಿಗಳಿದ್ದ ಕೆಂಪೇಗೌಡನ ವಂಶಸ್ಥರ ರಾಜಧಾನಿ ಯಲಹಂಕವಾಗಿತ್ತು. ಆದರೆ ಕ್ರಮೇಣ ಈ ಸ್ಥಾನವನ್ನು ಬೆಂಗಳೂರಿಗೆ ಬಿಟ್ಟುಕೊಟ್ಟಿರುವುದನ್ನು ಕಾಣಬಹುದು. ಬೆಂಗಳೂರು ಎಲ್ಲಾ ಮಹತ್ವಾಕಾಂಕ್ಷಿ ಪಾಳೆಯಗಾರರ ಪ್ರಭುತ್ವಗಳಿಗೆ ಬೇಕಾದ ಸ್ಥಳವಾಯಿತು. ಮೊಘಲರು, ಮರಾಠರು, ಆದಿಲ್‌ಷಾಹಿಗಳು, ಪಾಳೇಯಗಾರರು, ಮೈಸೂರು ಒಡೆಯರು, ಬ್ರಿಟಿಷರು ಬೆಂಗಳೂರಿನ ಮೇಲೆ ತಮ್ಮ ಅಧಿಕಾರ ಸ್ಥಾಪಿಸಲು ಹೆಣಗಿದರು.

[illegible]

ಚಿಕ್ಕದೇವರಾಜ ಒಡೆಯರ ಹಿಡಿತಕ್ಕೆ ಬೆಂಗಳೂರು ಬಂದ ಕೂಡಲೆ ಒಡೆಯರು ಮತ್ತೊಂದು ಕೋಟೆ ಕಟ್ಟಿಸಿ ಅದರ ನಿರ್ವಹಣೆಗಾಗಿ ಸಮರ್ಥ ಅಧಿಕಾರಿಗಳನ್ನು ನೇಮಿಸಿದರು ಎಂಬ ವಿಚಾರವು ''ಚಿಕ್ಕದೇವರಾಜ ವಂಶಾವಳಿ''ಯಿಂದ ತಿಳಿದುಬರುತ್ತದೆ. ೧೮ನೇ ಶತಮಾನದ ಪೂರ್ವಾರ್ಧದಲ್ಲಿ ಬೆಂಗಳೂರು ಬೆಳವಣಿಗೆ ಹೇಳಿಕೊಳ್ಳುವಂಥದಲ್ಲ. ದಾಳಿಗೆ ತುತ್ತಾಗದಿದ್ದರೂ ಮೈಸೂರು ರಾಜ್ಯದ ಮೇಲೆ ದಂಡೆತ್ತಿ ಬರುತ್ತಿದ್ದ ಮೊಘಲರು, ಮರಾಠರು, ಮತ್ತು ಆರ್ಕಾಟ ನವಾಬರ ಕಾಟದಿಂದ ತಪ್ಪಿಸಿಕೊಳ್ಳಲು ಒಡೆಯರು ಕೊಡಬೇಕಾಗಿದ್ದ ಕಪ್ಪಕಾಣಿಕೆಯನ್ನು ಶ್ರೀಮಂತ ಬೆಂಗಳೂರು ಕೂಡಿಸಿ ಕೊಡಬೇಕಾಗಿತ್ತು. ೧೭೫೮ರಲ್ಲಿ ಹೈದರ್ ಮೈಸೂರಿನ ಮೇಲೆ ಆಕ್ರಮಣ ಮಾಡಿದ ಮರಾಠರನ್ನು ಸೋಲಿಸಿ, ಶಾಂತಿ ನೆಲೆಗೊಳಿಸಿದ್ದಕ್ಕಾಗಿ ಬೆಂಗಳೂರನ್ನು ಹೈದರನಿಗೆ ಜಹಾಗೀರ್ ಆಗಿ ಕೊಟ್ಟರು.

ಹೈದರ್ ಅಲಿ ಹಾಗೂ ಟಿಪ್ಪು ಸುಲ್ತಾನರ ಸುಮಾರು ಮೂರು ದಶಕಗಳಕಾಲ ಆಳ್ವಿಕೆಯಲ್ಲಿ ಬೆಂಗಳೂರು ತೀವ್ರವಾಗಿ ಬೆಳೆಯಿತು. ಬೆಂಗಳೂರಿನಲ್ಲಿದ್ದ ಅನುಕೂಲತೆಗಳನ್ನು ಸುಲ್ತಾನರು ಪರಿಣಾಮಕಾರಿಯಾಗಿ ಬಳಸಿಕೊಂಡರು. ದಕ್ಷಿಣದಲ್ಲಿ ಬೆಂಗಳೂರನ್ನು ವಾಣಿಜ್ಯ ರಾಜಧಾನಿಯನ್ನಾಗಿ ಬೆಳೆಸಿದ ಕೀರ್ತಿ ಈ ಸುಲ್ತಾನರಿಗೆ ಸಲ್ಲುತ್ತದೆ. ೧೮ನೇ ಶತಮಾನದ ಪೂರ್ವಾರ್ಧದಲ್ಲಿ ಈ ನಗರವು ಯುದ್ಧ ಸಾಮಗ್ರಿಗಳ ತಯಾರಿಕೆ ಕೇಂದ್ರವಾಯಿತು. ಅರಾಜಕತೆಯಿಂದ ಕೂಡಿದ್ದ ಅಂದಿನ ಭಾರತದಲ್ಲಿ ಎಲ್ಲರ ಕಣ್ಣುಗಳು ಬೆಂಗಳೂರಿನ ಮೇಲೆ ಕೇಂದ್ರಿತವಾಗಿದ್ದವು. ಈ ಸಮಯವನ್ನು ಅರಿತ ಹೈದರ್ ಕಲ್ಲಿನ ಕೋಟೆಯನ್ನು ನಿರ್ಮಿಸಿದನು. ಬೆಂಗಳೂರು ನಗರದ ಶ್ರೀಮಂತಿಕೆಯನ್ನು ವೈರಿಗಳಿಂದ ರಕ್ಷಿಸಲು ಈ ಕೋಟೆ ಸುಲ್ತಾನರಿಗೆ ನೆರವಾಯಿತು.

ಬೆಂಗಳೂರು ದೊಡ್ಡ ವ್ಯಾಪರ ಕೇಂದ್ರವಾಗಿ ಬೆಳೆಯಲು ಮುಖ್ಯವಾದ ಕಾರಣ ಟಿಪ್ಪು ಅನುಸರಿಸಿದ ವಾಣಿಜ್ಯ ನೀತಿ. ವಸಾಹತುಶಾಹಿಗಳು ಈ ವೇಳೆಗಾಗಲೇ ಭಾರತದಾದ್ಯಂತ ತಮ್ಮ ಕಂಬಂಧ ಬಾಹುಗಳನ್ನು ಎಲ್ಲೆಡೆ ಚಾಚಿ, ಅಡ್ಡಬಂದ ಶಕ್ತಿಗಳನ್ನೆಲ್ಲಾ ನಾಶ ಮಾಡುತ್ತಿದ್ದ ಸಂದರ್ಭದಲ್ಲಿ ಅದನ್ನು ಪರಿಣಾಮಕಾರಿಯಾಗಿ ಎದುರಿಸುವಲ್ಲಿ ಟಿಪ್ಪು ಬಹುಮುಖ್ಯ ಪಾತ್ರವಹಿಸಿದನು. ಬೆಂಗಳೂರು ಆಯಕಟ್ಟಿನ ಸ್ಥಳದಲ್ಲಿ ನಿರ್ಮಾಣವಾದುದರಿಂದ ರಾಷ್ಟ್ರದ ದೊಡ್ಡ ವ್ಯಾಪಾರ, ವಾಣಿಜ್ಯ ಮತ್ತು ಮಿಲಿಟರಿ ಕೇಂದ್ರವಾಗಿ ಬೆಳೆಯಲು ಕಾರಣವಾಯಿತು. ಮೈಸೂರು ಸುಲ್ತಾನರ ಆರ್ಥಿಕ ಮತ್ತು ಕೈಗಾರಿಕಾ ನೀತಿಗಳು ಬೆಂಗಳೂರಿನ ಬೆಳವಣಿಗೆಗೆ ಅಪಾರ ಕೊಡುಗೆ ನೀಡಿದವು ಎಂಬುದನ್ನು ಪ್ರಸ್ತುತ ಅಧ್ಯಯನದಲ್ಲಿ ತಿಳಿಸುವ ಪ್ರಯತ್ನ ಮಾಡಲಾಗಿದೆ.

ಅಧ್ಯಯನದ ಉದ್ದೇಶ

ಪ್ರಸ್ತುತ ಅಧ್ಯಯನವು ಮೈಸೂರು ಸುಲ್ತಾನರ ಅವಧಿಯಲ್ಲಿ ಬೆಂಗಳೂರು ರಾಜಕೀಯ ಕೇಂದ್ರವಾಗಿ ಹಾಗೂ ಆರ್ಥಿಕ ಕೇಂದ್ರವಾಗಿ ಗುರುತಿಸಿಕೊಂಡಿರುವ ಬಗೆಯನ್ನು ಅಧ್ಯಯನ ನಡೆಸುವ ಉದ್ದೇಶವನ್ನು ಹೊಂದಿದೆ. ಮೈಸೂರು ಸುಲ್ತಾನರು ಮತ್ತು ಸಮಕಾಲೀನ ಶಕ್ತಿಗಳಾದ ಹೈದರಾಬಾದ್ ನಿಜಾಮ, ಮರಾಠರು, ಆರ್ಕಾಟಿನ ನವಾಬ ಹಾಗೂ ಬ್ರಿಟಿಷರ ನಡುವಿನ ಸಂಬಂಧಗಳು, ಸುಲ್ತಾನರ ಆಳ್ವಿಕೆಯಲ್ಲಿ ನಗರವು ಹೊಂದಿದ ಬೆಳವಣಿಗೆ ರೀತಿ, ಬೆಂಗಳೂರು ಆ ವೇಳೆಗೆ ಯುದ್ಧಗಳಲ್ಲಿ ಬಳಕೆಯಾದ ರೀತಿ, ನಗರದ ಅಭಿವೃದ್ಧಿಗೆ ಕೈಗೊಂಡ ಕ್ರಮಗಳು

[illegible]

[illegible]

[illegible]

[illegible]

ಹಾಗೂ ಸುಲ್ತಾನರ ಆಳ್ವಿಕೆ ಕಾಲದ ಬೆಂಗಳೂರಿನ ಆರ್ಥಿಕ ವ್ಯವಸ್ಥೆಯ ಕುರಿತು ಅಧ್ಯಯನ ನಡೆಸುವ ಉದ್ದೇಶವನ್ನು ಹೊಂದಿದೆ.

ಅಧ್ಯಯನದ ವ್ಯಾಪ್ತಿ

ಯಾವುದೇ ಒಂದು ನಿರ್ದಿಷ್ಟ ಹಾಗೂ ಉದ್ದೇಶಪೂರಿತವಾದ ಸಂಶೋಧನೆಯು ಯಶಸ್ಸು ಕಾಣಬೇಕಾದರೆ ಆ ಸಂಶೋಧನೆಗೊಂದು ವ್ಯಾಪ್ತಿ ಅಥವಾ ಮಿತಿ ಇರುವುದು ಬಹುಮುಖ್ಯ ಇಲ್ಲದಿದ್ದರೆ ಅಧ್ಯಯನವು ಗೊಂದಲಮಯವಾಗಿ ಸಂಶೋಧಕನನ್ನು ದಾರಿ ತಪ್ಪಿಸುತ್ತದೆ. ನಿರ್ದಿಷ್ಟ ವ್ಯಾಪ್ತಿಯಲ್ಲಿ ರೂಪಗೊಂಡ ಸಂಶೋಧನೆಗೆ ಮಾತ್ರ ಕ್ರಮಬದ್ಧವಾದ ಹಾಗೂ ಸ್ಪಷ್ಟವಾದ ಅಧ್ಯಯನವನ್ನು ಕಟ್ಟಿಕೊಡಲು ಸಾಧ್ಯ. ಪ್ರಸ್ತುತ ಅಧ್ಯಯನದ ವ್ಯಾಪ್ತಿಯನ್ನು ಮೈಸೂರು ಸುಲ್ತಾನರ ಕಾಲಾವಧಿ, ದಕ್ಷಿಣ ಭಾರತದ ರಾಜಕಾರಣ ಹಾಗೂ ಬೆಂಗಳೂರಿಗೆ ಸೀಮಿತಗೊಳಿಸಲಾಗಿದೆ.

ಅಧ್ಯಯನದ ಸ್ವರೂಪ

ಪ್ರಸ್ತುತ ಪ್ರಬಂಧವನ್ನು ಅಧ್ಯಯನದ ದೃಷ್ಟಿಯಿಂದ ಐದು ಅಧ್ಯಾಯಗಳನ್ನಾಗಿ ವಿಭಾಗಿಸಲಾಗಿದೆ.

ಒಂದನೆಯ ಅಧ್ಯಾಯವು ಅಧ್ಯಯನದ ಉದ್ದೇಶ, ವ್ಯಾಪ್ತಿ ಹಾಗೂ ಸ್ವರೂಪದ್ದಾಗಿದೆ. ಚರಿತ್ರೆ ರಚನಾಶಾಸ್ತ್ರದ ಆಯಾಮಗಳು, ಹೈದರಾಲಿ ಮತ್ತು ಟಿಪ್ಪುವಿನ ಆಡಳಿತ ಹಾಗೂ ಟಿಪ್ಪು ಬಗೆಗಿನ ಸಾಮ್ರಾಜ್ಯಶಾಹಿ ಬರಹಗಾರರ, ರಾಷ್ಟ್ರೀಯ ಬರಹಗಾರರ, ಪ್ರಗತಿಪರ ಬರಹಗಾರರ ನಿಲುವುಗಳನ್ನು ಕುರಿತು ಅಧ್ಯಯನ ಕೈಗೊಳ್ಳಲಾಗಿದೆ.

ಎರಡನೇ ಅಧ್ಯಾಯದಲ್ಲಿ ಬೆಂಗಳೂರಿನ ಚಾರಿತ್ರಿಕ ಹಿನ್ನಲೆಯನ್ನು ಅಧ್ಯಯನ ಮಾಡಲಾಗಿದೆ. ವಿವಿಧ ಅರಸು ಮನೆತನಗಳ ಆಳ್ವಿಕೆಯಲ್ಲಿನ ರಾಜಕೀಯ ಮತ್ತು ಆರ್ಥಿಕ ಬೆಳವಣಿಗೆಯನ್ನು ಇಲ್ಲಿ ವಿವರಿಸಲಾಗಿದೆ.

ಮೂರನೇ ಅಧ್ಯಾಯದಲ್ಲಿ ಮೈಸೂರು ಸುಲ್ತಾನರ ಆಳ್ವಿಕೆಯಲ್ಲಿ ಬೆಂಗಳೂರು ರಾಜಕೀಯವಾಗಿ ಬೆಳೆದು ಬಂದ ಹಾದಿಯನ್ನು ಮತ್ತು ಪ್ರಭುತ್ವವು ನಗರವನ್ನು ಯಾವ ರೀತಿಯಾಗಿ ಬಳಸಿಕೊಂಡಿತು, ಬೆಂಗಳೂರು ಸುಲ್ತಾನರ ಯುದ್ಧಗಳಲ್ಲಿ ಬಳಕೆಯಾದ ರೀತಿ, ಕೋಟೆಯ ಕಾವಲು ಪಡೆಯ ನೇಮಕ ಮುಂತಾದ ವಿಚಾರ ಕುರಿತು ಅಧ್ಯಯನ ಕೈಗೊಳ್ಳಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಮೈಸೂರು ಸುಲ್ತಾನರ ಆಳ್ವಿಕೆಯಲ್ಲಿ ಬೆಂಗಳೂರು ಆರ್ಥಿಕವಾಗಿ ಬೆಳೆದು ಬಂದ ಬಗೆಯನ್ನು ಚರ್ಚಿಸಲಾಗಿದೆ. ವ್ಯಾಪಾರ, ವಾಣಿಜ್ಯ, ಕೈಗಾರಿಕೆ, ಟಿಪ್ಪುವಿನ ವಾಣಿಜ್ಯ ನೀತಿ ಫ್ರೆಂಚರ ನೆರವು ಮುಂತಾದ ವಿಚಾರಗಳ ಬಗ್ಗೆ, ಅಧ್ಯಯನ ಕೈಗೊಳ್ಳಲಾಗಿದೆ.

ಐದನೇ ಅಧ್ಯಾಯವು ಇಡೀ ಅಧ್ಯಯನದ ಸಂಕ್ಷಿಪ್ತ ರೂಪವೆನ್ನಬಹುದು ಹಾಗೂ ಒಟ್ಟು ಅಧ್ಯಯನದಿಂದ ಕಂಡುಕೊಂಡ ಫಲಿತಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

ಚರಿತ್ರೆ ರಚನಾಶಾಸ್ತ್ರದ ಆಯಾಮಗಳು

ಮೈಸೂರು ಸಂಸ್ಥಾನ ಹಾಗೂ ಬೆಂಗಳೂರನ್ನು ಕುರಿತು ಈವರೆಗೆ ಸಾಕಷ್ಟು ಅಧ್ಯಯನಗಳು ದೇಶಿಯ ಮತ್ತು ವಿದೇಶಿ ವಿದ್ವಾಂಸರಿಂದ ನಡೆದಿವೆ. ಪ್ರಸ್ತುತ ''ಮೈಸೂರು ಸುಲ್ತಾನರ ಆಳ್ವಿಕೆಯಲ್ಲಿ ಬೆಂಗಳೂರು'' ಎಂಬ

ಶೀರ್ಷಿಕೆ ಅನುಲಕ್ಷಿಸಿ ಹೇಳುವುದಾದರೆ ಈ ವರೆಗೆ ಕೆಲವು ಅಧ್ಯಯನಗಳು ಸಂಪಾದಿತ ಕೃತಿಗಳಲ್ಲಿ ಹಾಗೂ ಬಿಡಿ ಲೇಖನಗಳ ರೂಪದಲ್ಲಿ ಹೊರಬಂದಿವೆ. ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಪ್ರತ್ಯೇಕವಾದ ಯಾವುದೇ ಪುಸ್ತಕ ಹೊರ ಬಂದಿರುವುದಿಲ್ಲ. ಇದಕ್ಕೆ ಪೂರಕವಾಗಿ ಚಾರಿತ್ರಿಕ ಆಕರಗಳೊಂದಿಗೆ ಪ್ರಕಟಿತ ಮತ್ತು ಅಪ್ರಕಟಿತ ಗ್ರಂಥಗಳನ್ನು ಪರಿಶೀಲಿಸಲಾಗಿದೆ.

ಹಯವದನ್ ರಾವ್.ಸಿ. ಅವರ ''ಹಿಸ್ಟ್ರಿ ಆಫ್ ಮೈಸೂರು'', ಬುಕಾನನ್ ರವರ ''ಎ ಜರ್ನಿ ಫ್ರಂ ಮದ್ರಾಸ್ ಥ್ರೂ ದಿ ಕಂಟ್ರೀಸ್ ಆಫ್ ಮೈಸೂರ್ ಕೆನರಾ ಅಂಡ್ ಮಲಬಾರ್'', ಎಲ್.ಬಿ. ಬೌರಿಂಗ್‌ರ ''ಹೈದರ್ ಅಂಡ್ ಟಿಪ್ಪೂ ಸುಲ್ತಾನ್'' ಎಂ. ಫಸಲು ಹಸನ್‌ರ ''ಬ್ಯಾಂಗಲೂರ್ ಥ್ರೂ ದಿ ಸೆಂಚುರೀಸ್'', ಟಿ.ವಿ. ಅನ್ನಸ್ವಾಮಿರವರ ''ಬ್ಯಾಂಗಲೂರ್ ಟು ಬ್ಯಾಂಗ್‌ಲೂರ್'' ಮಾಯಾ ಜಯಪಾಲ್ ಅವರ ''ಬ್ಯಾಂಗಲೂರ್ ದಿ ಸ್ಟಡಿ ಆಫ್ ಎ ಸಿಟಿ'', ಇರ್ಫನ್ ಹಬೀಬ್‌ರವರ ''ಕಾನ್‌ಫ್ರೈಟಿಂಗ್ ಕಾಲೋನಿಯಾಲಿಸಂ. ರೆಜೆಸ್ಟನ್ಸ್ ಅಂಡ್ ಮಾರ್ಡನ್ ನೈಜೇಷನ್ ಅಂಡರ್ ಹೈದರಾಲಿ ಅಂಡ್ ಟಿಪ್ಪುಸುಲ್ತಾನ, ಷೇಕ್ ಅಲಿ ಅವರ ''ಕರ್ನಾಟಕ ಚರಿತ್ರೆ-ಸಂ-೫'' ಮೋಹನ್‌ಕೃಷ್ಣ ರೈ ರವರ ''ವಸಾಹತುಪೂರ್ವ ಕರ್ನಾಟಕದ ನಗರ ಚರಿತ್ರೆ'' ಕೃಷ್ಣರಾವ್ ಎಂ.ವಿ. ರವರ ''ಬೆಂಗಳೂರು ಕೆಂಪೇಗೌಡ'', ಸೂರ್ಯನಾಥ ಯು. ಕಾಮತ್‌ರ ''ಬೆಂಗಳೂರು ಗ್ಯಾಸೆಟಿಯರ್'' ಇನ್ನೂ ಅನೇಕ ಕೃತಿಗಳು ಪ್ರಕಟವಾಗಿವೆ. ಮೈಸೂರು ಸುಲ್ತಾನರ ಆಳ್ವಿಕೆಯಲ್ಲಿ ಬೆಂಗಳೂರಿನ ಕುರಿತು ಚರಿತ್ರೆ ಲೇಖನಾ ಕಲೆಯ ವಿವಿಧ ಆಯಾಮಗಳಿಂದ ಸಮಗ್ರವಾದ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಅತ್ಯಂತ ವಿವಾದಗ್ರಸ್ಥ ಚಾರಿತ್ರಿಕ ವ್ಯಕ್ತಿಗಳಲ್ಲಿ ಮೈಸೂರು ಸುಲ್ತಾನರು ಸಹ ಒಬ್ಬರಾಗಿದ್ದಾರೆ. ಇವರ ಆಡಳಿತದ ವಿವರಗಳನ್ನೊಳಗೊಂಡಿರುವ ದೇಶಿಯ ಮತ್ತು ವಿದೇಶಿಯ ಆಧಾರಗಳು ಈ ಬಗ್ಗೆ ವಿರೋಧಾತ್ಮಕ ಪ್ರತಿಮೆಗಳನ್ನು ಕೊಟ್ಟು ಗೊಂದಲಗೊಳಿಸುತ್ತವೆ. ಸುಲ್ತಾನರು ಒಂದು ಕಡೆ ಮಹಾಪುರುಷರಂತೆ ಕಂಡರೆ, ಇನ್ನೊಂದು ಕಡೆ 'ನಿರ್ದಯಿ'ಗಳು ಎಂಬಂತೆ ಕಾಣುತ್ತಾರೆ. ಬಹುತೇಕ ಪಾಶ್ಚಾತ್ಯ ವಸಾಹತು ಬರಹಗಾರರು ಮತ್ತು ಭಾರತದ ರಾಷ್ಟ್ರೀಯ ಬರಹಗಾರರು, ಕರ್ನಾಟಕದ ಬರಹಗಾರರು ಒಳಗೊಂಡು ಅವರನ್ನು ಕ್ರೂರಿಗಳು, ಸರ್ವಾಧಿಕಾರಿ, ಮತಾಂಧರೆಂದು ಚಿತ್ರಿಸಿದರೆ ಕೆಲವರು ಕ್ರಾಂತಿಕಾರಿಗಳು, ಆಧುನಿಕರು, ಪ್ರಜಾಪ್ರಭುತ್ವದಿಗಳು ಮತ್ತು ಜಾತ್ಯಾತೀತರೆಂದು ಬಣ್ಣಿಸುತ್ತಾರೆ. ಒಬ್ಬಿಬ್ಬರಂತೂ ಇವರನ್ನು ಸಮಾಜವಾದಿಗಳು ಮತ್ತು ಮುತ್ಸದ್ದಿಗಳು ಎಂದೂ ಬಣ್ಣಿಸಿರುವುದು ಕಂಡುಬರುತ್ತದೆ.

ಟಿಪ್ಪುವಿನ ಸ್ವಭಾವ, ಆತನ ಆಡಳಿತ ಕ್ರಮ, ದೇಶಿ ಹಾಗೂ ವಿದೇಶಿ ಶಕ್ತಿಗಳೊಂದಿಗೆ ಹೊಂದಿದ್ದ ರಾಜಕೀಯ ಸಂಬಂಧಗಳು ಹಾಗೂ ರಾಜಕಾರಣದ ಕುರಿತು ಹಲವಾರು ಕೃತಿಗಳು ರಚನೆಗೊಂಡವು. ಇಲ್ಲಿಯವರೆಗೆ ಪ್ರಕಟವಾಗಿರುವ ಆಕರ ಸಾಮಗ್ರಿ ಇಂಗ್ಲಿಷ್‌ನಲ್ಲಿದ್ದು ಟಿಪ್ಪುವಿನ ಬಗ್ಗೆ ವಿಕೃತ ಚಿತ್ರಣ ಕೊಡುತ್ತವೆ. ಭಾರತದಲ್ಲಿದ್ದ ಅಥವಾ ಅಂದಿನ ಭಾರತದೊಂದಿಗೆ ಸಂಬಂಧವಿದ್ದ, ಪ್ರತಿಯೊಬ್ಬ ಬ್ರಿಟಿಷರು ಬ್ರಿಟಿಷ್ ವಸಾಹತು ಆಡಳಿತದಿಂದ ನೇರವಾಗಿ ಅಥವಾ ಪರೋಕ್ಷವಾಗಿ ತಮ್ಮ ನೆನಪನ್ನು ದಾಖಲಿಸಿದರು. ಬ್ರಿಟಿಷರನ್ನು ಉಗ್ರವಾಗಿ ಪ್ರತಿಭಟಿಸಿ, ಯುದ್ಧ ಮಾಡಿದ ಕೊನೆಯ ಪ್ರಬಲರೆಂದರೆ ಮೈಸೂರಿನವರಾದ ಹೈದರ್ ಮತ್ತು ಟಿಪ್ಪು. ಆದ್ದರಿಂದಲೇ

ವಸಾಹತುವಾದಿ ಬರಹಗಾರರು ಈ ಸುಲ್ತಾನರ ಬಗ್ಗೆ ವಿಷಕಾರಿದ್ದಾರೆ. ಇಂಗ್ಲೀಷ್ ಬಿಟ್ಟು ಉಳಿದ ಆಕರ ಗ್ರಂಥಗಳು ಅಂದರೆ ಫ್ರೆಂಚ್, ಡಚ್, ಪೋರ್ಚುಗೀಸ್, ಪರ್ಷಿಯನ್, ಅರಬಿಕ್, ಟರ್ಕಿಷ್, ಮರಾಠಿ, ತೆಲುಗು, ತಮಿಳು ಭಾಷೆಯಲ್ಲಿರುವ ದಾಖಲೆಗಳು ಬಹುತೇಕ ಹಾಗೆಯೇ ಸ್ಥಳೀಯವಾಗಿ ಲಭ್ಯವಿರುವ ಲಾವಣಿಗಳು, ಐತಿಹ್ಯಗಳು ಮುಂತಾದ ಜಾನಪದ ಸಾಮಗ್ರಿಯ ಜೊತೆಗೆ ಅಂದಿನ ಕನ್ನಡ ಸಾಹಿತ್ಯ ಕೃತಿಗಳು ಬೇರೆ ರೀತಿಯ ಚಿತ್ರಣವನ್ನು ನೀಡುತ್ತವೆ.[೧]

ಬ್ರಿಟಿಷರು ಒಂದು ಕಡೆಯಿಂದ ಮೈಸೂರು ಸುಲ್ತಾನರ ಆಳ್ವಿಕೆಯ ವಿರುದ್ಧ ರಾಜಕೀಯ ತಂತ್ರಗಳನ್ನು ಹೂಡಿ ಸೈನಿಕ ಕಾರ್ಯಾಚರಣೆ ನಡೆಸಿದರೆ, ಮತ್ತೊಂದು ಕಡೆಯಿಂದ ಅವರ ಆಡಳಿತದ ಬಗ್ಗೆ ಉದ್ದೇಶಕವೂ, ವ್ಯವಸ್ಥಿತವೂ ಆದ ಅಪಪ್ರಚಾರವನ್ನು ನಡೆಸಿದರು. ಅಂಥ ಅಪಪ್ರಚಾರ ಮತ್ತು ವಿಶ್ಲೇಷಣೆಯು, ಭಾರತದಲ್ಲಿ ಆಗಿನ ಸಮಕಾಲೀನ ರಾಜರೆಲ್ಲರೂ ಹಿಂದಿನ ರಾಜವಂಶಗಳ ಧ್ವಂಸಕರು ಮತ್ತು ಅವರ ಹಕ್ಕುಗಳನ್ನು ಬಲತ್ಕಾರವಾಗಿ ಕಸಿದು ಕೊಂಡರು ಎಂದು ಚಿತ್ರಿಸಿದರು. ಹೈದರಾಲಿ ಹಾಗೂ ಟಿಪ್ಪು ಸುಲ್ತಾನರು ಮೈಸೂರಿನಲ್ಲಿ ಇಂಥದೇ ಕೃತ್ಯಗಳನ್ನು ಎಸಗಿದರು ಎಂದೂ ಸಮರ್ಥಿಸಲು ಹೊರಟರು. ಈ ದೃಷ್ಟಿಕೋನಗಳು ಮಾರ್ಕ್ ವಿಲ್ಕ್ಸ್. ಮೈಸೂರು ರಾಜ್ಯದ ಬಗ್ಗೆ ಬರೆದಿರುವ ಸಂಪುಟಗಳಲ್ಲಿ ಕಂಡುಬರುತ್ತದೆ. ೧೭೬೧ರಲ್ಲಿ ಹೈದರಾಲಿ ಆಕ್ರಮಣ ಮಾಡುವ ಮೊದಲು ಇದ್ದ ಪ್ರಾಚೀನ ಹಿಂದೂ ಸಂಸ್ಕೃತಿ ಮತ್ತು ಸಂಪ್ರದಾಯವನ್ನು ಪುನರ್ ನಿರ್ಮಿಸುವುದು ಬ್ರಿಟಿಷರ ಪ್ರಾಮಾಣಿಕ ಪ್ರಯತ್ನವೆಂದು ವಾದಿಸಿದನು.

ಮಾರ್ಕ್ ವಿಲ್ಕ್ಸ್, ಟಿಪೂ ಸುಲ್ತಾನನ ಸಮಕಾಲೀನನಾಗಿದ್ದ ಬ್ರಿಟಿಷ್ ಬರಹಗಾರ. ಅವನು ಆಂಗ್ಲೋ ಮೈಸೂರು ಯುದ್ಧದ ಬಗ್ಗೆ ಬರೆಯುತ್ತಾ ಹೈದರಾಲಿ ಹಾಗೂ ಟಿಪ್ಪು ಬ್ರಿಟಿಷರ ವಿರುದ್ಧ ನಡೆಸಿದ ಹೋರಾಟವನ್ನು ಕಟಿಯಾಗಿ ಹಾಗೂ ನಿಂದನಾತ್ಮಕವಾಗಿ ಖಂಡಿಸುತ್ತಾನೆ ಮತ್ತು ಈ ಕೆಳಗಿನವಂತೆ ಟೀಕಿಸುತ್ತಾನೆ.

''ಅವನ ಕರಾಳವೂ, ಅಸಹಿಷ್ಣುವೂ ಆದ ಧರ್ಮಾಂದತೆ..., ಮಿತಿಯೇ ಇಲ್ಲದ ಹಿಂಸಾಚಾರ, ಅವನ ಆಳ್ವಿಕೆಯ ಬಗ್ಗೆ ಜಿಗುಪ್ಸೆ, ಅವನ ಪ್ರಾಂತದಲ್ಲಿನ ಎಲ್ಲಾ ಹಿಂದೂಗಳನ್ನೂ ಒಂದುಗೂಡಿಸಿತು. ಹಿಂದೂಗಳು ಎಷ್ಟೇ ಪ್ರತಿಭಾವಂತರಾಗಿದ್ದರೂ ಅವನ ಕೃಪೆಗೆ ಅದು ರಹದಾರಿಯಾಗುತ್ತಿರಲಿಲ್ಲ. ಮುಸಲ್ಮಾನರು ಯಾವುದೇ ಅಪರಾಧವೆನ್ನೆಸಗಿದರೂ, ಅವನ ಅವಕೃಪೆ ಅಂಸತೋಷಗಳಿಗೆ ಪಾತ್ರರಾಗುತ್ತಿರಲಿಲ್ಲ..., ಹೈದರ್‌ನಲ್ಲಿ ಏನೇ ಅರೆಕೊರೆಗಳಿದ್ದರೂ, ಯಾವುದೇ ಧರ್ಮದ ಅನುಯಾಯಿಯಾದರೂ ಅವನನ್ನು ಧಾರ್ಮಿಕ ಸಹಿಷ್ಣುತೆಯ ಒಂದು ಮಾದರಿಯನ್ನಾಗಿ ಪರಿಗಣಿಸಬಹುದಾಗಿತ್ತು, ಇತಿಹಾಸದಲ್ಲಿ ಹಿಂಸಾಚಾರ ಮಾತ್ರವೇ ಉಳಿದುಕೊಂಡಿದ್ದಂಥ ಅವಧಿಯಲ್ಲಿ, ಟಿಪ್ಪೂ ಅದರ ಅತ್ಯಂತ ಘೋರ ಸ್ವರೂಪ ಪುನರುಜ್ಜೀವನಗೊಳ್ಳುವಂತೆ ಮಾಡಿದ. ಉತ್ತಮ ಭಾವನೆ ಬೀಡು ಬಿಟ್ಟಿದ್ದಂಥ ಸುಧೀರ್ಘ ಅವಧಿಯ ಅನಂತರದಲ್ಲಿ ಕಾಣಿಸಿಕೊಂಡು ಕತ್ತಿಯ ಅಲುಗಿನ ಆಧಾರದ ಮೇಲೆ ಧರ್ಮ ಪ್ರಸಾರ ಮಾಡಿದ ಕಟ್ಟಕಡೆಯ ಮುಸ್ಲಿಮ್ ರಾಜಕುಮಾರ ಅವನಾಗಿದ್ದ.''[೨]

ಕೇಂಬ್ರಿಡ್ಜ್ ಹಿಸ್ಟರಿ ಆಫ್ ಇಂಡಿಯಾ ಸಂಪುಟಗಳ ಸಂಪಾದಕ ಹಾಗೂ ಇತಿಹಾಸಕಾರ ಡಾಡ್ವೆಲ್ ಟಿಪೂವಿನ ಕುರಿತು ಹೀಗೆ ಬರೆಯುತ್ತಾನೆ. ''ಟಿಪ್ಪು ಕ್ರೂರ ಭಾವೋದ್ರೇಕಗಳ ಹಾಗೂ ಗಗನಗಾಮಿ ಮಹತ್ವಾಕಾಂಕ್ಷೆಗಳ

[illegible]

[illegible]

[illegible]

ವ್ಯಕ್ತಿಯಾಗಿದ್ದ. ತನ್ನ ಅಧಿಕಾರದ ಬಲದ ಬಗೆಗಿನ ತನ್ನದೆ ಆದ ಅಂದಾಜುಗಳಿಗೆ ಅವನ ಸಾಮರ್ಥ್ಯಗಳು ಸರಿದೊರೆಯಾಗಿರಲಿಲ್ಲ. ಅವನು ದೃಢವಾದ ನಂಬಿಕೆಯ ಮುಸಲ್ಮಾನನಾಗಿ ಹಿಂದೂಗಳ ಜನ ಸಮುದಾಯದ ಮೇಲೆ ಆಳ್ವಿಕೆಯನ್ನು ನಡೆಸಿದ. ಅವರ ಸಾರ್ವಭೌಮರನ್ನು ಅವರ ತಂದೆ ಅಧಿಕಾರ ವಂಚಿತರನ್ನಾಗಿಸಿದ್ದ. ಅವರನ್ನು (ಅಂದರೆ ಆ ಹಿಂದೂ ಸಮುದಾಯವನ್ನು) ಅವನು ಕ್ರೂರವಾಗಿ ಹಿಂಸಿಸಿದ್ದ. ಮೈಸೂರಿನ ಸುತ್ತಮುತ್ತಲಿನ ಪ್ರದೇಶದ ಜನರು ಅವನ ವಿಷಯದಲ್ಲಿ ಅಸಹ್ಯ ಪಟ್ಟುಕೊಳ್ಳುತ್ತಿದ್ದರು. ಅವನ ರಾಜ್ಯದಲ್ಲಿ ಬ್ರಿಟಿಷರು ಸಮೃದ್ಧಿಯ ಲಕ್ಷಣಗಳನ್ನು ಕಂಡಿದ್ದರಾದರೂ, ಅವು ಖಂಡಿತವಾಗಿಯೂ ಅವನ ಪ್ರೇರಣೆಯ ಫಲವಾಗಿ ಆದಂಥವೇನೂ ಆಗಿರಲಿಲ್ಲ. ಅವನ ತಂದೆ ಬುದ್ಧಿವಂತನೂ, ಧರ್ಮ ಸಹಿಷ್ಣುತೆಯ ಗುಣವುಳ್ಳವನೂ ಆಗಿದ್ದ. ಇವನ ಸ್ವಭಾವ ಅವನದಕ್ಕೆ ತದ್ವಿರುದ್ಧವಾದುದಾಗಿತ್ತು.''[೩]

ಇದೇ ದಾಟಿಯಲ್ಲಿ ಲೆವಿನ್. ಬಿ. ಬೌರಿಂಗ್ ಸಹ ಈ ರೀತಿ ಬರೆಯುತ್ತಾರೆ. ''ಧಾರ್ಮಿಕ ಅಂದಾಭಿಮಾನ, ಅಂತರಾಳದ ಕ್ರೌರ್ಯ ಮತ್ತು ನಿರಂಕುಶ ಪ್ರಭುತ್ವ ಇವುಗಳ ಒತ್ತಡಕ್ಕೊಳಗಾಗಿ, ತನ್ನ ಸೇಡಿನ ಭಾವನೆಗಳಿಗಾಗಿ ಸಾವಿರಾರು ಜೀವಗಳನ್ನು ಬಲಿಕೊಡುವ ಬಗ್ಗೆ ಅಷ್ಟಾಗಿ ಯೋಚಿಸದೇ ಹೋದ. ಅವನು ಘಜ್ನಿಯ ಮಹಮ್ಮದ್, ನಾದಿರ್ ಷಾಹ ಮತ್ತು 'ಖೂನಿ' (ಕೊಲೆಗಾರ) ಎಂಬ ಉಪನಾಮವನ್ನು ಹೊಂದಿದ್ದ ದೆಹಲಿಯ ಪಠಾಣ ಚಕ್ರವರ್ತಿ ಅಲ್ಲಾ-ಉದ್-ದೀನ್ ಅವರಿಗೆ ಪ್ರತಿಸ್ಪರ್ಧಿಯೇ ಆಗಿದ್ದ. ಇವರೆಲ್ಲರೂ ತಮ್ಮ ಅಪ್ಪಣೆಯಂತೆ ನಡೆಸಲಾದ ನಾಸ್ತಿಕರ ಕಗ್ಗೊಲೆಯ ಸಂಖ್ಯೆಯಿಂದಾಗಿ ಪ್ರಸಿದ್ಧರಾಗಿದ್ದಾರೆ. ಅವನು ನಡೆಸಿದ ಹಿಂಸಾಚಾರಗಳ ಫಲವಾಗಿ ಉಂಟಾದ ಕ್ರೌರ್ಯವೇನೇ ಇರಲಿ, ಧರ್ಮಕ್ಕಾಗಿ ತೋರಿದ ಈ ಅತ್ಯುತ್ಸಾಹಕ್ಕಾಗಿ ದಕ್ಷಿಣ ಭಾರತದದಲ್ಲಿನ ಅವನ ಸಹಧರ್ಮಿಯರು ಟಿಪ್ಪು ಸುಲ್ತಾನನ ಹೆಸರನ್ನೂ ಬಹುಕಾಲದಿಂದಲೂ ಗೌರವದಿಂದ ಸ್ಮರಿಸುತ್ತಾ ಇದ್ದಾರೆ. ತಮ್ಮ ಚೇತ್ಕಾರದಿಂದ ಗಗನವನ್ನು ಪ್ರಸಾರ ಮಾಡುವ ಪ್ರಾಮಾಣಿಕ ಅಭೀಪ್ಸೆಯಿಂದ ಚೋದಿತನಾಗಿ ಆ ವ್ಯಕ್ತಿ ಅಂಥ ಅಪರಾಧಗಳನ್ನೆಸಗಿರಬಹುದೆಂಬ ಭಾವನೆಯಿಂದ ಆದೆಷ್ಟು ಸುಲಭವಾಗಿ ಕ್ಷಮಿಸಿ ಬಿಡಲಾಗುತ್ತದೆ.''[೪]

ಬ್ರಿಟಿಷರನ್ನು ವಿರೋಧಿಸಿದವರ ಬಗೆಗಿನ ವಸಾಹತುಶಾಹಿ ಪೂರ್ವಾಗ್ರಹ ಮತ್ತು ಆಕ್ರೋಶಗಳು ಅವರ ಬರಹಗಳಲ್ಲಿ ಪ್ರತಿಫಲಿಸಿವೆ. ಬೀಟ್ಸನ್, ಬುಕಾನನ್, ಬೌರಿಂಗ್, ಪುಲ್ಲಾರ್‌ಟನ್, ಮೆಕಂಜಿ, ಸಿ, ರೋಸ್, ಸ್ಟಿವರ್ಡ್, ಕ್ಯಾಂಪ್‌ಬೆಲ್, ಡಾಡ್‌ವೆಲ್. ಎಚ್.ಜಿ. ವೆಲ್ಸ್, ಮಾರ್ಟಿನೂ, ಗ್ಲೀಗ್, ರೈಸ್, ಹಂಡರ್‌ಸನ್, ಮನ್ರೋ, ಸಿ.ಎ.ಎಚ್. ಫಿಲಿಪ್ಸ್, ರಾಬ್ಬನ್ ಮತ್ತು ಹಲವಾರು ಬ್ರಿಟಿಷ್ ಬರಹಗಾರರು ಟಿಪ್ಪುವನ್ನು ಮತಾಂದ, ಮೂಲಭೂತವಾದಿ ಮತ್ತು ಕ್ರೂರಿಯೆಂದು ಬಣ್ಣಿಸಿದ್ದಾರೆ. ಡಿರೋಮ್, ಜಾನ್ ಮೊಲ್ಕಮ್ ಮೂರು, ಗೊಡಾಲ್ ಮತ್ತು ಕಿರ್ಕ್ ಪ್ಯಾಟ್ರಿಕ್ ಮುಂತಾದವರು, ಟಿಪ್ಪು ಒಳ್ಳೆಯ, ಸಮರ್ಥ ಆಡಳಿತಗಾರನೆಂಬ ನಿಲುವು ವ್ಯಕ್ತಪಡಿಸಿದ್ದಾರೆ.[೫]

ಇನ್ನೊಂದು ನೆಲೆಯಲ್ಲಿ ಸೃಷ್ಟಿಯಾದ ಚರ್ಚೆಯಲ್ಲಿ ಹೈದರಾಲಿ ಹಾಗೂ ಟಿಪ್ಪೂ ಬಗ್ಗೆ ಪ್ರಶಂಸೆಯ ಮಾತುಗಳನ್ನು ಕಾಣಬಹುದು. ಹೈದರಾಲಿ ವ್ಯಕ್ತಿತ್ವದ ನಿರೂಪಣೆಯಲ್ಲಿ ಅವನನ್ನು ಪೂರ್ವಾಗ್ರಹದಿಂದ ಚಿತ್ರಿಸಿದ್ದರೂ ಕೆಲವು ಬ್ರಿಟಿಷ್ ಅಧಿಕಾರಿಗಳಿಗೆ ಅವನೊಬ್ಬ ಬಲಿಷ್ಠ ನಾಯಕನೆಂಬ ಅರಿವಿತ್ತು. ಇದು ೧೭೮೩ರ

ಅನ್ಯುಯಲ್ ರೆಜಿಸ್ಟರ್‌ನಲ್ಲಿ ಪ್ರಕಟವಾದ ಒಂದು ಲೇಖನದಿಂದ ತಿಳಿಯುತ್ತದೆ. ಪೌರ್ವಾತ್ಯ ರಾಷ್ಟ್ರಗಳು ಕಂಡ ಅನೇಕ ಕ್ರೂರ ರಾಜರುಗಳ ಸಾಲಿನಿಂದ ಹೈದರಾಲಿಯನ್ನು ಬೇರ್ಪಡಿಸಿ ಅವನನ್ನು ಜಾಗತಿಕ ಮಟ್ಟದಲ್ಲಿ ಶ್ರೇಷ್ಠನಾಯಕರ ಪಂಕ್ತಿಗೆ ಸೇರಿಸುವ ಕೆಲಸವನ್ನು ಮಾಡಿದೆ.[೬]

ಜವಹರಲಾಲ್ ನೆಹರು, ತಮ್ಮ ''ದಿ ಡಿಸ್ಕವರಿ ಆಫ್ ಇಂಡಿಯಾ'' ಕೃತಿಯಲ್ಲಿ ೧೮ನೇ ಶತಮಾನದ ಭಾರತದ ಸ್ಥಿತಿಗತಿಗಳನ್ನು ಚಿತ್ರಿಸುತ್ತ ಮೈಸೂರಿನ ಸುಲ್ತಾನರ ಬಗ್ಗೆ ಹೀಗೆ ವಿವರಿಸುತ್ತಾರೆ. ಹೈದರಾಲಿ ಮತ್ತು ಟಿಪ್ಪು ಸುಲ್ತಾನರಿಬ್ಬರೂ ಬ್ರಿಟಿಷರ ವಸಾಹತುಶಾಹಿ ವಿರುದ್ಧ ಹೋರಾಡಿ ಈಸ್ಟ್ ಇಂಡಿಯಾ ಕಂಪನಿ ಸ್ಥಾಪಿಸ ಹೊರಟ ಪ್ರಭುತ್ವವನ್ನು ಸಂಪೂರ್ಣ (ದಕ್ಷಿಣ ಭಾರತದಲ್ಲಿ) ನಿರ್ನಾಮ ಮಾಡುವ ಹಂತಕ್ಕೆ ತಲುಪಿ, ಬ್ರಿಟಿಷರಿಗೆ ವಿಪರೀತವಾದ ಯಾತನೆಯನ್ನು ತಂದೊಡ್ಡಿದರು. ಭಾರತದ ಇತಿಹಾಸದಲ್ಲಿ ಹೈದರಾಲಿ ಒಬ್ಬ ಅಸಾಮಾನ್ಯ ವ್ಯಕ್ತಿಯಾಗಿ ಸ್ಥಾನವನ್ನು ಅಲಂಕರಿಸುತ್ತಾನೆ. ಅವನು ಒಂದು ರೀತಿಯ ರಾಷ್ಟ್ರೀಯ ಧ್ಯೇಯಗಳೊಂದಿಗೆ ಮುಂದಾಲೋಚನೆಗಳನ್ನಿಟ್ಟುಕೊಂಡ ಆ ಕಾಲದ ಒಬ್ಬ ರಾಜ. ಅವನ ಕಾಲದಲ್ಲಿ ಭಾರತದ ಇನ್ನುಳಿದ ಭಾಗವನ್ನಾಳಿದ ರಾಜರುಗಳಿಗೆ ಹೋಲಿಸಿದರೆ ಮೈಸೂರು ಪ್ರಾಂತಕ್ಕೆ ಬ್ರಿಟಿಷರ ನೌಕಪಡೆಯಿಂದ ಬಂದೊಂದಗಬಹುದಾದ ಬೆದರಿಕೆಯನ್ನು ತಡೆಗಟ್ಟಲು ನೌಕಾನೆಲೆಯನ್ನು ಕರಾವಳಿ ತೀರದಲ್ಲಿ ಸ್ಥಾಪಿಸುವ ಪ್ರಾಮುಖ್ಯತೆಯನ್ನು ಆಲೋಚಿಸಿದ್ದನು. ಅವರನ್ನು ಹತ್ತಿಕ್ಕಲು ಅವನು ಜಂಟಿ ಕಾರ್ಯಾಚರಣೆಯನ್ನು ಸನ್ನದ್ಧುಗೊಳಿಸಿದನು. ಇವನು ಸ್ಥಾಪಿಸಿದ ನೌಕಾದಳದ ಶಕ್ತಿಯನ್ನು ಅವನ ಮಗನಾದ ಟಿಪ್ಪು ಸುಲ್ತಾನನು ಮತ್ತಷ್ಟು ವೃದ್ಧಿಸಿದನು. ಟಿಪ್ಪು ಬ್ರಿಟಿಷರಿಂದ ಆಗುವ ಬೆದರಿಕೆಯ ಸ್ವರೂಪವನ್ನು ರಾಯಭಾರಿಗಳ ಮೂಲಕ ನೆಪೋಲಿಯನ್ ಬೋನಪಾರ್ಟನಿಗೂ ಮತ್ತು ಕಾನ್‌ಸ್ಟಾಂಟಿನೋಪಲ್ ಸುಲ್ತಾನನಿಗೂ ತಲುಪಿಸಿದ್ದನು''.[೭]

ಇದನ್ನೆ ಉದ್ದರಿಸಿ ೧೯೬೭ರಲ್ಲಿ ತಾರಚಂದ್‌ರವರು ''ಹಿಸ್ಟರಿ ಆಫ್ ದಿ ಫ್ರೀಡಮ್ ಮೂವ್‌ಮೆಂಟ್ ಆಫ್ ಇಂಡಿಯಾ''ದಲ್ಲಿ ಹೀಗೆ ವಿವರಿಸಿದರು. ''ಮೈಸೂರಿನ ಸುಲ್ತಾನರಾದ ಹೈದರಾಲಿ ಮತ್ತು ಟಿಪ್ಪು ಸುಲ್ತಾನರು ಕನ್ನಡ ನಾಡಿನ ಉಳಿವಿಗಾಗಿ ಹೋರಾಡಿ ತಮ್ಮ ಶಕ್ತಿಯನ್ನು ಪ್ರದರ್ಶಿಸಿದರು. ಬ್ರಿಟಿಷ್ ಮತ್ತು ಅವರ ಸ್ನೇಹಿತರನ್ನು ಭೇದಿಸಿದರು. ಅವರೊಂದಿಗೆ ನಾಲ್ಕು ಮೈಸೂರು ಯುದ್ಧಗಳನ್ನು ಸಾರಿದರು. ನಾಲ್ಕನೆಯ ಯುದ್ಧದಲ್ಲಿ ಟಿಪ್ಪು ತನ್ನ ಪ್ರಭಾವವನ್ನು ಯಶಸ್ವಿಯಾಗಿ ಪ್ರದರ್ಶಿಸಿದನು. ಅವನ ಮಂತ್ರಿಗಳೇ ಅವನಿಗೆ ಮೋಸವೆಸಗಿದರು. ಆದರೂ ಟಿಪ್ಪು ಶರಣಾಗಲು ಒಪ್ಪದೆ ಧೈರ್ಯದಿಂದ ತನ್ನ ಶ್ರೀರಂಗಪಟ್ಟಣ ಕೋಟೆಯನ್ನು ಉಳಿಸಿಕೊಳ್ಳಲು ಕೊನೆಯವರೆಗೂ ಹೋರಾಡಿ ರಣರಂಗದಲ್ಲಿಯೇ ಕೊನೆಯ ಉಸಿರಿನವರೆಗೂ ಹೋರಾಡಿ ಹುತಾತ್ಮನಾದನು.''[೮]

ನೆಹರು ಮತ್ತು ತಾರಚಂದರ ಅಭಿಪ್ರಾಯಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಹೈದರ್ ಮತ್ತು ಟಿಪ್ಪು ಭಾರತದ ಚರಿತ್ರೆಯ, ಅದರಲ್ಲೂ ಮುಖ್ಯವಾಗಿ ರಾಷ್ಟ್ರೀಯ ಚರಿತ್ರೆ ಕಥನಶಾಸ್ತ್ರದಲ್ಲಿ ಒಂದು ಗೌರವದ ಸ್ಥಾನವನ್ನು ಅಲಂಕರಿಸಿದ್ದರು ಎಂಬುದು ಸ್ಪಷ್ಟವಾಗುತ್ತದೆ.

ಆದರೆ ಈ ಸಂಬಂಧವಾಗಿ ತೀರಾ ಆತಂಕವಾಗಿ ನಿಲುವು ವ್ಯಕ್ತವಾಗಿರುವುದು ನವೋದಯ ಆರಂಭಕಾಲದ ರಾಷ್ಟ್ರೀಯವಾದಿ ಚರಿತ್ರೆಗಾರರ ಬರವಣಿಗೆಗಳಲ್ಲಿ. ವಸಾಹತುವಾದಿಗಳ 'ದುರಾಕ್ರಮಣ' ಮತ್ತು 'ಪುನರ್ ಸ್ಥಾಪನೆ'

[illegible]

ಪರಿಕಲ್ಪನೆಗಳನ್ನು ಯಾವುದೇ ಮಾತಿಲ್ಲದೆ ಇವರು ಒಪ್ಪಿಕೊಂಡಿದ್ದಾರೆ. ತಮ್ಮದೇ ಕಾರಣಗಳಿಂದಾಗಿ ಅವರು ಈ ಧೋರಣೆ ತಳೆದಂತಿದೆ. ವಸಾಹತುವಾದಿಗಳ 'ಒಡೆದು-ಆಳುವ' ಷಡ್ಯಂತ್ರವನ್ನು ಅವರು ಅರ್ಥಮಾಡಿಕೊಂಡಂತಿಲ್ಲ. ಮಿಗಿಲಾಗಿ ವಸಾಹತುವಾದದ ಅಮಲಿನಿಂದ ಅವರಿಗೆ ಹೊರ ಬರಲು ಆಗಲಿಲ್ಲ. ಟಿಪ್ಪುವಿನ, ಮೈಸೂರು ಪತನದ ಬಳಿಕ ಸಿಂಹಾಸನವನ್ನು ಒಡೆಯರ್ ವಂಶಸ್ತರಿಗೆ ಮರುಳಿಸಲಾಯಿತು. ಈ ಕಾರ್ಯ ಮಾಡಿದಕ್ಕಾಗಿ ಬ್ರಿಟಿಷರನ್ನು ಅಭಿನಂದಿಸಬೇಕು ಎಂಬ ನಿಲುವಿದ್ದಂತೆಯೂ ಕಾಣುತ್ತದೆ. ಒಡೆಯರ್ ಮನೆತನವನ್ನು 'ಹಿಂದೂ ಧರ್ಮದ ರಕ್ಷಕರನ್ನಾಗಿ ನೋಡಲಾಯಿತು. ಈ ರೀತಿಯ ಕೋಮುವಾದಿ ವಿಶ್ಲೇಷಣೆಯನ್ನು ಹೈದರ್ ಮತ್ತು ಟಿಪ್ಪುವಿನ ಬಗೆಗೆ ಮಾಡಲಾಗಿದೆ.[೯]

ಒಬ್ಬಬ್ಬರೂ 'ಟಿಪ್ಪು ಸಮಾಜವಾದಿಯಾಗಿದ್ದ, ಸಮಾಜವಾದಕ್ಕಿಂತಲೂ ಉನ್ನತ ಪರಿಕಲ್ಪನೆ ಅವನದಾಗಿತ್ತು. ಏಕೆಂದರೆ ಸಮಾಜವಾದಿ ಕ್ರಾಂತಿ ಒಂದು ಹಂತದಲ್ಲಿ ಸರ್ವಾಧಿಕಾರಿಯಾಗುವ, ಸಾಧ್ಯತೆ ಇರುತ್ತದೆ. ಆದರೆ ಸರ್ವಾಧಿಕಾರಿಯಾಗದೆ ಟಿಪ್ಪು ಸಮಾಜವಾದಿ ಸಮಾಜ ನಿರ್ಮಾಣ ಮಾಡಲು ಪ್ರಯತ್ನಿಸಿದನೆಂದು ಬರೆಯುತ್ತಾರೆ. ಹಾಗೆಯೇ ಟಿಪ್ಪು ಜಾತ್ಯಾತೀತ, ಜನತಂತ್ರವಾದಿ, ಏಕೆಂದರೆ ಜಾಕೋಬಿನ್‌ಕ್ಲಬ್‌ನ ಸ್ಥಾಪನೆಗೆ ನೆರವಾಗಿದ್ದ ಮತ್ತು ತನನ್ನು ತಾನು 'ನಾಗರಿಕ ಟಿಪ್ಪು' (citizentippu) ಎಂದು ಕರೆದುಕೊಂಡ, ಎಂದೆಲ್ಲಾ ಬರೆದಿರುವುದೂ ಉಂಟು ಆದರೆ ಈ ರೀತಿಯ ಚರಿತ್ರೆಯೂ ಅಪಾಯಕಾರಿ ಎನ್ನದೆ ವಿಧಿಯಿಲ್ಲ, ಇದರಿಂದ ಟಿಪ್ಪುವಿನ ಸುತ್ತ ಪ್ರಭಾವಳಿಯೊಂದನ್ನು ನಿರ್ಮಿಸಲೆತ್ನಿಸುವ ಈ ಬರಹಗಾರರ ಪ್ರಯತ್ನಗಳಿಗೆ ಸತ್ಯವೇ ಅಡಚಣೆಯಾಗಿ ಬಿಡುವ ಸಾಧ್ಯತೆ ಇದೆ.

ಟಿಪ್ಪು ಚಾರಿತ್ರಿಕ ವ್ಯಕ್ತಿಯೆಂಬ ವಿಶ್ಲೇಷಣೆಗಳು ವ್ಯಕ್ತಿನಿಷ್ಠತೆಯ ಅಪಾಯಕ್ಕೆ ಗುರಿಯಾಗುತ್ತವೆ. ಚಾರಿತ್ರಿಕ ವ್ಯಕ್ತಿಯನ್ನು ಎಲ್ಲಾ ಒಳ್ಳೆಯ ಅಥವಾ ಕೆಟ್ಟ ಮೌಲ್ಯಗಳ ಮೊತ್ತವೆಂದು ಬಣ್ಣಿಸುವುದು ಚರಿತ್ರೆಗೆ ಮತ್ತು ಮುಂದಿನ ಪೀಳಿಗೆಗೆ ಬಗೆಯುವ ಅಪಚಾರ ಮತ್ತು ಮೋಸ. ಆಯಾ ಚಾರಿತ್ರಿಕ ಸಂದರ್ಭಗಳ ಹಿನ್ನೆಲೆಯಲ್ಲಿ ವ್ಯಕ್ತಿಗಳನ್ನು, ಘಟನೆಗಳನ್ನು ಪರೀಕ್ಷಿಸುವುದು. ವಿಶ್ಲೇಷಿಸುವುದು ಸೂಕ್ತ. ಟಿಪ್ಪುವು ತನ್ನ ಜೀವಿತಾವಧಿಯಲ್ಲಿ ಒಂದೇ ತೆರನಾಗಿರಲಿಲ್ಲ, ಪರಿಸ್ಥಿತಿಯ ಒತ್ತಡಗಳಿಗೆ ಸಿಲುಕಿ ತನ್ನ ಹಲವು ನಿಲುವುಗಳನ್ನೂ ಬದಲಾಯಿಸಿಕೊಂಡದ್ದೂ ಉಂಟು. ರಾಷ್ಟ್ರೀಯತೆ, ಜಾತ್ಯಾತೀತತೆ, ಸಮಾಜವಾದ ಮುಂತಾದ ಪರಿಕಲ್ಪನೆಗಳು ಆ ಸಂದರ್ಭದಲ್ಲಿ ಇರಲೇ ಇಲ್ಲ. ಟಿಪ್ಪು ಅದೆಲ್ಲಾ ಆಗಿದ್ದ ಎನ್ನುವುದು. ಅತಿರೇಕದ ಅಭಿಪ್ರಾಯಗಳಾಗುತ್ತವೆ.[೧೦]

ಈ ಎಲ್ಲಾ ವಾದ, ವಿವಾದಗಳು ಮೈಸೂರು ಸುಲ್ತಾನರ ವ್ಯಕ್ತಿತ್ವ ನಿರೂಪಣೆಯ ಸುತ್ತ ಆವರಿಸಿಕೊಂಡಿದ್ದರೂ, ಅವರು ಹದಿನೆಂಟನೆಯ ಶತಮಾನದಲ್ಲಿ ತಮ್ಮ ಸ್ಥಾನವನ್ನು ಭದ್ರಗೊಳಿಸಿ ಮತ್ತು ಅಲಂಕರಿಸಿ ನ್ಯಾಯ ಸಮ್ಮತವಾಗಿ ತಮ್ಮ ಪ್ರಭುತ್ವವನ್ನು ಸಮರ್ಥಿಸಿಕೊಳ್ಳಲು ಪ್ರಯತ್ನಗಳ ನಡೆಸಿದ ಬಗ್ಗೆ ಈವರೆಗೆ ಯಾವುದೇ ಚಿಂತನೆ ನಡೆದಿಲ್ಲ. ಸಮಕಾಲೀನ ಭಾರತದಲ್ಲಿ ಎದ್ದಿರುವ ಕೋಮು ಗಲಭೆ ಮತ್ತು ಕೋಮುಶಕ್ತಿಗಳ ವ್ಯಾಪ್ತಿಯನ್ನು ಗಮನದಲ್ಲಿಟ್ಟುಕೊಂಡು ಹದಿನೆಂಟನೆಯ ಶತಮಾನದ ಘಟನಾವಳಿಗನುಗುಣವಾಗಿ ಸುಲ್ತಾನರನ್ನು ವಿಶ್ಲೇಷಿಸುವುದು ಸೂಕ್ತ. ಇದರ ಜೊತೆಗೆ ಟಿಪ್ಪು ಉಗಮದ ಜೊತೆ ಜೊತೆಗೆ, ಹೊಂದಿಕೊಂಡಿರುವ ಆ ಕಾಲದ ಮಾಜಿಕ, ಆರ್ಥಿಕ, ರಾಜಕೀಯ (ಬಿಕ್ಕಟ್ಟು) ವಾತಾವರಣವನ್ನು ಗಮನಿಸಬೇಕು.[೧೧]

ಭಾರತದಲ್ಲಿ ಬ್ರಿಟಿಷರು ವಸಾಹತುಶಾಹಿ ಆಳ್ವಿಕೆಯನ್ನು ನಿರಂತರವಾಗಿ ಸಮರ್ಥಿಸಿಕೊಳ್ಳಲು ಇಲ್ಲಿಯ ರಾಜರುಗಳನ್ನು ಏಕಮುಖವಾಗಿ ಅಸಮರ್ಥರು, ನ್ಯಾಯ ಸಮ್ಮತವಲ್ಲದವರು ಮತ್ತು ಅಧಿಕಾರದಾಹದಿಂದ ಪರಸ್ಪರ ಕಚ್ಚಾಡಿಕೊಳ್ಳಲು ಮಾತ್ರ ಅರ್ಹರು ಎಂದು ಬಣ್ಣಿಸಿದರು. ಈ ಬರವಣಿಗೆಗಳಲ್ಲಿ ಹಿಂದೆ, ಹೈದರಾಲಿ ಹಾಗೂ ಟಿಪ್ಪುವನ್ನು ಇಂಥ ಒಂದು ವರ್ಗಕ್ಕೆ ಸೇರಿದವರೆಂದು ಖಂಡಿಸಿ ಅದರ ಬಗ್ಗೆ ಕಪೋಲಕಲ್ಪಿತ ವ್ಯಕ್ತಿ, ಚಿತ್ರವನ್ನು ಸೃಷ್ಟಿಸಲಾಯಿತು. ಈ ಕೃತಕ ಚಿತ್ರಣದಲ್ಲಿ ಬ್ರಿಟಿಷ್ ಇತಿಹಾಸಕಾರರು ಉದ್ದೇಶಪೂರ್ವಕವಾಗಿ ಹೈದರಾಲಿ-ಟಿಪ್ಪು ಮೈಸೂರು ಪ್ರಾಂತಕ್ಕೆ ಹೊರಗಿನವರೆಂದೂ ಮತ್ತು ಅವರ ಆಡಳಿತವು ಪ್ರಾದೇಶಿಕ ಸಂಸ್ಕೃತಿಯ ಮೇಲೆ ಹೇರಿದ ವಿದೇಶಿ ಪ್ರಯತ್ನ ಎಂದೂ ಟೀಕಿಸಿದರು. ಬ್ರಿಟಿಷ್ ಪ್ರಭುತ್ವ ಸ್ಥಾಪನೆಗೆ ಈ ಬಗೆಯ ಆರೋಪಗಳು ಅನಿವಾರ್ಯವಾಗಿದ್ದವು.[೧೨]

ಅಡಿ ಟಿಪ್ಪಣಿಗಳು

೧. ಚಂದ್ರಶೇಖರ್, ಎಸ್., ವಸಾಹತುಕಾಲೀನ ಕರ್ನಾಟಕ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೬, ಪುಟ-೨೨

೨. ಮಾರ್ಕ್ಸ್ ವಿಲ್ಕ್ಸ್ ಎಂಡ್ ಮುರ್ರೆ ಹ್ಯಾಮಿ, ಹಿಸ್ಟಾರಿಕಲ್ ಸ್ಕೆಚ್ಚಸ್ ಆಫ್ ಸೌತ್ ಇಂಡಿಯ: ಹಿಸ್ಟರಿ ಫ್ರಾಮ್ ದಿ ಅರ್ಲಿಯೆಸ್ಟ್ ಟೈಮ್ಸ್ ಟು ದಿ ಲಾಸ್ಟ್ ಮಹಮ್ಮದನ್ ಡೈನಾಸ್ಟಿ, ನಾಲ್ಕು ಸಂಪುಟಗಳು, ಕಾಸ್ಮೊ ಪಬ್ಲಿಕೇಶನ್, ನ್ಯೂಡೆಲ್ಲಿ, ೧೯೮೦, ಪುಟ-೭೬೭

೩. ಡಾಡ್ವೆಲ್ ಎಚ್.ಎಚ್., ಕೇಂಬ್ರಿಡ್ಜ್ ಹಿಸ್ಟರಿ ಆಫ್ ಇಂಡಿಯಾ, ಸಂಪುಟ-೫, ಕೇಂಬ್ರಿಡ್ಜ್ ವಿಶ್ವವಿದ್ಯಾಲಯ, ೧೯೨೯, ಪುಟ-೩೪೨

೪. ಬೌರಿಂಗ್ ಲೆವಿನ್ ಬಿ., ಹೈದರಾಲಿ ಎಂಡ್ ಟಿಪ್ಪು ಸುಲ್ತಾನ್, ಡೆಲ್ಲಿ, ಪುಟ-೨೨೬

೫. ಚಂದ್ರಶೇಖರ್ ಎಸ್. ಪೂರ್ವೋಕ್ತ, ೨೦೦೬, ಪುಟ-೨೩

೬. ಬಾರ್ಕೂರು ಉದಯ, ಹೈದರಾಲಿ-ಟಿಪ್ಪು: ಇತಿಹಾಸ ಕಥನ, ಮಾನವತಾ ವೇದಿಕೆ, ಮಂಗಳೂರು, ೨೦೦೩, ಪುಟ-೧೬

೭. ಜವಾಹರ್‌ಲಾಲ್ ನೆಹರು, ದಿ. ಡಿಸ್ಕವರಿ ಆಫ್ ಇಂಡಿಯಾ, ೭ನೇ ಆವೃತ್ತಿ, ಲಂಡನ್, ೧೯೫೬ ಪುಟ-೨೭೨-೭೩

೮. ತಾರಾಚಂದ್, ಹಿಸ್ಟರಿ ಆಫ್ ದಿ ಫ್ರೀಡಂ ಮೂವ್ ಮೆಂಟ್ ಆಫ್ ಇಂಡಿಯಾ, ಡೆಲ್ಲಿ, ೧೯೬೫ ಸಂಪುಟ-೧ ಪುಟ-೨೨೬-೨೭

೯. ಚಂದ್ರಶೇಖರ್ ಎಸ್., ಪೂರ್ವೋಕ್ತ, ೨೦೦೬, ಪುಟ-೨೪

೧೦. ಚಂದ್ರಶೇಖರ್ ಎಸ್., ಪೂರ್ವೋಕ್ತ, ೨೦೦೬, ಪುಟ-೨೬

೧೧. ಬಾರ್ಕೂರು ಉದಯ, ಪೂರ್ವೋಕ್ತ, ೨೦೦೩, ಪುಟ-೨೦

೧೨. ಬಾರ್ಕೂರು ಉದಯ, ಪೂರ್ವೋಕ್ತ, ೨೦೦೩, ಪುಟ-೨೨

* * *

[illegible]

[illegible]

[illegible]

ಅಧ್ಯಾಯ ಎರಡು

ಬೆಂಗಳೂರಿನ ಚಾರಿತ್ರಿಕ ಹಿನ್ನೆಲೆ

ಅಧ್ಯಾಯ ಎರಡು

ಬೆಂಗಳೂರಿನ ಚಾರಿತ್ರಿಕ ಹಿನ್ನೆಲೆ

ವಿಜಯನಗರದ ಅವನತಿಯ ತರುವಾಯ ಕರ್ನಾಟಕದ ಚರಿತ್ರೆಯಲ್ಲಿ ಅನೇಕ ನಗರಗಳು ಪ್ರಾಮುಖ್ಯತೆ ಪಡೆದವು. ಈ ನಗರಗಳ ಸಾಲಿನಲ್ಲಿ ಬೆಂಗಳೂರು ಪ್ರಮುಖವಾದುದು. ವಿಜಯನಗರ ಆಳ್ವಿಕೆ ಸಂದರ್ಭದಲ್ಲಿ ಅಸ್ತಿತ್ವದಲ್ಲಿದ್ದರೂ ನಂತರದ ಅವಧಿಯಲ್ಲಿ ಸ್ವತಂತ್ರ ಘಟಕವಾಗಿ ಪ್ರಮುಖ ನಗರವಾಗಿ ಅಭಿವೃದ್ಧಿಯನ್ನು ಹೊಂದಿತ್ತು. ನಗರವು ದಖ್ಖನ್ ಪ್ರಸ್ಥಭೂಮಿ. ನೀಲಗಿರಿ ಬೆಟ್ಟಗಳ ಸಾಲು ಮತ್ತು ಬಯಲು ನಾಡು ಸೀಮೆಗಳ ಅಂಚಿನಲ್ಲಿದೆ. ಪ್ರಾಚೀನ ಕಾಲದಿಂದಲೂ ವ್ಯಾಪಾರ ವಹಿವಾಟುಗಳಿಗಾಗಿ ಇರುವ ಮುಖ್ಯ ಮಾರ್ಗಗಳು ಇಲ್ಲಿ ಸಂಧಿಸುತ್ತವೆ. ನಾಡಿನ ದಕ್ಷಿಣದಿಂದ ಉತ್ತರಕ್ಕೆ ಮತ್ತು ಪಶ್ಚಿಮಕ್ಕೆ ಚಲಿಸುವ ಮಾರ್ಗಗಳು ಬೆಂಗಳೂರು ನಗರಕ್ಕೆ ಸಂಧಿಸಿ ಮುನ್ನೆಡೆಯುತ್ತವೆ. ಬದಲಾದ ರಾಜಕೀಯ ವ್ಯವಸ್ಥೆ ಹಾಗೂ ಯುದ್ಧ ತಂತ್ರಗಳಿಂದಾಗಿ ನೈಸರ್ಗಿಕವಾಗಿ ರಕ್ಷಣೆಯನ್ನು ಒದಗಿಸುತ್ತಿದ್ದ ಬೆಟ್ಟ ಹಾಗೂ ಬೆಟ್ಟ ಕಾಡುಗಳಲ್ಲಿ ಅರಸರು ಮಧ್ಯಕಾಲದಲ್ಲಿ ತಮ್ಮ ರಾಜಧಾನಿಯನ್ನು ನಿರ್ಮಿಸುತ್ತಿದ್ದುದು ಹೆಚ್ಚಿನ ಸಂಖ್ಯೆಯಲ್ಲಿ ಕಂಡು ಬರುತ್ತದೆ. ಮುಖ್ಯವಾಗಿ ಸಾಮಂತ ಅರಸರು ತಮ್ಮ ರಾಜ್ಯಗಳಲ್ಲಿ ಸಂಚರಿಸುತ್ತಿದ್ದ ವ್ಯಾಪಾರ ಮಾರ್ಗಗಳನ್ನು ನಿಯಂತ್ರಿಸುತ್ತಿದ್ದರು. ತಮ್ಮ ರಾಜ್ಯದ ಸೀಮಿತ ಆದಾಯದ ಜೊತೆಗೆ ಈ ಮಾರ್ಗಗಳನ್ನು ಬಳಸುತ್ತಿದ್ದ ವ್ಯಾಪಾರಿಗಳಿಂದ ಹೆಚ್ಚಿನ ತೆರಿಗೆಯನ್ನು ವಸೂಲಿ ಮಾಡುತ್ತಿದ್ದರು.

ವಿಜಯನಗರೋತ್ತರ ಕಾಲದಲ್ಲಿ ವೃದ್ಧಿಸಿದ ವ್ಯಾಪಾರ ಹಾಗೂ ಔದ್ಯೋಗೀಕರಣಕ್ಕೆ ಸಾಮಂತ ಅರಸರು ಸಂಪೂರ್ಣವಾದ ಹೊಣೆಹೊತ್ತಿದ್ದರು. ವ್ಯಾಪಾರ ಸಂವರ್ಧನೆ ಹಾಗೂ ಔದ್ಯೋಗೀಕರಣದ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಸೂಕ್ತ ಪ್ರದೇಶಗಳಲ್ಲಿ ಇವುಗಳಿಗೆ ಸಹಾಯಕ ವಾಗುವಂತೆ ನಗರವನ್ನು ಭೌಗೋಳಿಕ ಪ್ರದೇಶದಲ್ಲಿ ಆಯ್ಕೆ ಮಾಡಿಕೊಂಡಿರುವುದು ಕಂಡುಬರುವುದು. ೧೬ನೇ ಶತಮಾನದಲ್ಲಿ ಈ ನಗರವು

[illegible]

[illegible]

[illegible]

[illegible]

ನಿರ್ಮಾಣವಾಗಿದೆ ಎಂಬುದಕ್ಕೆ ಸಾಕಷ್ಟು ಪುರಾವೆಗಳಿದ್ದು. ಆ ಹಿನ್ನೆಲೆಯಲ್ಲಿ ರಾಜಕೀಯ ಮತ್ತು ವಾಣಿಜ್ಯ ವೃದ್ಧಿಗಳ ಕಾರಣದಿಂದ ಈ ನಗರವು ನಿರ್ಮಾಣವಾಯಿತು. ಬೆಂಗಳೂರು ಅದು ಸ್ಥಾಪನೆಗೊಂಡ ಆಯಕಟ್ಟಿನ ಸ್ಥಳದಿಂದಾಗಿ ದಕ್ಷಿಣ ಭಾರತದ ದೊಡ್ಡ ನಗರ ಕೇಂದ್ರವಾಗಿ ಬೆಳೆಯಲು ಅನುಕೂಲವಾಯಿತು. ಮತ್ತು ಈ ನಗರವನ್ನು ಆಳಿದ ದೇಶಿ ರಾಜರು ಅದರ ಬೆಳವಣಿಗೆಗೆ ತಮ್ಮದೇ ಕೊಡುಗೆ ನೀಡಿದ್ದಾರೆ.

ಭೌಗೋಳಿಕ ಲಕ್ಷಣ

ಕರ್ನಾಟಕದ ಬಹು ಭಾಗವನ್ನು ಹಿಂದೆ ಮೈಸೂರು ಪ್ರಸ್ಥಭೂಮಿ ಎಂದು ಕರೆಯಲಾಗುತ್ತಿತ್ತು. ದಕ್ಷಿಣ ಕರ್ನಾಟಕ ಪ್ರಸ್ಥಭೂಮಿಯ ಪೂರ್ವ ಭಾಗಕ್ಕೆ ಬೆಂಗಳೂರು ನೆಲೆಯು ಕಂಡುಬರುವುದು. ಈ ನಗರವು ಸಮುದ್ರಮಟ್ಟದಿಂದ ಸರಾಸರಿ ೯೦೦ಮೀಟರ್ ಎತ್ತರದಲ್ಲಿದೆ. ಬೆಂಗಳೂರು ಜಿಲ್ಲೆಯನ್ನು ಆಡಳಿತದ ಅನೂಕೂಲಕ್ಕಾಗಿ ೧೯೮೬ರಲ್ಲಿ ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಾಗಿ ವಿಂಗಡಿಸಲಾಯಿತು. ಇಡೀ ಜಿಲ್ಲೆಯು ೧೨° ೪೯' ಉತ್ತರದಿಂದ ೧೩° ೩೮' ಉತ್ತರ ಅಕ್ಷಾಂಶ ೭೭° ೨೧' ಪೂರ್ವದಿಂದ ೭೭° ೫೦' ಪೂರ್ವರೇಖಾಂಶಗಳ ನಡುವೆ ನೆಲೆಸಿದೆ. ಭಾರತೀಯ ಸರ್ವೆ ಇಲಾಖೆ ರಚಿಸಿರುವ ನಕ್ಷೆಯಲ್ಲಿ ಬೆಂಗಳೂರು ೫೭ಜಿ ಮತ್ತು ೫೭ಎಚ್ ಡಿಗ್ರಿ ನಕ್ಷೆಯಲ್ಲಿ (೧:೨,೫೦,೦೦೦) ಅಳತೆ ಪಟ್ಟಿಯಲ್ಲಿ ಹಂಚಿಕೆಯಾಗಿದೆ.[೧]

ಬೆಂಗಳೂರು ಜಿಲ್ಲೆಯು ಕರ್ನಾಟಕ ರಾಜ್ಯದ ಆಗ್ನೇಯ ಭಾಗದಲ್ಲಿದ್ದು ಆಗ್ನೇಯದಲ್ಲಿ ತಮಿಳುನಾಡು, ದಕ್ಷಿಣದಲ್ಲಿ ಮೈಸೂರು ಜಿಲ್ಲೆ, ನೈರುತ್ಯದಲ್ಲಿ ಮಂಡ್ಯ ಜಿಲ್ಲೆ, ಪಶ್ಚಿಮ ಮತ್ತು ವಾಯುವ್ಯಗಳಲ್ಲಿ ತುಮಕೂರು ಜಿಲ್ಲೆ, ಉತ್ತರ, ಈಶಾನ್ಯ ಮತ್ತು ಪೂರ್ವದಲ್ಲಿ ಕೋಲಾರ ಜಿಲ್ಲೆಯಿಂದ ಸುತ್ತುವರೆದಿದೆ. ಇದರ ಭೌಗೋಳಿಕ ವಿಸ್ತೀರ್ಣ ೮೦೦೫ ಚದರ ಕಿ.ಮೀ. ವಿಸ್ತೀರ್ಣವಾಗಿದೆ.[೨] ಇಂದು ಕರ್ನಾಟಕ ರಾಜ್ಯದ ರಾಜಧಾನಿಯಾಗಿದೆ.

ಬೆಂಗಳೂರು ಪ್ರದೇಶದ ಪ್ರಾಗೈತಿಹಾಸ

ಮಾನವನ ಇತಿಹಾಸವನ್ನು ಪ್ರಮುಖವಾಗಿ ಎರಡು ಮುಖ್ಯ ವಿಭಾಗಗಳನ್ನಾಗಿ ವಿಂಗಡಿಸಲಾಗಿದೆ. ಮೊದಲನೆಯದು ಅಕ್ಷರ ಜ್ಞಾನವಿಲ್ಲದ ಹಂತ ಅಥವಾ ಪ್ರಾಗೈತಿಹಾಸ, ಎರಡನೆಯದು ಅಕ್ಷರ ಜ್ಞಾನವಿದ್ದ ಹಂತ ಅಥವಾ ರಾಜ ಮಹಾರಾಜರ ಕಾಲ ಅಥವಾ ಇತಿಹಾಸ ಕಾಲ.[೩]

ಯಾವುದೇ ಪ್ರದೇಶದ ಇತಿಹಾಸ ಪ್ರಾರಂಭ ಕಾಣುವ ಮುನ್ನ ಆ ಪ್ರದೇಶದಲ್ಲಿ ಪ್ರಾಗೈತಿಹಾಸ ಕುರುಹುಗಳು ಕಂಡುಬರುವುದು ಸಹಜ, ಆಗಿನ ಮಾನವನು ಬಿಟ್ಟುಹೋದ ಮನೆಗಳ ನೆಲೆಗಟ್ಟು, ಅಲ್ಲಿರಬಹುದಾದ ಕಂಬಗುಳಿಗಳು, ತಡಿಕೆ, ಅವಶೇಷಗಳು, ಸುಟ್ಟು ಕರಕಲಾದ ಧಾನ್ಯಗಳು, ಪ್ರಾಣಿಗಳ ಮೂಳೆಗಳು, ಸಮಾಧಿಗಳು, ಸಮಾಧಿಗಳಲ್ಲಿ ಸತ್ತವರಿಗಾಗಿ ಅರ್ಪಿಸಿದ ವಸ್ತುಗಳನ್ನು ತುಂಬಿಟ್ಟ ಪಾತ್ರೆಗಳು ಅಂದಿನ ಮಾನವನ ಜನಜೀವನದ ಒಂದು ಸ್ಥೂಲ ಇತಿಹಾಸ ನಿರೂಪಿಸುವುದು.[೪]

ಬೆಂಗಳೂರು ಜಿಲ್ಲೆಯೂ ಸಹ ಪುರಾತನ ಮಾನವನಿಗೆ ಆಶ್ರಯ ನೀಡಿತ್ತು. ಕ್ರಿ.ಪೂ. ೨೦೦೦ದ ಸುಮಾರಿನ ಶಿಲಾಯುಗದ ಮಾನವರು ಬೆಂಗಳೂರು ನಗರದ ಸಮೀಪ ಜಾಲಹಳ್ಳಿಯಲ್ಲಿ ವಾಸಿಸುತ್ತಿದ್ದರೆಂದು ತಿಳಿದು ಬಂದಿದೆ. ಕಲ್ಲಿನ ಸೂಕ್ಷ್ಮ ಆಯುಧಗಳನ್ನು ಅವುಗಳಿಂದ ತಯಾರಾದ ಮರದ ಆಯುಧಗಳನ್ನು ಉಪಯೋಗಿಸುತ್ತಾ, ಬೇಟೆಯನ್ನು ಮುಖ್ಯ ಕಸುಬನ್ನಾಗಿಸಿ, ಕೊಂದ ಪ್ರಾಣಿಗಳ ಮಾಂಸವನ್ನು ಆಹಾರಕ್ಕಾಗಿಯೂ, ಚರ್ಮವನ್ನು ಉಡುಗೆಗೆ ಉಪಯೋಗಿಸುತ್ತಿದ್ದ ಮಾನವನ ಪುರಾತನ ನೆಲೆಗಳು ಮೂರು ಸ್ಥಳಗಳಲ್ಲಿ ದೊರೆತಿವೆ. ಜಾಲಹಳ್ಳಿಯ ಬಳಿ ಎರೆಡು ನೆಲೆಗಳು, ಆನೇಕಲ್ ರಸ್ತೆಯ ಸಿದ್ಧಾಪುರ ಮತ್ತು ಸೂಡ ಸಂದ್ರಗಳಲ್ಲಿ ತಲಾ ಒಂದೊಂದು ನೆಲೆಗಳಿದ್ದು ಇಲ್ಲೆಲ್ಲಾ ಕಲ್ಲಿನ ಸೂಕ್ಷ್ಮ ಆಯುಧಗಳು ದೊರೆತಿವೆ.[೫] ರೇಸ್‌ಕೋಸ್ ಇರುವ ಪ್ರದೇಶದಲ್ಲಿ ಕೀನ್ ಕೇಡ್‌ಲೀ ಎಂಬುವವರು ೧೮೭೬ರಲ್ಲಿ ನವ ಶಿಲಾಯುಗಕ್ಕೆ ಸಂಬಂಧಿಸಿದ ಕೆಲವು ಕಿರು ಶಿಲಾಯುಗದ (ಮೈಕೋಲಿತ್ಸ್) ನೆಲೆಗಳನ್ನು ಪತ್ತೆ ಹಚ್ಚಿದರು.

ಮಾನವನು ಕಬ್ಬಿಣ ಮತ್ತು ಕಂಚಿನ ಬಳಕೆ ಮಾಡುತ್ತಿದ್ದು, ಜೊತೆಗೆ ಕೆಂಪು ಮತ್ತು ಕಪ್ಪು ಮಡಕೆಗಳನ್ನು ತಯಾರು ಮಾಡುತ್ತಾ ಕೃಷಿಯನ್ನು ಮುಖ್ಯ ಕಸುಬನ್ನಾಗಿಸಿಕೊಂಡು ವಾಸಿಸುತ್ತಿದ್ದನು. ಅವರ ಕಾಲದ ಡಾಲ್ಮೆನ್‌ಗಳಂತಹ ಗೋರಿಗಳಿಂದಾಗಿ ಆ ಕಾಲವನ್ನು ಬೃಹತ್ ಶಿಲಾಯುಗ ಎಂದು ಕರೆಯಲಾಗಿದೆ.

ಬೃಹತ್ ಶಿಲಾಯುಗದ ಕಾಲಕ್ಕೆ ಕಬ್ಬಿಣದ ಆಯುಧಗಳು ಬಳಕೆಗೆ ಬಂದವು. ಮಡಕೆಗಳ ಬಳಕೆ ಆರಂಭವಾಗಿ, ಮಡಕೆಗಳ ಮೇಲೆ ಅಲಂಕಾರ ಮಾಡುವುದೂ ಅಭ್ಯಾಸವಾಯಿತು. ಸತ್ತವರನ್ನು ಶವ ಪೆಟ್ಟಿಗೆಗಳಲ್ಲಿಟ್ಟು ಸಮಾಧಿ ಮಾಡುವುದು ಆಗಿನ ಪದ್ಧತಿಯೆಂದು ತಿಳಿಯಲು ದೊರೆತಿರುವ ಆ ಕಾಲದ ಸಮಾಧಿಗಳು ನೆರವಾಗಿವೆ.

ಕ್ರಿ.ಪೂ ೩ನೇ ಶತಮಾನದಿಂದ ಕ್ರಿ.ಪೂ. ೧ನೇ ಶತಮಾನದವರೆಗೂ ಬೆಂಗಳೂರು ಜಿಲ್ಲೆಯ ಹಲವೆಡೆಗಳಲ್ಲಿ ಬೃಹತ್ ಶಿಲಾಯುಗದ ಸಂಸ್ಕೃತಿಯ ಮಾನವರು ವಾಸಿಸುತ್ತಿದ್ದ ಕುರುಹುಗಳು ಪತ್ತೆಯಾಗಿವೆ. ಚನ್ನಪಟ್ಟಣದ ಸಮೀಪ ಬನಹಳ್ಳಿಯಲ್ಲಿ ಕೆಲವು ವೃತ್ತಾಕಾರದ ದಿಬ್ಬಗಳಿದ್ದು, ಅವುಗಳಲ್ಲಿ ಒಂದನ್ನು ಶೋಧಿಸಿದಾಗ ನಾಲ್ಕು ಪದಗಳುಳ್ಳ ಕೆಂಪು ಮಡಿಕೆ ಮತ್ತು ಕೆಲವು ಕಬ್ಬಿಣದ ಆಯುಧಗಳ ಜೊತೆಗೆ ಕಂಚಿನ ಆಭರಣ ದೊರೆತಿವೆ. ದೇವನಹಳ್ಳಿ ಹತ್ತಿರದ ಮನಗೊಂಡನಹಳ್ಳಿಯಲ್ಲೂ ಶಿಲಾ ವೃತ್ತಗಳು ಕಂಡುಬಂದಿದ್ದು, ಬೃಹತ್ ಶಿಲಾಯುಗದ ಸಂಸ್ಕೃತಿಯು ಮಾನವರು ಅಲ್ಲಿ ವಾಸಿಸುತ್ತಿದ್ದರೆಂದು ತಿಳಿದುಬರುತ್ತದೆ. ಬೃಹತ್ ಶಿಲಾಯುಗದ ಅವಶೇಷಗಳು ಹೆಚ್ಚಾಗಿ ದೊರೆತಿರುವುದು ಮಾಗಡಿ ತಾಲ್ಲೂಕಿನ ಸಾವನದುರ್ಗದ ಬೆಟ್ಟದ ತಪ್ಪಲಿನಲ್ಲಿ. ಅಲ್ಲಿ ಹಲವಾರು ದಿಬ್ಬಗಳು, ಶಿಲಾ ವೃತ್ತಗಳು ಕಂಡುಬಂದಿವೆ. ಬೆಂಗಳೂರು ನಗರಕ್ಕೆ ಸಮೀಪದ ಹುತ್ತನಗಳ್ಳಿಯಲ್ಲೂ ಬೃಹತ್ ಶಿಲಾಯುಗದ ಸಮಾಧಿಗಳು ಕಂಡುಬಂದಿವೆ.[೬]

ಮಾಗಡಿ ತಾಲ್ಲೂಕಿನ ಹೂಜಿಗಲ್ಲು, ಕೋರಮಂಗಲ ಮತ್ತು ಸೋಣಪ್ಪನಹಳ್ಳಿಗಳ ದಿಬ್ಬಗಳನ್ನು ಸಂಶೋಧನೆಗೆ ಒಳಪಡಿಸಿರುವುದರಿಂದ ಅವು ಪುರಾತನ ಮಾನವರ ಸಮಾಧಿ ಎಂದು ತಿಳಿದು ಬಂದಿದೆ. ಸಮಾಧಿಯ ಮೇಲೆ ಮುಚ್ಚಿರುವ ಕಲ್ಲು ಚಪ್ಪಡಿಗಳಲ್ಲಿ ರಂಧ್ರಗಳಿವೆ. ಯಲಹಂಕದ ಬಿಳಿ ಚಿಕ್ಕಜಾಲದಲ್ಲಿ ದಿಬ್ಬ ಸಮಾಧಿಗಳಿದ್ದು,

[illegible]

ಅವುಗಳಲ್ಲಿ ಬೃಹತ್ ಶಿಲಾಯುಗದ ಮಡಿಕೆಗಳು ಮತ್ತು ಕಬ್ಬಿಣದ ಆಯುಧಗಳು ಕಂಡುಬಂದಿವೆ. ಆನೇಕಲ್ ಸಮೀಪದ ಶಾಸನದ ಬೀಡಿನಲ್ಲಿ ಮಡಕೆಯ ಚೂರುಗಳು ದೊರೆತಿವೆ.

ಬೆಳ್ಳಂದೂರು ಕೆರೆಯ ಪರಿಸರದಲ್ಲಿ ಬೃಹತ್ ಶಿಲಾಯುಗದ ಸಮಾಧಿಗಳು ದೊರೆತಿದ್ದು, ಇದನ್ನು ಬುಶ್ ಎಂಬುವವರು ಪತ್ತೆಹಚ್ಚಿದ್ದಾರೆ. ಬೃಹತ್ ಶಿಲಾಯುಗದ ಸಂಸ್ಕೃತಿಯ ಅವಶೇಷಗಳು ದೊರೆತಿರುವ ಸ್ಥಳಗಳ ಪೈಕಿ ಹೊಸಕೋಟೆ ತಾಲ್ಲೂಕಿನ ಜಡಗೇನಹಳ್ಳಿ ಪ್ರಮುಖ ಸ್ಥಾನ ಪಡೆದುಕೊಂಡಿದೆ. ಬೆಂಗಳೂರು ಮಾಲೂರು ರಸ್ತೆಯ ಜಡಗೇನಹಳ್ಳಿ ಬಳಿಯ ರಸ್ತೆ ಅಂಚಿನಲ್ಲಿ ಬೃಹತ್ ಶಿಲಾಯುಗದ ಕುರುಹುಗಳು ಕಂಡುಬಂದು, ೧೯೫೭ರಲ್ಲಿ ಉತ್ಖನನ ನಡೆಸಿದ್ದರಿಂದ ಮಹತ್ವದ ಅಂಶಗಳು ಬೆಳಕಿಗೆ ಬಂದವು. ರಸ್ತೆ ನಿರ್ಮಾಣದ ಸಂದರ್ಭದಲ್ಲಿ ಕೆಲವು ಬೃಹತ್ ಸಮಾಧಿಗಳು ನಾಶವಾಗಿರುವ ಸಾಧ್ಯತೆಗಳನ್ನು ಸಂಶೋಧಕರು ತಿಳಿಸಿದ್ದಾರೆ. ಹೀಗೆಯೇ ಹರಿಯುವ ನೀರಿನಿಂದಲೂ ಕೆಲವು ಸಮಾಧಿಗಳು ಹಾಳಾಗಿವೆ. ಈಗಲೂ ಕೆಲವು ಬೃಹತ್ ಶಿಲಾ ಸಮಾಧಿಗಳು ಉಳಿದಿರುವುದು ಕಂಡುಬರುತ್ತದೆ.

ಉತ್ಖನನದ ನಂತರ ಸಮಾಧಿಯ ಕುಳಿಗಳಲ್ಲಿ ಶವ ಪೆಟ್ಟಿಗೆಗಳ ಜೊತೆಗೆ ಮಡಕೆ ಹಾಗೂ ಕಬ್ಬಿಣದ ಆಯುಧಗಳು ದೊರೆತಿವೆ. ಪ್ರತಿ ಸಮಾಧಿಯನ್ನು ಶೋಧಿಸಿದಾಗ ಮೇಲ್ಭಾಗದ ಒಂದು ಕುಳಿಯು ಒಳಗೆ ಹೋಗುತ್ತಾ ಎರಡು ಭಾಗಗಳನ್ನಾಗಿ ಒಡೆದಿರುವುದು ಗೋಚರವಾಗುತ್ತದೆ. ಒಂದು ಭಾಗದಲ್ಲಿ ಶವ ಪೆಟ್ಟಿಗೆಯೂ ಮತ್ತೊಂದು ಭಾಗದಲ್ಲಿ ಮಡಿಕೆ ಕುಡಿಕೆಗಳು ಹಾಗೂ ಕಬ್ಬಿಣದ ಆಯುಧಗಳು ದೊರೆತಿವೆ. ದೊರೆತಿರುವ ವಸ್ತುಗಳ ಪೈಕಿ ಕಬ್ಬಿಣದ ಚೂರಿ, ಹುರಿಯುವ ಬಾಣಲೆ ಮತ್ತು ತ್ರಿಪಾದಗಳು ವಿಶೇಷ ಗಮನ ಸೆಳೆಯುತ್ತವೆ.[೭]

ಕ್ರಿಸ್ತ ಶಕಾರಂಭದಲ್ಲೂ ಈ ಪ್ರದೇಶದಲ್ಲಿ ಮಾನವನ ವಾಸದೊಂದಿಗೆ ವ್ಯಾಪಾರ ಚಟುವಟಿಕೆಗಳು ನಡೆಯುತ್ತಿದ್ದವು ಎಂಬುವುದಕ್ಕೆ ಯಶವಂತಪುರ ಮತ್ತು ಜಾಲಹಳ್ಳಿಯಲ್ಲಿ ೧೮೯೫-೯೭ರಲ್ಲಿ ದೊರೆತ ರೋಮನ್ ಸಾಮ್ರಾಜ್ಯದ ಬೆಳ್ಳಿಯ ನಾಣ್ಯಗಳು ಇದಕ್ಕೆ ಸಾಕ್ಷಿಯಾಗಿವೆ. ಇದರಲ್ಲಿ ಚಕ್ರವರ್ತಿ ಅಗಸ್ಟಸ್, ಟೈಬೀರಿಯಸ್ (ಕ್ರಿ.ಶ.೧೪-೩೭) ಕಾಲಿಗುಲಾ (ಕ್ರಿ.ಶ. ೩೭-೪೧) ಇವರ ನಾಣ್ಯಗಳು ದೊರೆತಿವೆ.[೮]

ಚಾರಿತ್ರಿಕ ಹಿನ್ನೆಲೆ

ಬೆಂಗಳೂರು ಪ್ರದೇಶವು ಪ್ರಾಚೀನ ಕಾಲದಿಂದಲೂ ಹಲವಾರು ರಾಜಮನೆತನಗಳ ಆಡಳಿತಕ್ಕೆ ಒಳಪಟ್ಟಿತ್ತು. ವಿವಿಧ ಅರಸು ಮನೆತನಗಳು ಆಳ್ವಿಕೆಯಲ್ಲಿ ಬೆಂಗಳೂರು ರಾಜಕೀಯ ಕೇಂದ್ರವಾಗಿ ಹಾಗೂ ಆರ್ಥಿಕ ಕೇಂದ್ರವಾಗಿ ತನ್ನ ವ್ಯಾಪ್ತಿಯನ್ನು ವಿಸ್ತರಿಸುತ್ತಾ ಹಂತ ಹಂತವಾಗಿ ಬೆಳೆಯುತ್ತಾ ಹೋಯಿತು.

ಗಂಗರು

ಕರ್ನಾಟಕದ ದಕ್ಷಿಣ ಭಾಗವನ್ನು ಗಂಗರು ನಾಲ್ಕನೆಯ ಶತಮಾನದ ಮಧ್ಯಭಾಗದಿಂದ ಹತ್ತನೆಯ ಶತಮಾನದ ಕೊನೆಯವರೆಗೂ ಆಳಿದರು. ಮೊದಲು ಸ್ವತಂತ್ರರಾಗಿ ಅನಂತರ ಚಾಲುಕ್ಯರು ಮತ್ತು ರಾಷ್ಟ್ರಕೂಟರ ಅರಸು

ಮನೆತನಗಳ ಮಾಂಡಲಿಕರಾಗಿ ಆಳಿದರು. ಇವರ ಪ್ರದೇಶವನ್ನು ಗಂಗವಾಡಿ ೯೬,೦೦೦ ಎಂದೂ ಕರೆಯಲಾಗಿದೆ. ಗಂಗರ ಪ್ರಥಮ ರಾಜಧಾನಿ ಕೋಲಾರ, ನಂತರ ತಲಕಾಡು ಎರಡನೇ ರಾಜಧಾನಿ, ಚನ್ನಪಟ್ಟಣದ ಮಾಕುಂದ ಮತ್ತು ಕೊನೆ ಅವಧಿಯಲ್ಲಿ ನೆಲಮಂಗಲ ಬಳಿಯ ಮಣ್ಣೆಯು ಅವರ ರಾಜಧಾನಿಯಾಗಿತ್ತು. ಇವರ ಕಾಲದಲ್ಲಿ ನಂದಿಯು ಖ್ಯಾತ ಕೇಂದ್ರವಾಗಿತ್ತು.

ಶ್ರೀಪುರುಷ (ಸಂ.ಕ್ರಿ.ಶ. ೭೨೫-೭೮೮)

ಗಂಗ ಅರಸು ಮನೆತನದ ೧೪ನೇ ಅರಸು ಶ್ರೀಪುರುಷ ಈ ಪ್ರದೇಶವನ್ನು ಆಳ್ವಿಕೆ ನಡೆಸಿದ್ದರ ಬಗ್ಗೆ ಆಧಾರಗಳಿವೆ.

* ಅಗ್ರಹಾರ ದಾಸರಹಳ್ಳಿಯ ಒಂದು ಶಾಸನದಲ್ಲಿ ಕುಕ್ಕರ ಎಂಬುವನೊಬ್ಬನು ಯುದ್ಧದಲ್ಲಿ ಹತನಾದ ಬಗ್ಗೆ ಗಂಗರ ದಾಖಲೆಯಿದೆ.
* ಕೃಷ್ಣರಾಜಪುರದಲ್ಲಿ ಶ್ರೀಪುರುಷನ ಕಾಲದ ಮರೆಯ ಎಂಬುವವನ ಸ್ಮಾರಕ ಶಾಸನವಿದೆ.

ಶ್ರೀ ಪುರುಷನು ವಿದ್ವಾಂಸ ಹಾಗೂ ಪರಾಕ್ರಮಿಯಾದ ಅರಸು, ಕುಣಿಗಲ್ ಕೆರೆ ಈತನೇ ನಿರ್ಮಿಸಿದ್ದೆಂದು ಇತ್ತೀಚೆಗೆ ದೊರೆತ ಶಾಶನವೊಂದು ತಿಳಿಸುತ್ತದೆ.

ಇಮ್ಮಡಿ ಶಿವಮಾರ (ಕ್ರಿ.ಶ.೭೮೮-೮೧೨)ನು ಅಧಿಕಾರಕ್ಕೆ ಬರುವ ಮೊದಲು ಕುಣಿಗಲ್ ರಾಜ್ಯಪಾಲನಾಗಿದ್ದನು. ಸಿಂಹಾಸನಕ್ಕೆ ಬಂದ ಪ್ರಾರಂಭದಲ್ಲಿ ಧ್ರುವನ ಆಕ್ರಮಣವನ್ನು ಎದುರಿಸಬೇಕಾಯಿತು. ನಂತರ ಧ್ರುವನ ಹಿರಿಯ ಮಗ ಸ್ಥಂಭನನ್ನು ಗಂಗರಾಜ್ಯಕ್ಕೆ ಅಧಿಪತಿಯನ್ನಾಗಿ ಮಾಡಿದನು. ನಂತರ ಅಧಿಕಾರಕ್ಕೆ ಬಂದ ೩ನೇ ಗೋವಿಂದನು ಇಮ್ಮಡಿ ಶಿವಮಾರನನ್ನು ಬಿಡುಗಡೆಗೊಳಿಸಿದನು. ರಾಷ್ಟ್ರಕೂಟರ ಸಾಮಂತನಾಗಿಯೇ ಇಮ್ಮಡಿ ಶಿವಮಾರನು ಅಧಿಕಾರ ನಡೆಸಿದನು. ರಾಷ್ಟ್ರಕೂಟ ದೊರೆ ಅಮೋಘವರ್ಷ ನೃಪತುಂಗನ ವಿರುದ್ಧ ಹೋರಾಡಿ ೮೧೨ರಲ್ಲಿ ಕಾಗೆಮಾಗೆಯೂರು ಯುದ್ಧದಲ್ಲಿ ಸೋತು ಹತನಾದನು.ಶ್ರವಣ ಬೆಳಗೊಳದ ಚಂದ್ರಪ್ರಭ ಬಸದಿ ಈತನ ನಿರ್ಮಾಣ. ನಂತರ ೧ನೇ ರಾಚಮಲ್ಲನು ರಾಷ್ಟ್ರಕೂಟರ ಜೊತೆ ಯುದ್ಧ ಮುಂದುವರೆಸಿದ. ಹಂಜೇರು (ಹೇಮಾವತಿ ಮಡಕಶಿರಾ ತಾಲ್ಲೂಕು)ವಿನಿಂದ ಆಳುತ್ತಿದ್ದ ನೊಳಂಬರ ಜೊತೆ ಸ್ನೇಹ ರಕ್ತಸಂಬಂಧ ಬೆಳೆಸಿದ. ನೊಳಂಬ ವಂಶದ ಶಿವಮಾರನೆಂಬ ರಾಜಪುತ್ರನೊಬ್ಬ ಮಾರಸುನಾಡಿನ ಆಡಳಿತ ನಡೆಸುತ್ತಿದ್ದ ವಿಚಾರ ವರ್ತೂರಿನಲ್ಲಿ ದೊರೆತಿರುವ ಕ್ರಿ.ಶ. ಸುಮಾರು ೮೨೦ರ ಶಾಸನದಿಂದ ತಿಳಿಯುತ್ತದೆ. ನಾಗೊಂಡಹಳ್ಳಿ ಆಗ ಒಂದು ದೊಡ್ಡ ಹಳ್ಳಿಯಾಗಿ ೯೩ ಗಣ್ಯರ ಊರ ಸಮುದಾಯ ಹೊಂದಿತ್ತು.‘ ರಾಷ್ಟ್ರಕೂಟರ ದೊರೆ ಅಮೋಘವರ್ಷ ನೃಪತುಂಗನು ಗಂಗರ ಅರಸ ಭೂತನಿಗೆ ತನ್ನ ಮಗಳಾದ ಚಂದ್ರಲಬ್ಬೆಯನ್ನು ವಿವಾಹ ಮಾಡಿಕೊಟ್ಟನು.

ನೀತಿಮಾರ್ಗ (ಸು. ೮೪೩-೮೭೦) ರ ಕಾಲದಲ್ಲೇ ಬೇಗೂರು ಕೇಂದ್ರವಾಗಿ ನಾಗತ್ತರ ಎಂಬ ಅಧಿಕಾರಿ ಬೆಂಪೂರು-೧೨ (ಬೇಗೂರು) ಪ್ರದೇಶವನ್ನು ೧೨ ಗ್ರಾಮಗಳಿರುವ ಆಡಳಿತ ಘಟಕ ಆಳುತ್ತಿದ್ದ ಸಮಯದಲ್ಲೆ

ಬೇಗೂರಿನ ಸುಂದ ನಾಗೇಶ್ವರ ದೇವಾಲಯವನ್ನು ಕಟ್ಟಿಸಿದ. ''ಬೆಂಗಳೂರು'' ಊರನ್ನು ಉಲ್ಲೇಖಿಸುವ ಶಾಸನ ಈ ನಾಗತ್ತರನ ಕಾಲದ್ದೆ ಆಗಿದ್ದು. ಬೇಗೂರಿನ ಈ ದೇವಾಲಯದ ಪರಿಸರದಲ್ಲಿವೆ. ನಾಗತ್ತರನ ಕಾಲದಲ್ಲಿ ಈಗಿನ ಅಗರ (ಆಗ ಅಗ್ರಹಾರವಾಗಿತ್ತು)ದಲ್ಲಿ ಇದ್ದ ಎರಡು ಕೆರೆಗಳಿಗೆ ಎರಡು ತೂಬುಗಳನ್ನು ಅಳವಡಿಸಿದ್ದು, ಮೂರನೇ ಕೆರೆಯನ್ನು ಈತನೇ ಕಟ್ಟಿಸಿದನು. ಇರ್ವುಲಿಯೂರಿನ (ಈಗಿನ ಇಬ್ಬಲೂರು) ಮುಖ್ಯಸ್ಥನಾದ ಸಿರಿಯಮಯ್ಯ ನಾಗರತ್ತನ ಆಡಳಿತ ಕಾಲದಲ್ಲಿ ಈ ತೂಬುಗಳನ್ನು ಮಾಡಿಸಿದ್ದನು.

ನಂತರ ಕ್ರಮವಾಗಿ ಎರೆಗಂಗ ಇಮ್ಮಡಿ ನೀತಿಮಾರ್ಗ, ನರಸಿಂಹ, ಮುಮ್ಮಡಿ ರಾಚಮಲ್ಲ, ಇಮ್ಮಡಿ ಭೂತಗ, ಮರುಳ, ಇಮ್ಮಡಿ ಮೊರಸಿಂಹ ಹಾಗೂ ಮುಮ್ಮಡಿ ನೀತಿಮಾರ್ಗ ಆಳ್ವಿಕೆ ನಡೆಸಿದರು.

ಕ್ರಿ.ಶ. ೯೭೩ರಲ್ಲಿ ರಾಷ್ಟ್ರಕೂಟ ಚಕ್ರವರ್ತಿಗಳನ್ನು ಪದಚ್ಯುತಿಗೊಳಿಸಿ ಕಲ್ಯಾಣದ ಚಾಲುಕ್ಯರು ಸಾಮ್ರಾಟರಾದರು. ಗಂಗರು ಕಲ್ಯಾಣ ಚಾಲುಕ್ಯರ ಜೊತೆ ಸ್ನೇಹ ಬೆಳೆಸದೆ ಪ್ರತಿಭಟಿಸಿದರು. ಇಮ್ಮಡಿ ಮಾರಸಿಂಹನ ಪುತ್ರ ನಾಲ್ಕನೇಯ ರಾಚಮಲ್ಲ (೯೭೪-೯೯೯) ಗಂಗರ ಕೊನೆಯ ಅರಸನಾಗಿದ್ದು, ಇವನನ್ನು ಚೋಳರು ಸೋಲಿಸಿ ಗಂಗರ ಆಡಳಿತವನ್ನು ಕೊನೆಗಾಣಿಸಿದರು. ಸುಮಾರು ಒಂದು ಶತಮಾನಕ್ಕೂ ದೀರ್ಘಕಾಲ ಗಂಗವಾಡಿ (ಬೆಂಗಳೂರು ಸಹ) ಚೋಳರ ಆಡಳಿತಕ್ಕೆ ಒಳಪಡುವಂತಾಯಿತು.[೧೦] ಗಂಗವಾಡಿ ಪ್ರದೇಶದಲ್ಲಿ ಕೃಷಿಯು ಸಮೃದ್ಧವಾಗಿ ವಿಸ್ತರಿಸಲು ಸುಮಾರು ಏಳು ಶತಮಾನಗಳ ಕಾಲ ಆಳಿದ ಗಂಗರು ಕಾರಣರು. ಅಗರದ ಕೆರೆಗಳು, ಬೇಗೂರಿನ ಕೆರೆ, ನಾಗೇಶ್ವರ ಮಂದಿರ ಅಲ್ಲಿಯೇ ಇರುವ ಕಾಳಿಕ ಮತ್ತು ಕಮ್ಮಟೇಶ್ವರ ದೇವಾಲಯ ಇವರ ಕೊಡುಗೆ.

ಚೋಳರು

ಚೋಳರ ಪ್ರಸಿದ್ಧ ಚಕ್ರವರ್ತಿ ಒಂದನೆಯ ರಾಜರಾಜನ (೯೮೫-೧೦೧೬) ಕಾಲದಲ್ಲಿ ಚೋಳರು ಬೆಂಗಳೂರು ಗ್ರಾಮಾಂತರ ಜಿಲ್ಲೆಯನ್ನು ತಲುಪಿದ್ದರು. ಈ ವಿಷಯವನ್ನು ೯೯೭ರ ಹೊಸಕೋಟೆ ತಾಲ್ಲೂಕಿನ ಕಮ್ಮಸಂದ್ರದಲ್ಲಿರುವ ಒಂದು ಶಾಸನ ತಿಳಿಸುತ್ತದೆ. ರಾಜೇಂದ್ರ ಚೋಳ (೧೦೪೪-೧೦೫೪)ನ ಕಾಲದಲ್ಲಿ ಚೋಳರ ಆಡಳಿತ ಇಲ್ಲಿ ಸುಸಂಘಟಿತವಾಯಿತು. ಬೆಂಗಳೂರು ಜಿಲ್ಲೆ ರಾಜೇಂದ್ರ ಚೋಳ ಒಡಿನಾಡಿನಲ್ಲಿ (ಪ್ರಾಂತ) 'ನಿಗರಿಲ್ ಚೋಳ ಮಂಡಲ' ಮತ್ತು 'ವಿಕ್ರಮ ಜೋಳ ಮಂಡಳ'ಗಳಲ್ಲಿ ವಿಭಜಿತಗೊಂಡಿತ್ತು. ಬೆಂಗಳೂರಿನ ಯಲಹಂಕ (ಇಲೈಪಾಕಂ) ಎಂಬ ನಾಡಿಗೆ ಒಳಪಟ್ಟಿತ್ತು. ಕಮ್ಮಸಂದ್ರದಲ್ಲಿ ದೊರೆತಿರುವ ಶಾಸನ ಕನ್ನಡ ಭಾಷೆಯಲ್ಲಿದ್ದು ಉಳಿದಂತೆ, ಬಹುಪಾಲು ಶಾಸನಗಳು ತಮಿಳು ಭಾಷೆಯಲ್ಲಿವೆ.

ಚನ್ನಪಟ್ಟಣ ತಾಲ್ಲೂಕು ಚೋಳರ ರಾಜಕೀಯ ಹಾಗೂ ಧಾರ್ಮಿಕ ಚಟುವಟಿಕೆಗಳ ಕೇಂದ್ರವಾಗಿತ್ತು. ಮಳೂರಿನ ದೇವಾಲಯ ಇವರ ಕಾಲದಲ್ಲಿಯ ನಿರ್ಮಾಣವಾದದು. ರಾಜೇಂದ್ರ ಚೋಳನ ಒಂದು ಶಾಸನ (ಹೆಸರುಘಟ್ಟ ಬಳಿಯ) ಐಗಂಡಪುರದಲ್ಲಿ ಇದ್ದು, ಅದು ಬಹುಶಃ ಅಲ್ಲಿ ಸಿದ್ದೇಶ್ವರ ದೇವಾಲಯಕ್ಕೆ ನೀಡಿದ

[illegible]

ದಾನವಾಗಿದ್ದು, ಕ್ರಿ.ಶ. ೧೦೩೩ ಪಾಮನಯ್ಯ ಎಂಬ ಸ್ಥಳೀಯ ಚೋಳ ಅಧಿಕಾರಿಯನ್ನು ಉಲ್ಲೇಖಿಸುತ್ತದೆ. ರಾಜೇಂದ್ರ ಚೋಳನ ಉತ್ತರಾಧಿಕಾರಿ ವೀರ ರಾಜೇಂದ್ರನ (೧೦೬೪-೧೦೬೯) ಒಂದು ಶಿಲಾಶಾಸನ ಕೆಂಗೇರಿಯಲ್ಲಿ ದೊರೆತಿದ್ದು. ಕುಲೋತ್ತುಂಗ ಚೋಳನ ಆಳ್ವಿಕೆಯ ಕಾಲದಲ್ಲಿ ಅಲ್ಲಾಳ ಸಂದ್ರದಲ್ಲಿ ಒಂದು ಶಾಸನ ದೊರೆತಿದ್ದು, ಕಾಡೆಯ ನಾಯಕ ಎಂಬುವವನು ಸ್ಥಳೀಯ ನಾಯಕನಾಗಿದ್ದನೆಂದು ತಿಳಿಸುತ್ತದೆ. ಬೇಟೆಯ ಕಾಲದಲ್ಲಿ ಕೊಲ್ಲಲ್ಪಟ್ಟ ಸೈನಿಕನೊಬ್ಬನ ಮನೆತನಕ್ಕೆ ನೀಡಿದ ಪರಿಹಾರವನ್ನು ದಾಖಲಿಸುವ ಶಾಸನವಿದು. ಕುಲೋತುಂಗನು (ಅರಿಶಿನ ಕುಂಡ ಬಳಿಯ) ಭಿನ್ನಮಂಗಲದ ಮುಕ್ತೇಶ್ವರ ದೇವಾಲಯಕ್ಕೆ ೧೧೧೦ರಲ್ಲಿ ದಾನ ನೀಡಿದನು.ಐಗಂಡಪುರ ಧರ್ಮೇಶ್ವರ (ಐವರ್ಕಂಡೀಶ್ವರ) ದೇವಾಲಯಕ್ಕೆ ೧೧೧೩ರಲ್ಲಿ ಒಂದು ಗ್ರಾಮವನ್ನು ದಾನವಾಗಿ ನೀಡಿದ ಶಾಸನವಿದೆ.[೧೦] ಬೆಂಗಳೂರು ಪರಿಸರದ ಭಿನ್ನಮಂಗಲದ ಮುಕ್ತೇಶ್ವರ, ಐಗಂಡಪುರದ ಧರ್ಮೇಶ್ವರ ಬೇಗೂರಿನ ಚೋಳೇಶ್ವರ ಹಾಗೂ ದೊಮ್ಮಲೂರಿನ ಚೊಕ್ಕನಾಥ ದೇವಾಲಯಗಳ, ಮಡಿವಾಳದ ಸೋಮೇಶ್ವರ ದೇವಾಲಯ ಚೋಳರ ರಚನೆಗಳಾಗಿವೆ. ಕಾಡುಗೋಡಿ ಬಳಿಯ ಪಟ್ಟಂದೂರು ಕೆರೆಕಟ್ಟಿಸಿ ಅದರ ದುರಸ್ತಿಗಾಗಿ ಚೋಳರು ೧೦೪೩ರಲ್ಲಿ ೨೫೦ ಕುಳಿ ಭೂಮಿ ದಾನಮಾಡಿದ್ದಾರೆ. ಬೆಳ್ಳಂದೂರು ಕೆರೆ ಚೋಳರ ರಚನೆಯಾಗಿದೆ.

ಹೊಯ್ಸಳರು

ಕ್ರಿ.ಶ. ೧೧೧೬ರ ನಂತರ ಹೊಯ್ಸಳರ ವಿಷ್ಣುವರ್ಧನ ಚೋಳರನ್ನು ಗಂಗವಾಡಿಯಿಂದ ಹೊರ ದೂಡಿದಾಗ ಬೆಂಗಳೂರು ಪ್ರದೇಶವು ಹೊಯ್ಸಳರ ಆಡಳಿತಕ್ಕೆ ಒಳಪಟ್ಟಿತ್ತು. ದೊಡ್ಡ ಬಳ್ಳಾಪುರ ಇವರ ಕಾಲದಲ್ಲಿ ಗಣ್ಯ ಪೇಟೆಯಾಗಿ ''ಬಲ್ಲಾಳಪುರ'' ಎಂಬ ಮೂಲ ಹೆಸರು ಪಡೆಯಿತು. ವಿಷ್ಣುವರ್ಧನನ ೧೧೧೦ರ ಶಾಸನ ಬೇಗೂರಿನಲ್ಲಿ ದೊರೆತಿದ್ದು, ಈ ಶಾಸನವು ತಮಿಳನಲ್ಲಿದ್ದು ಮುರಸು (ಮೊರಸು) ನಾಡಿನ ಅಧಿಕಾರಿಯೊಬ್ಬನು ವೆಪ್ಪೂರು (ಬೇಗೂರು) ಕೆರೆ ಪರಿಸರದ ಭೂಮಿಯನ್ನು ನಾಗೇಶ್ವರ ದೇವಾಲಯಕ್ಕೆ ದಾನವಾಗಿ ನೀಡಿದ್ದನ್ನು ನಾಗೇಶ್ವರ ದೇವಾಲಯದ ಸಂಕೀರ್ಣಕ್ಕೆ ಪ್ರಕಾರ ರಚಿಸಿದ್ದನ್ನು ತಿಳಿಸುತ್ತದೆ. ಚಿಕ್ಕಬಾಣಾವರ ಬಳಿಯ ಕಡುಬೂರಿನಲ್ಲಿ ಹೊಯ್ಸಳರು ನಡೆಸಿದ ಯುದ್ಧದ ವಿಚಾರವನ್ನು ಶಾಸನವೊಂದು ತಿಳಿಸುತ್ತದೆ. ಚಿಕ್ಕ ಜಾಲಹಳ್ಳಿ (ದೇವನಹಳ್ಳಿ ರಸ್ತೆ)ಯಲ್ಲಿ ವಿಷ್ಣುವರ್ಧನನು ''ವಿಷ್ಣುವರ್ಧನ ಚತುರ್ವೇದಿ ಮಂಗಲ'' ಎಂಬ ಅಗ್ರಹಾರ ಸ್ಥಾಪಿಸಿ, ಚನ್ನಕೇಶವ ದೇವಾಲಯ ನಿರ್ಮಿಸಿದನು.

ಒಂದನೇ ನರಸಿಂಹನ ಹೊಸಕೋಟೆ ತಾಲ್ಲೂಕು ವೋಬನಹಳ್ಳಿಯ ೧೧೪೫ರ ಶಾಸನದಲ್ಲಿ ಆ ಊರ ಕೆರೆಯ ವಿಸ್ತರಣೆ ಹಾಗೂ ಕೆಲವು ಧಾರ್ಮಿಕ ಉದ್ದೇಶಗಳಿಗಾಗಿ ಕೈವಾರ ನಾಡಿನ ಗ್ರಾಮುಂಡ ಬ್ರಹ್ಮಾದಿ ರಾಜನು ದಾನ ನೀಡಿದ ಉಲ್ಲೇಖವಿದೆ.

ಬನ್ನೇರು ಘಟ್ಟದ ದಾಮೋದರ (ಈಗಿನ ಚಂಪಕಧಾಮ) ಮಂದಿರವು ಹೊಯ್ಸಳರ ರಚನೆಯಾಗಿದ್ದು ಇದಕ್ಕೆ ಹೊಯ್ಸಳರು ಹಲವು ಬಾರಿ ದತ್ತಿದಾನ ನೀಡಿದ್ದಾರೆ. ಕೇತೆಯ ದಂಡನಾಯಕನೆಂಬ ಸೇನಾನಿ ಮುಮ್ಮಡಿ ನರಸಿಂಹನ

[illegible]

[illegible]

ಆಯುಧ, ಸೈನ್ಯಗಳಿಗೆ ಸದಾ ಜಯವಾಗಲೆಂದು ೧೨೭೮ರಲ್ಲಿ ದಾನ ನೀಡಿದ ಶಾಸನವಿದೆ. ಜಿಗಣಿ ಗ್ರಾಮದ ಆದಾಯವನ್ನು ದೇವಾಲಯಕ್ಕೆ ಇಮ್ಮಡಿ ನರಸಿಂಹನು ನೀಡಿದ್ದನು.

ಮೂರನೇ ಬಲ್ಲಾಳನ ಕಾಲದಲ್ಲಿ ಬೆಂಗಳೂರು ಪ್ರದೇಶದಲ್ಲಿ ಈತನ ಸೋದರಿಯ ಪತಿಯಾದ ಸೋಮಣ್ಣನಾಯಕನೂ ಆತನ ಮಕ್ಕಳಾದ ಸಿಂಗಯ್ಯ ಮತ್ತು ಬಲ್ಲಪ್ಪ ದಂಡನಾಯಕರು ಅಧಿಕಾರ ನಡೆಸುತ್ತಿದ್ದರು. ಬಲ್ಲಪ್ಪನು ವಿಜಯನಗರ ಸ್ಥಾಪಿಸಿದ ಹರಿಹರನ ಮಗಳನ್ನು ವರಿಸಿದನು ಎನ್ನುವ ಅಂಶವನ್ನು ವಿಜಯನಗರದ ೧೩೪೬ರ ಶೃಂಗೇರಿಯ ಶಾಸನವು ತಿಳಿಸುತ್ತದೆ. ಈ ಶಾಸನದಲ್ಲಿ ಇವನು ''ಅಳಿಯ ಬಲ್ಲಪ್ಪ'' ಎಂದು ಪರಿಚಿತನಾಗಿರುವುದು ಕಂಡುಬರುತ್ತದೆ. ಮೂರನೇ ಬಲ್ಲಾಳನ ೧೩೦೧ರ ಒಂದು ಶಾಸನದಂತೆ ತಾನು ರಾಮನಾಥ ಮತ್ತು ವಿಶ್ವನಾಥರ ವಶದಲ್ಲಿದ್ದ ಎಲ್ಲಾ ಪ್ರದೇಶಗಳನ್ನು ಗೆದ್ದುಕೊಂಡದ್ದಾಗಿ ಅವರ ಕಾಲದಲ್ಲಿದ್ದ ನಷ್ಟವನ್ನು ಅನೇಕ ದಾನ ದತ್ತಿಗಳ ಮೂಲಕ ಪುನರುದ್ದರಿಸಿದ್ದಾಗಿ ಹೇಳಲಾಗಿದೆ. ಬೆಂಗಳೂರಿನ ಮಡಿವಾಳ ಸೋಮೇಶ್ವರ ದೇವಾಲಯಕ್ಕೆ ೧೩೨೯ರ ವೇಳೆಗೆ ಒಬ್ಬ ದಂಡನಾಯಕನು ಕೊಂಡೆಯಾನಹಳ್ಳಿಯನ್ನು ದಾನ ಮಾಡಿರುವುದು ತಿಳಿದುಬರುತ್ತದೆ. ಗಾಣಿಗರಹಳ್ಳಿಯ ಒಂದು ಶಾಸನದಂತೆ ೧೩೪೨ರಲ್ಲಿ ಬಲ್ಲಾಳನ ಕೈ ಕೆಳಗೆ ಯಲಹಂಕದಲ್ಲಿ ಯಿರದೇವನು ನಾಡಪ್ರಭುವಾಗಿದ್ದನು.

ಜಕ್ಕೂರಿನ ಅದೇ ವರ್ಷದ ದಾಖಲೆಯಂತೆ ಅಲ್ಲಾಳ ಎಂಬಾತನು ನಾಡಸೇನ ಭೂವನಾಗಿದ್ದನು. ಆತನು ಅಲ್ಲಾಳನಾಥ (ವರದರಾಜ) ದೇವಾಲಯವನ್ನು ಕಟ್ಟಿಸಿದನು. ಅಲ್ಲಾಳಸಂದ್ರ (ಹಿಂದೆ ಕೆರೆ ಇದ್ದ) ಗ್ರಾಮವಿದೆ. ಚಿಕ್ಕಜಾಲ, ನಾರಾಯಣಘಟ್ಟ (ನಾರಾಯಣ ಮಂದಿರ), ಬನ್ನೇರುಘಟ್ಟ ಇಲೆಲ್ಲಾ ಹೊಯ್ಸಳರ ದೇವಾಲಯಗಳಿವೆ. ಸೊಂಡೆಕೊಪ್ಪ ಇವರ ಕಾಲದಲ್ಲಿ ಅಗ್ರಹಾರವಾಯಿತು. ಈಗ ಅಲ್ಲಿರುವ ದೇವಾಲಯವೂ ಇವರ ಕಾಲದಲ್ಲೇ ನಿರ್ಮಾಣವಾದಂಥದ್ದು.[೧೩]

ವಿಜಯನಗರ ಸಾಮ್ರಾಜ್ಯ

ಹೊಯ್ಸಳರ ಅವನತಿಯ ತರುವಾಯ ಬೆಂಗಳೂರು ವಿಜಯನಗರದ ಆಳ್ವಿಕೆಗೆ ಒಳಪಟ್ಟಿತು. ವಿಜಯನಗರದ ಹರಿಹರನ ಮೊದಲ ಶಾಸನ ೧೩೪೦ರಲ್ಲಿ ನೆಲಮಂಗಲ ಹೋಬಳಿ ಬಾಣಸವಾಡಿಯಲ್ಲಿ ದೊರೆತಿದ್ದು, ಒಂದನೆಯ ಹರಿಹರನ ಉಲ್ಲೇಖವನ್ನು ಕುಕ್ಕಲನಾಡು ನಾಡಪ್ರಭು ಮಯಿಲೆನಾಯಕನು ಒಪ್ಪಿದ್ದನ್ನು ತಿಳಿಸುತ್ತದೆ. ದೊಡ್ಡಕನ್ನಲ್ಲಿಯ ೧೩೪೬ರ ಒಂದು ತಮಿಳು ಶಾಸನ 'ಮಹಾಮಂಡಲೇಶ್ವರ ಹರಿಯಪ್ಪ ಒಡೆಯ' ಮತ್ತು ಅವನ ಅಧೀನನಾಗಿ ವಲ್ಲಪ್ಪನನ್ನು ಉಲ್ಲೇಖಿಸುತ್ತವೆ. ಸಾದರಮಂಗಲದ ೧೩೪೬ರ ಶಾಸನವು ಹರಿಯಪ್ಪ ಮತ್ತು ಅವನ ಸೋದರ ಬುಕ್ಕರು ಜಂಟಿ ಅರಸರೆಂದು ತಿಳಿಸುತ್ತದೆ. ೧೩೪೦ರ ಬಾಣಸವಾಡಿ ಶಾಸನವು ಹರಿಹರನನ್ನು ''ಚಂತು ಸ್ಸಮುದ್ರಾಧಿಪತಿ'' ಎಂದೂ ಆಗಲೇ ರಾಜತ್ವದ ಸ್ಥಾನಮಾನವನ್ನು ಹೊಂದಿದ್ದ ಎಂದು ತಿಳಿಸುತ್ತದೆ. ೧೩೪೬ರ ಶೃಂಗೇರಿ ಶಾಸನದಿಂದ ಹರಿಹರನು ಸಂಗಮ ವಂಶದಿಂದ ವಿಜಯನಗರ ಸಾಮ್ರಾಜ್ಯವನ್ನು ಸ್ವತಂತ್ರವಾಗಿ ಆಳ್ವಿಕೆ ನಡೆಸಲು ಆರಂಭಿಸಿದ್ದು ಸ್ಪಷ್ಟವಾಗುತ್ತದೆ.

ದಾನ-ದತ್ತಿಗಳು

೧೩೬೩ರ ಶಾಸನವು ಬುಕ್ಕನ ಪುತ್ರ ಕಂಪಣ ಮುಳಬಾಗಿಲು ಕೇಂದ್ರದಿಂದ ಬೆಂಗಳೂರು ಪರಿಸರದ ಮೇಲೆ ಆಳುತ್ತಿದ್ದನೆಂಬುದನ್ನು ಉಲ್ಲೇಖಿಸುತ್ತದೆ. ಕಂಪಣನ ಮಗ ಕಾಮಯ್ಯ ನಾಯಕನು ಯಲಹಂಕ ನಾಡಿನ ತನಿಯಪ್ಪ ನಾಯಕ ಎಂಬಾತನಿಗೆ ದಾನ ನೀಡಿದ ವಿಚಾರ ಶಾಸನದಲ್ಲಿದೆ. ೧೩೬೫ ಹಾಗೂ ೧೩೬೬ರಲ್ಲಿ ಹಲವು ದಾನಗಳನ್ನು ಮಡಿವಾಳದ ಸೋಮೇಶ್ವರ ದೇವಾಲಯಕ್ಕೆ ನೀಡಿದ್ದು. ಈ ದೇವಾಲಯದ ಆಡಳಿತಗಾರರನ್ನು ಚಿತ್ರಮೇಳಿಯ ರುದ್ರಶೀಮಹೇಶ್ವರರೆಂದು ಕರೆದಿದೆ. ೧೩೮೦ರ ಆನೇಕಲ್ ಬಳಿಯ ಮುರಸೂರಿನ ಬಳಿ ದೊರೆತಿರುವ ಶಾಸನವು ಆದಿ ನಾರಾಯಣ ದೇವಾಲಯವನ್ನು ಬುಕ್ಕನು ಪುಣ್ಯಾರ್ಥಕ್ಕಾಗಿ ಕಟ್ಟಿಸಿರುವುದಾಗಿ ತಿಳಿಸುತ್ತದೆ. ಬುಕ್ಕನ ಮಗ ೨ನೇ ಹರಿಹರನಿಗೆ ಕ್ರಿ.ಶ. (೧೩೭೭-೧೪೦೪) ಪಟ್ಟಾಭಿಷೇಕವಾಗುತ್ತದೆ. ನಂತರ ವಿರೂಪಾಕ್ಷ (೧೪೦೪-೦೫) ಮುಂದೆ ಹರಿಹರನ ಇನ್ನೊಬ್ಬ ಮಗ ದೇವರಾಯ ಅಧಿಕಾರ ವಹಿಸಿಕೊಳ್ಳುತ್ತಾನೆ. ಈತನ ಸೋಲೂರು ಶಾಸನದಲ್ಲಿ ಈ ಭಾಗದ ಸಾಮ್ರಾಜ್ಯದ ಅಧಿಕಾರಿ ಹಿರಣ್ಣ ದಂಡನಾಯಕನು ಯಲಹಂಕನಾಡಿನ ಉಸ್ತುವಾರಿ ವಹಿಸಿದ್ದನು ಎನ್ನುವ ಮಾಹಿತಿ ದೊರಕುತ್ತದೆ.[೧೩]

ಈ ಭಾಗದ ಆರ್ಥಿಕ ಚಟುವಟಿಕೆಗಳು ಸಾಮ್ರಾಜ್ಯವು ಸ್ಥಾಪಿಸಿದ ಸಂತೆಗಳಿಂದ ಹೆಚ್ಚಾದವು ಎನ್ನುವ ಅಂಶ ತಿಳಿಯುತ್ತದೆ. ಒಂದು ಹಳ್ಳಿಯಲ್ಲಿ ವಾರದ ಸಂತೆ ಆರಂಭಿಸಿದರೆ ಅದು ಪಟ್ಟಣವೆನಿಸಿ ಅದಕ್ಕೆ ಒಬ್ಬ ಗಣ್ಯ ವ್ಯಾಪಾರಿಯನ್ನು ಪಟ್ಟಣಶೆಟ್ಟಿ ಅಥವಾ ಪಟ್ಟಣಸ್ವಾಮಿ ಎಂದೂ ನೇಮಿಸಿ ಆತನು ಸಂತೆಯ ಉಸ್ತುವಾರಿ ಸುಂಕವಸೂಲಿ ಮತ್ತು ಊರಿನ ಇತರ ಸಾರ್ವಜನಿಕ ಸಂಗತಿಗಳನ್ನು ಗಮನಿಸುತ್ತಿದ್ದನು.

ಎರಡನೆಯ ದೇವರಾಯನ ಕಾಲದಲ್ಲಿ ಮೊರಸು ನಾಡಿನ ನಾಯಕತನ ವಹಿಸಿದ್ದ ಮುದಿಯನ ನಾಯಕತನಕ್ಕೆ ಸೇರಿದ ಕೋಮಗೊಂಡನ ಹಳ್ಳಿಯಲ್ಲಿ ೧೪೧೨ರಲ್ಲಿ ವಾರದ ಸಂತೆ ಆರಂಭಿಸಲಾಯಿತು. ಹಿಮ್ಮರೆನಾಡಿನ ನಾಯಕತನ ವಹಿಸಿದ್ದ ದಂಡನಾಯಕನ ಕಾಲದಲ್ಲಿ ಆಗಿನ ಚಿಲಗೊಂಡನಹಳ್ಳಿ (ಈಗಿನ ಸರ್ಜಾಪುರ) ಆನೇಕಲ್ ತಾಲೂಕಿನಲ್ಲಿ ಸಂತೆಯನ್ನು ೧೪೨೨ರಲ್ಲಿ ಆರಂಭಿಸಲಾಯಿತು. ದೇವರಾಯನ ಅಣ್ಣ ೩ನೇ ಬುಕ್ಕನ ಮಗ ಮಲ್ಲಪ್ಪ ಒಡೆಯನು ಬನ್ನೇರುಘಟ್ಟದ ಚಂಪಕಧಾಮ ಸ್ವಾಮಿ ದೇವಾಲಯಕ್ಕೆ ೧೪೨೧ ದಾನ ನೀಡಿದನು. ಒಂದನೇ ದೇವರಾಯನ ಮಗನಾದ ವಿಜಯರಾಯನ ಒಂದು ಶಾಸನ ದೊರೆತಿದ್ದು, ಅದರಲ್ಲಿ ವಿಜಯರಾಯನ ಪುತ್ರ ೩ನೇ ದೇವರಾಯ (ಕ್ರಿ.ಶ.೧೪೨೨-೧೪೪೪)ನ ಕಾಲಾವಧಿಯಲ್ಲಿ ಮೂರಸುನಾಡಿನ ಪ್ರಭು ಚೊಕ್ಕದೇವ ಆನೇಕಲ್ ತಾಲೂಕು ಮಾಸ್ತೇನ ಹಳ್ಳಿಯಲ್ಲಿ ವಾರದ ಸಂತೆಯನ್ನು ಆರಂಭಿಸಿ ೧೪೨೭ರಲ್ಲಿ ಪಟ್ಟಣಶೆಟ್ಟಿಯೊಬ್ಬನನ್ನು ನೇಮಿಸಿದ ವಿವರ ಸಿಗುತ್ತದೆ. ಬೊಮ್ಮಸಂದ್ರವನ್ನು ಆಗ್ರಹಾರವಾಗಿ ಪರಿವರ್ತಿಸಿ ವಿದ್ವಾಂಸರನ್ನು ನೆಲೆಗೊಳಿಸಲಾಯಿತು. ೧೪೩೧ರ ಕೋಡಿಹಳ್ಳಿಯ ಒಂದು ಶಾಸನ ಶಿವನ ಸಮುದ್ರ (ಹೆಸರು ಘಟ್ಟ)ದಲ್ಲಿ ಮಂಗಪ್ಪ ನಾಯಕನ ಪುತ್ರ ಪ್ರತಾಪರಾಯ ಅಧಿಕಾರಿಯಾಗಿದ್ದನ್ನು ತಿಳಿಸುತ್ತದೆ. ೧೪೪೮ರ ಶಾಸನ ದೊಮ್ಮಲೂರಿನ

[illegible]

[illegible]

ಚೊಕ್ಕನಾಥ ದೇವಾಲಯಕ್ಕೆ ಸೊಂಡೆ ಕೊಪ್ಪದಿಂದ ಕೆಲವು ಆದಾಯವನ್ನು ದಾನ ಮಾಡಿದ್ದನ್ನು ಉಲ್ಲೇಖಿಸುತ್ತದೆ. ಜುಂಜುನಾಯಕ ಎಂಬಾತ ನೆಲಮಂಗಲದ ನಾಯಕತನ ಹೊಂದಿದ್ದನೆಂದು ಹೇಳುವ ೧೪೬೪ರ ಒಂದು ಶಾಸನವಿದೆ. ಈ ಕಾಲದಲ್ಲಿ ಸಾಮ್ರಾಜ್ಯದ ಹಿಡಿತ ಪೂರ್ವ ಮತ್ತು ದಕ್ಷಿಣದಲ್ಲಿ ದುರ್ಬಲವಾಯಿತು. ಸಾಮ್ರಾಜ್ಯದ ಪ್ರಮುಖ ಅಧಿಕಾರಿಯಾಗಿ ಚಂದ್ರಗಿರಿಯಿಂದ ಈ ಕಾಲದಲ್ಲಿ ಆಳುತಿದ್ದ ಸಾಳುವ ನರಸಿಂಹ ತನ್ನ ಸೇನಾನಿ ತುಳುವ ಈಶ್ವರ ನಾಯಕನ ನೇತೃತ್ವದಲ್ಲಿ ತನ್ನ ಸೈನ್ಯ ಕಳುಹಿಸಿ ಬೆಂಗಳೂರು, ನಾಗಮಂಗಲ, ಶ್ರೀರಂಗಪಟ್ಟಣ ಗೆದ್ದನು. ಬೆಂಗಳೂರು ಜಿಲ್ಲೆಯಲ್ಲಿ ೧೪೭೮ರ ಸಾಳುವ ನರಸಿಂಹನ ಶಾಸನಗಳು ಚಿಕ್ಕಲೂರು, ಮಳಲವಾಡಿ (೧೪೮೧) ಹುಲೀಕಟ್ಟೆ (೧೪೮೮) ಮುಂತಾದ ಪ್ರದೇಶಗಳಲ್ಲಿ ದೊರೆತಿದೆ.[೧೪]

ಸಾಳುವ ನರಸಿಂಹನು ೧೪೮೫ರಲ್ಲಿ ಸಂಗಮ ವಂಶವನ್ನು ಪದಚ್ಯುತಿಗೊಳಿಸಿ ಅಧಿಕಾರ ರೂಢನಾದನು. ೧೪೯೧ರಲ್ಲಿ ಸಾಳುವ ನರಸಿಂಹನು ಮರಣಹೊಂದಿದಾಗ ತುಳುವ ನರಸನಾಯಕ ಅಧಿಕಾರವಹಿಸಿಕೊಂಡನು. ಚನ್ನಪಟ್ಟಣ ತಾಲೂಕು ಕೋಡಂಬಳ್ಳಿಯಲ್ಲಿ ೧೪೯೯ರಲ್ಲಿ ನರಸನಾಯಕನ ವಿವರದ ಒಂದು ದಾನ ಶಾಸನವಿದೆ. ನರಸನಾಯಕನ ತರುವಾಯ ಅವನ ಪುತ್ರರಾದ ವೀರನರಸಿಂಹ (ಕ್ರಿ.ಶ.೧೫೦೫-೧೫೦೯) ಕೃಷ್ಣದೇವರಾಯ (ಕ್ರಿ.ಶ.೧೫೦೯-೧೫೩೦), ಅಚ್ಯುತರಾಯ (ಕ್ರಿ.ಶ.೧೫೨೯-೧೫೪೨) ನಂತರ ಆಳಿದ ಚಕ್ರವರ್ತಿಗಳಾಗಿದ್ದಾರೆ. ಇವರ ಆಳ್ವಿಕೆಯ ಕಾಲಾವಧಿಯಲ್ಲಿ ಬೆಂಗಳೂರು ಪ್ರದೇಶದಲ್ಲಿ ಅನೇಕ ಚಟುವಟಿಕೆಗಳಾದವು. ಕೆಂಪೇಗೌಡರು ಬೆಂಗಳೂರು ಕೋಟೆ ಕಟ್ಟಿದ್ದು ಅಚ್ಯುತರಾನ ಕಾಲದಲ್ಲಿ. ೧೫೦೬ರಲ್ಲಿ ಹೊಸಕೋಟೆ ತಾಲೂಕು ಜ್ಯೋತಿಪುರ ಸೋಮೇಶ್ವರ ದೇವಾಲಯಕ್ಕೆ ವೀರ ನರಸಿಂಹನು ದಾನ ನೀಡಿದ ಶಾಸನವಿದೆ.

ಕೃಷ್ಣದೇವರಾಯ (ಕ್ರಿ.ಶ.೧೫೦೯ ೧೫೨೯)

ಕೃಷ್ಣದೇವರಾಯನು ದೊಡ್ಡಬಳ್ಳಾಪುರ ತಾಲೂಕು ಲಿಂಗಾಪುರದ ಲಕ್ಷ್ಮಿದೇವಾಲಯಕ್ಕೆ ೧೫೧೦ರಲ್ಲಿ ದಾನ ನೀಡಿದ ಶಾಸನವಿದೆ. ಮಾಗಡಿ ತಾಲೂಕು ಕಲ್ಯದ ಕಲಿನಾಥ ದೇವಾಲಯಕ್ಕೆ ೧೫೧೨ರ ದಾನ ನೀಡಿದ ಬಗ್ಗೆ ಪ್ರಸ್ತಾಪಿಸಲಾಗಿದೆ.

ಬೆಂಗಳೂರಿನ ಅಗರದ ಕೆರೆಯನ್ನು ದುರಸ್ತಿಗೊಳಿಸಲು ಕೊಡುಗೆ ನೀಡಿದ ಕೃಷ್ಣದೇವರಾಯನ ಕಾಲದ ೧೫೧೫ರ ಶಾಸನವಿದೆ. ಅಬ್ಬೂರೂ ಚನ್ನಪಟ್ಟಣ ತಾಲೂಕು ತಾಮ್ರಪಟದಲ್ಲಿ ವ್ಯಾಸತೀರ್ಥರಿಗೆ ದಾನ ನೀಡಿದ ಉಲ್ಲೇಖವಿದೆ.

ಅಚ್ಯುತರಾಯ (ಕ್ರಿ.ಶ.೧೫೨೯ ೧೫೪೨)

ಈತನ ಕಾಲದಲ್ಲಿ ಬೆಂಗಳೂರು ಪ್ರದೇಶದಲ್ಲಿ ಅನೇಕ ಚಟುವಟಿಕೆಗಳಾಗಿರುವುದಕ್ಕೆ ಶಾಸನಗಳ ದಾಖಲೆ ಇದೆ. ಮಾಗಡಿ ತಾಲೂಕು ಕಲ್ಯದ ಕಲ್ಲೇಸ್ವರ ದೇವಾಲಯಕ್ಕೆ ಅಚ್ಯುತರಾಯನ ಅಧಿಕಾರಿ ಸಿಂಗರಾಜ ೧೫೩೧ರಲ್ಲಿ ದಾನ ಮಾಡಿದನು. ಶಿವಗಂಗೆಯ ಗಂಗಾಧರ ದೇವಾಲಯಕ್ಕೆ ನೆಲಮಂಗಲದ ಶ್ರೀಪತಿಹಳ್ಳಿಯನ್ನು ಅಚ್ಯುತರಾಯನ ಸೇವಕ ಕಾಮನಾಯಕ ಕೊಡುಗೆಯಾಗಿ ನೀಡಿದನು. ಅಚ್ಚುತರಾಯನು ಮಾಗಡಿಯ ಕಾಮಪುರದಲ್ಲಿ ಒಂದು

ಅಗ್ರಾಹರ ಸ್ಥಾಪಿಸಿದನು. ಸೋಲೂರು ಸೀಮೆಯ ಜನರ ಮದುವೆ ಸುಂಕವನ್ನು ೧೫೩೭ರಲ್ಲಿ ಮನ್ನಾ ಮಾಡಿ ಮಾಗಡಿಯ ಮಲ್ಲಸಂದ್ರ ತಿರುಮಲಾನಾಥ ದೇವಾಲಯಕ್ಕೂ ದಾನ ನೀಡಿದನು.[೧೫] ಕೆಂಪೇಗೌಡನಿಗೆ ಯಲಹಂಕ ನಾಡಿನ ನಾಯಕತನವನ್ನು ೧೫೩೨ರಲ್ಲಿ ಅಚ್ಯುತರಾಯ ನೀಡಿದನು. ಹೆಸರಘಟ್ಟವನ್ನು ಶಿವನ ಸಮುದ್ರ ಎಂದು ನಾಮಕರಣ ಮಾಡಿ ಅಗ್ರಹಾರವಾಗಿ ಮಾಡಿ ಇಲ್ಲಿ ದೇವಾಲಯವನ್ನು ನಿರ್ಮಿಸಿದನು. ಅರ್ಕಾವತಿ ನದಿಗೆ ಆಣೆಕಟ್ಟು ಕಟ್ಟಿ ಶಿವ ಸಮುದ್ರ ಜಲಾಶಯ ನಿರ್ಮಿಸಿದನು. ಬೆಂಗಳೂರು ಕೋಟೆಯನ್ನು ಕಟ್ಟಲು ಯಲಹಂಕ ನಾಡಿನ ಪ್ರಭು ಕೆಂಪೇಗೌಡರಿಗೆ ಅಚ್ಯುತರಾಯನು ಆದೇಶ ನೀಡದಂತೆ ೧೫೩೭ರಲ್ಲಿ ಈ ಕೋಟೆ ಸಿದ್ಧವಾಯಿತೆಂದು ತಿಳಿದು ಬರುತ್ತದೆ.

ಅಚ್ಯುತರಾಯನ ನಂತರ ಅವನ ಮಗ ವೆಂಕಟನನ್ನು ಅಚ್ಯುತರಾಯನ ಭಾವಮೈದ ಸಕಲ ತಿರುಮಲನು ಕೊಲೆ ಮಾಡಲು ೧೫೪೨ರಲ್ಲಿ ರಂಗರಾಯನ ಮಗ ಸದಾಶಿವರಾಯನಿಗೆ ಪಟ್ಟ ಕಟ್ಟಿದರು. ಈತನ ಪಕ್ಷವನ್ನು ಅರವೀಡು ರಾಮರಾಯನು ಬೆಂಬಲಿಸಿ ಕ್ರಮೇಣ ಅಧಿಕಾರವನ್ನು ಪಡೆದು ಸದಾಶಿವನನ್ನು ನಾಮಾಮಾತ್ರ ಅರಸನಾಗಿ ಮಾಡಿದನು. ಅರವೀಡ ದೊರೆ ರಾಮರಾಯನು ಸಾಮ್ರಾಜ್ಯವನ್ನು ಉತ್ತರದಲ್ಲಿ ವಿಸ್ತರಿಸಿದನು. ಆದರೆ ೧೫೬೫ರ ರಕ್ಕಸತಂಗಡಿ ಯುದ್ಧದಲ್ಲಿ ವಿಜಯನಗರ ಸೈನ್ಯ ಸೋತು ರಾಮರಾಯ ಹತನಾದನು.

ಬೆಂಗಳೂರಿನ ಆಡಳಿತವನ್ನು ಕೆಂಪೇಗೌಡ ವಂಶಸ್ಥರು ನಿರ್ವಹಿಸಿದರು ಮತ್ತು ವಿಜಯನಗರ ಸಾಮ್ರಾಜ್ಯವು ೧೬೪೬ರಲ್ಲಿ ನಾಶವಾಗುವ ವರೆಗೂ ಅವರಿಗೆ ನಿಷ್ಠೆಯಿಂದ ಇದ್ದರು. ಕೆಂಪೇಗೌಡ ವಂಶಸ್ಥರು ೧೬೩೦ ರಿಂದ ೧೭೧೩ರ ವರೆಗಿನ ತಮ್ಮ ದಾಖಲೆಗಳಲ್ಲಿ ವಿಜಯನಗರ ಸಾಮ್ರಾಜ್ಯದ ಮಾಂಡಳೀಕರೆಂದು ಒಪ್ಪಿಕೊಂಡಿದ್ದಾರೆ. ವಿಜಯನಗರ ಕಾಲದಲ್ಲಿ ಬೆಂಗಳೂರು ಪ್ರದೇಶದಲ್ಲಿ ಸಮೃದ್ಧ ಕೃಷಿ, ಹಾಗೂ ವ್ಯಾಪಾರ ಬೆಳೆಯಿತು. ಅನೇಕ ಪೇಟೆ-ಪಟ್ಟಣಗಳು ಬೆಳೆದವು. ಅಗ್ರಹಾರಗಳು, ದೇವಾಲಯಗಳು ಧಾರ್ಮಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಯ ಕೇಂದ್ರಗಳಾಗಿದ್ದವು. ಹೆಸರಘಟ್ಟ, ಬನ್ನೇರುಘಟ್ಟ, ಮಡಿವಾಳ, ಯಲಹಂಕ, ಅಗರ, ಬೊಮ್ಮಸಂದ್ರ, ಹೂಡಿ, ದೊಮ್ಮಲೂರು, ಚಿಕ್ಕಜಾಲ ಬೇಗೂರು ಮುಂತಾದವು ಬೆಂಗಳೂರು ಪ್ರದೇಶದ ಊರುಗಳಾಗಿದ್ದವು.

ಯಲಹಂಕ ನಾಡ ಪ್ರಭುಗಳು

ಬೆಂಗಳೂರು ನಗರದ ನಿರ್ಮಾಪಕರಾದ ಕೆಂಪೇಗೌಡರ ವಂಶಸ್ಥರು ಯಲಹಂಕ ನಾಡ ಪ್ರಭುಗಳಾಗಿದ್ದರು ಇವರು ೧೪ನೇ ಶತಮಾನದಿಂದ ಆಳ್ವಿಕೆ ನಡೆಸುತ್ತಿದ್ದ ಕುರಿತು ಶಾಸನಗಳು ದೊರೆತಿವೆ. ೧೫೩೭ರಲ್ಲಿ ಒಂದನೆ ಕೆಂಪೇಗೌಡ ಬೆಂಗಳೂರಿನ ಕೋಟೆಯನ್ನು ಕಟ್ಟಿಸಿ, ವಿವಿಧ ವೃತ್ತಿಯ ಜನರು ಅಲ್ಲಿ ನೆಲೆಸುವಂತೆ ಮಾಡಿದನು. ೧೫೩೨ರಲ್ಲಿ ವಿಜಯನಗರದ ಅಚ್ಯುತರಾಯನು ಇವರಿಗೆ ನಾಡಿನ ಪಾಳೇಗಾರಿಕೆಯನ್ನು ನೀಡಿದ್ದನು ಎನ್ನುವ ಅಂಶವನ್ನು ಬೆಂಗಳೂರು ನಂ-೫೫ರ ಶಾಸನ ತಿಳಿಸುತ್ತದೆ. ಹಾಗೆಯೇ ಬೆಂಗಳೂರು ಈ ವಂಶದ ಕೇಂದ್ರವಾಯಿತು. ಈ ವಂಶದ ಮೂಲವನ್ನು ಕುರಿತು ಹಲವಾರು ಐತಿಹ್ಯಗಳಿವೆ.

ಇವರು ಕಂಚಿಯ ಯಣಮಂಚಿ ಪುತ್ತೂರಿನಿಂದ ವಲಸೆ ಬಂದವರೆಂದು ಐತಿಹ್ಯಗಳಿವೆ ಹಾಗೂ ಇವರು ಆವತಿ ನಾಡ ಪ್ರಭುಗಳ ವಂಶಸ್ಥರೆಂದು ಐತಿಹ್ಯಗಳು ಹೇಳುತ್ತವೆ. ಆವತಿ ನಾಡ ಪ್ರಭುಗಳ ಶಾಸನಗಳು ೧೫೪೮ಕ್ಕಿಂತ ಮೊದಲೇ ದೊರೆತಿಲ್ಲ. ೧೫೦೦ಕ್ಕೂ ಮೊದಲು ಅವರು ಆಳಿದ ಸೂಚನೆಗಳು ಕಾಣಿಸವು. ಸೂಣ್ಣಪ್ಪ ಆತನ ಮಗ ಭೈರವನ ಶಾಸನದಲ್ಲಿ ಸಿಗುವ ವಂಶದ ವ್ಯಕ್ತಿಗಳ ಮಾಹಿತಿಯಾಗಿದೆ. ಕೆಂಪೇಗೌಡರು ಮೊಸರು ಒಕ್ಕಲಿಗರೆಂಬುದು ಖಚಿತ. ಶಾಸನಗಳಲ್ಲಿ ತಮ್ಮನ್ನು ಚತುರ್ಥಗೋತ್ರದವರೆಂದಿದ್ದಾರೆ. ಮೊರಸುನಾಡು ಎಂಬುದು ಕೋಲಾರ, ಬೆಂಗಳೂರು ಹಾಗೂ ಧರ್ಮಪುರಿ ಜಿಲ್ಲೆಗಳ ಪ್ರದೇಶವಾಗಿದೆ.

ಶಿವಗಂಗೆಯ ಗಂಗಾಧರೇಶ್ವರ ದೇವಾಲಯದ ಬೃಹತ್ ಗಂಟೆಯ ಮೇಲಿರುವ ೧೫೭೮ರ ಬರಹದಲ್ಲಿ ಕೆಂಪನಾಚೇಗೌಡ ಹೆಸರಿನ ಉಲ್ಲೇಖವಿದೆ. ಯಲಹಂಕ ನಾಡಿನ ಮುಖ್ಯ ಪಟ್ಟಣ ಯಲಹಂಕವೇ ಆಗಿತ್ತು. ಯಲಹಂಕ ನಾಡಿನ ಪ್ರಭುಗಳ ರಾಜಧಾನಿ ಯಲಹಂಕ. ಜಯಗೌಡನು, ಅವನ ಮಗ ಕೆಂಪನಂಜೇಗೌಡನು, ಕೆಂಪೇಗೌಡನು ಯಲಹಂಕದಿಂದಲೇ ರಾಜ್ಯಾಡಳಿತ ಸೂತ್ರವನ್ನು ನಡೆಸುತ್ತಿದ್ದರು.[೧೬]

ಬೆಂಗಳೂರಿನ ಪೇಟೆಗಳು

ಬೆಂಗಳೂರಿನ ಕೋಟೆಯನ್ನು ಕಟ್ಟುತ್ತಿರುವಾಗ ಕೋಟೆ ಬಾಗಿಲು ನಿಲ್ಲಲಾಗದೆ ಸದಾ ಬೀಳುತ್ತಿತ್ತು. ಈ ಕೋಟೆಯ ಬಾಗಿಲು ನಿಲ್ಲಲು ಕೆಂಪೇಗೌಡರ ಸೊಸೆ ಗರ್ಭಿಣಿ ಲಕ್ಷ್ಮಮ್ಮ ಬಲಿದಾನ ಮಾಡಿಕೊಂಡಳು ಎಂಬ ಕಥೆಗಳಿದ್ದು, ಕೆಂಪೇಗೌಡನು ಸೊಸೆಯ ಜ್ಞಾಪಕಾರ್ಥವಾಗಿ ಕೋರಮಂಗಲದಲ್ಲಿ ಒಂದು ದೇವಾಲಯವನ್ನು ನಿರ್ಮಿಸಿದ.[೧೭] ಈ ದೇವಾಲಯದ ಸಮೀಪದಲ್ಲಿ ಲಕ್ಷ್ಮಮ್ಮನ ಸ್ಮಾರಕವೂ ಇದೆ.

೧೫೩೭ರಲ್ಲಿ ಕೆಂಪೇಗೌಡನು ದೊಡ್ಡಪೇಟೆ ಮತ್ತು ಚಿಕ್ಕಪೇಟೆ ಕೂಡುವ ಸ್ಥಳದಲ್ಲಿ ನಾಲ್ಕು ದಿಕ್ಕುಗಭಿಮುಖವಾಗಿ ನೇಗಲಿಗೆ ಕಟ್ಟಿದ ಎತ್ತುಗಳನ್ನು ನಾಲ್ಕು ದಿಕ್ಕುಗಳಿಗೆ ಆರು ಹೊಡಿಸಿದನು. ಪೂರ್ವ ದಿಕ್ಕಿನಲ್ಲಿ ಹಲಸೂರು ಬಾಗಿಲಿನವರೆಗೆ, ಪಶ್ಚಿಮಕ್ಕೆ ಸೊಂಡೇಕೊಪ್ಪ ಬಾಗಿನವರೆಗೆ, ಉತ್ತರಕ್ಕೆ ಯಲಹಂಕ ಬಾಗಿಲಿನವರೆಗೆ, ದಕ್ಷಿಣಕ್ಕೆ ಕೋಟೆಯ ಬಾಗಿಲಿನವರೆಗೆ ನೇಗಿಲಿನ ಗೆರೆಗಳು ಬಿದ್ದವು. ಮುಂದೆ ಇದೇ ಗೆರೆಗಳನ್ನನುಸರಿಸಿ ಮುಖ್ಯರಸ್ತೆಗಳು ನಿರ್ಮಾಣವಾದವು. ಕೆಂಪೇಗೌಡನು ತನ್ನ ಕುಟುಂಬದವರನ್ನು ಹೊಸ ರಾಜಧಾನಿಗೆ ಕರೆಸಿಕೊಂಡನು. ಯಲಹಂಕದಿಂದ ವಲಸೆ ಬಂದ ಜನಗಳಿಗೆ ಹೊಸ ಪಟ್ಟಣದಲ್ಲಿ ನಿವೇಶನಗಳನ್ನು ನೀಡಲಾಯಿತು. ರಾಜ ಬೀದಿಗಳು ನಿರ್ಮಾಣವಾದವು. ಗೌಡನು ನೆರೆ ಊರುಗಳಿಂದ ನೆರೆ ರಾಜ್ಯಗಳಿಂದ ವೃತ್ತಿ ಬಾಂಧವರನ್ನು ಕರೆಸಿ, ಅವರವರ ವೃತ್ತಿಗನುಸಾರವಾಗಿ ಪೇಟೆಗಳನ್ನು ವಿಂಗಡಿಸಿ ಅವರನ್ನು ನೆಲೆಗೊಳಿಸಿದನು.

ಸೀರೆ-ಬಟ್ಟೆ ಮೊದಲಾದವುಗಳನ್ನು ನೇಯುವವರಿಗೆ (ಮಗ್ಗದವರಿಗೆ) ಅರಳೇಪೇಟೆ, ಮಂಗಳ ದ್ರವ್ಯಗಳಾದ ಅರಿಶಿನ, ಕುಂಕುಮ, ಹೂವು, ಬಳೆ ವಸ್ತುಗಳಿಗಾಗಿ ಬಳೇಪೇಟೆ, ಸಗಟು ವ್ಯಾಪರಿಗಳಿಗೆ ದೊಡ್ಡಪೇಟೆ, ಚಿಲ್ಲರೆ ಮಾರಾಟಗಾರರಿಗೆ ಚಿಕ್ಕಪೇಟೆ, ಅಕ್ಕಿ ವ್ಯಾಪಾರಿಗಳಿಗಾಗಿ ಅಕ್ಕಿಪೇಟೆ, ರಾಗಿ ಮಾರಾಟ ಮಾಡುವವರಿಗೆ ರಾಗಿಪೇಟೆ,

[illegible]

ಕುಂಬಾರರಿಗೆ ಕುಂಬಾರಪೇಟೆ, ಹೀಗೆ ವೃತ್ತಿಗಳಿಗನುಸಾರವಾಗಿ ನಿರ್ಮಾಗೊಂಡವು. ಹೀಗೆ ಬೆಂಗಳೂರು ಒಂದು ಪ್ರಮುಖ ವ್ಯಾಪಾರ ಕೇಂದ್ರವಾಗಿ ಬೆಳೆಯಲಾರಂಭಿಸಿತು.[೧೮]

ಕೋಟೆಯ ಬಾಗಿಲುಗಳು

ಕೆಂಪೇಗೌಡನು ಕಟ್ಟಿದ ಕೋಟೆಯು ಈಗ ಪೂರ್ಣ ನಾಮಾವಶೇಷವಾಗಿವೆ. ಆದರೆ ಅದರ ಗಡಿಗಳನ್ನು ಗುರುತಿಸುವ ಕೆಲವು ಕುರುಹುಗಳು ಈಗಲೂ ಇವೆ. ಈ ಕೋಟೆಗೆ ನವದ್ವಾರಗಳಿದ್ದವು. ಅವುಗಳಲ್ಲಿ ಕೆಲವನ್ನು ಈಗಲೂ ಗುರುತಿಸಬಹುದು. ಪೂರ್ವಕ್ಕೆ ಹಲಸೂರು ಬಾಗಿಲು, (ಈ ಸ್ಥಳದಲ್ಲಿ ಈಗ ಹಲಸೂರು ಗೇಟ್ ಪೊಲೀಸ್ ಸ್ಟೇಷನ್ ಇದೆ.), ಪಶ್ಚಿಮಕ್ಕೆ ಸೊಂಟೇಕೊಪ್ಪ ಬಾಗಿಲು ಮತ್ತು ಕೆಂಗೇರಿ ಬಾಗಿಲು, (ಸೊಂಟೇಕೊಪ್ಪ ಬಾಗಿಲು ಇದ್ದ ಕಡೆ ಚಿಕ್ಕಪೇಟೆ ಪೊಲೀಸ್ ಸ್ಟೇಷನ್ ಇದೆ.), ಉತ್ತರಕ್ಕೆ ಯಲಹಂಕ ಬಾಗಿಲು ಮತ್ತು ಯಶವಂತಪುರ ಬಾಗಿಲು. (ಯಲಹಂಕ ಬಾಗಿಲು ಇದ್ದ ಸ್ಥಳದಲ್ಲಿ ಈಗ ಮೈಸೂರು ಬ್ಯಾಂಕ್ ಕಟ್ಟಡವಿದೆ. ಹಾಗೂ ಯಶವಂತಪುರ ಬಾಗಿಲು ಇದ್ದ ಜಾಗದಲ್ಲಿ ಉಪ್ಪಾರಪೇಟೆ ಪೊಲೀಸ್ ಸ್ಟೇಷನ್ ಇದೆ.), ದಕ್ಷಿಣಕ್ಕೆ ಆನೇಕಲ್ ಬಾಗಿಲು ಮತ್ತು ಕಾನಕನಹಳ್ಳಿ ಬಾಗಿಲು (ಆನೇಕಲ್ ಬಾಗಿಲು ಇದ್ದ ಸ್ಥಳದಲ್ಲಿ ಈಗ ಕಲಾಸಿ ಪಾಳ್ಯ ಪೊಲೀಸ್ ಸ್ಟೇಷನ್ ಇದೆ ಹಾಗೂ ಕಾನಕಾನಹಳ್ಳಿ ಬಾಗಿಲು ಬೆಂಗಳೂರು ಮೆಡಿಕಲ್ ಕಾಲೇಜಿನ ಹಿಂಭಾಗಕ್ಕೆ ಇತ್ತೆಂದು ಗುರುತಿಸಲಾಗಿದೆ.)[೧೯]

ಒಂದನೆಯ ಕೆಂಪೇಗೌಡನು ಪಟ್ಟಣದ ಪರಿಸರದೊಳಗಿನ ಧರ್ಮಾಂಬುದಿ, ಕೆಂಪಾಂಬುದಿ ಹಾಗೂ ಸಂಪಂಗಿ ಮುಂತಾದ ಕೆರೆಗಳನ್ನು ಕಟ್ಟಿಸಿದನು. ಕೆಂಪೇಗೌಡನ ಮಗ ಗಿಡ್ಡೇಗೌಡನು ತಂದೆಯ ಅನುಪಸ್ಥಿಯಲ್ಲಿ ಆಡಳಿತ ನೆಡೆಸಿದ ಎಂದು ಸಾಹಿತ್ಯ ಮೂಲಗಳಿಂದ ತಿಳಿದುಬರುತ್ತದೆ.

ಇಮ್ಮಡಿ ಕೆಂಪೇಗೌಡ

ಇಮ್ಮಡಿ ಕೆಂಪೇಗೌಡನ ತಾಮ್ರಪಟ ಶಾಸನದಲ್ಲಿ ಕ್ರಿ.ಶ.೧೫೨೭ರ ಕೆಂಪಾಪುರ ಅಗ್ರಹಾರ ಸ್ಥಾಪನೆ ಮಾಡಿ, ಅದರಲ್ಲಿ ೪೮ ವಿದ್ವಾಂಸರಿಗೆ ದಾನ ನೀಡಿದ ಉಲ್ಲೇಖವಿದೆ. ನಗರದ ನಾಲ್ಕು ಕಡೆ ಎಲ್ಲೆಕಟ್ಟುಗಳನ್ನು ಗುರುತಿಸಿ ಅಲ್ಲಿ ನಾಲ್ಕು ಕಾವಲು ಗೋಪುರಗಳನ್ನು ನಿಲ್ಲಿಸಿದನೆಂದು ಈ ಶಾಸನ ತಿಳಿಸುತ್ತದೆ. ಅವುಗಳೆಂದರೆ

೧. ಕೆಂಪಾಂಬುದಿ ಕೆರೆದಂಡೆ

೨. ವೈಯಾಲಿಕಾವಲ್

೩. ಹಲಸೂರು

೪. ಲಾಲ್‌ಬಾಗ್ ಬಳಿಯ ಬಂಡೆಯ ಮೇಲೆ

ಈ ತಾಮ್ರ ಶಾಸನದಲ್ಲಿ ಅರವೀಡು ವೆಂಕಟ (ಕ್ರಿಶ.೧೫೮೬-೧೬೧೪) ಸಾಮ್ರಾಟನೆಂದು ಹೇಳಿದೆ. ಕೆಂಪೇಗೌಡನ ರಾಜ್ಯದಲ್ಲಿ ಈಗಿನ ಬೆಂಗಳೂರುನಗರ ಕುಣಿಗಲ್, ರಾಮನಗರ ಹಾಗೂ ಮಾಗಡಿ ತಾಲೂಕಿನ ಪ್ರದೇಶಗಳು

[illegible]

[illegible]

[illegible]

[illegible]

[illegible]

ಸೇರಿದ್ದವು. ಬೆಂಗಳೂರು ನಗರದಲ್ಲಿರುವ ದೊಡ್ಡಪೇಟೆ ಮತ್ತು ಬಳೇಪೇಟೆಗೂ ಮಧ್ಯೆ ಇರುವ ಪ್ರದೇಶದಲ್ಲಿ ಇಮ್ಮಡಿ ಕೆಂಪೇಗೌಡನು ೧೬೨೮ರಲ್ಲಿ ರಂಗನಾಥಸ್ವಾಮಿ ದೇವಾಲಯವನ್ನು ಕಟ್ಟಿಸಿದನು. ಈ ದೇವಾಲಯದಲ್ಲಿ ದೊರೆತಿರುವ ಶಾಸನದಲ್ಲಿ ಕೆಲವೊಂದು ವ್ಯಾಪಾರಿ ಶ್ರೇಣಿಯವರು ದೇವಾಲಯಕ್ಕೆ ದಾನ ನೀಡಿದ ವಿವರಗಳನ್ನು ಗಮನಿಸಿದಾಗ ಬೆಂಗಳೂರು ಆಗಲೇ ಗಣ್ಯ ವ್ಯಾಪಾರಿ ನಗರವಾಗಿ ಬೆಳೆದ ಅಂಶ ಸ್ಪಷ್ಟವಾಗುತ್ತದೆ. ೧೬೩೦ರ ಒಂದು ಶಾಸನವು ಮಾಗಡಿ ರಾಮೇಶ್ವರ ದೇವಾಲಯಕ್ಕೆ ಇಮ್ಮಡಿ ಕೆಂಪೇಗೌಡ ಕಂಚುಗಾರನಹಳ್ಳಿ ಮತ್ತು ಹಾಲು ಶಿಂಗನಹಳ್ಳಿ ಎನ್ನುವ ಎರಡು ಗ್ರಾಮಗಳನ್ನು ದಾನಮಾಡಿರುವುದು ಕಂಡುಬಂದಿದೆ.

ಇಮ್ಮಡಿ ಕೆಂಪೇಗೌಡ ಮಗ ಮುಮ್ಮಡಿ ಕೆಂಪೇಗೌಡ (ಕ್ರಿ.ಶ.೧೬೩೩-೧೬೭೮) ವಿಜಯನಗರದ ಸಾಮ್ರಾಟ ೩ನೇ ವೆಂಕಟನ ವಿರುದ್ಧ ಬಂಡೆದ್ದ ಅನೇಕ ಮಾಂಡಲಿಕರನ್ನು ಸದೆಬಡಿದು ''ಸ್ವಾಮಿ ದ್ರೋಹರಗಂಡ'' ಎಂಬ ಬಿರುದು ಪಡೆದ ವಿಚಾರ ''ಕೆಂಪೇಗೌಡ ಜಯಪ್ರಶಸ್ತಿ'' ಸಾಹಿತ್ಯದಿಂದ ತಿಳಿದು ಬರುತ್ತದೆ. ಆದರೆ ಮುಮ್ಮಡಿ ಕೆಂಪೇಗೌಡನು ಬೆಂಗಳೂರನ್ನು ಆಳಿದ್ದು ಅಲ್ಪ ಕಾಲ. ಬಿಜಾಪುರದ ಸೇನೆ ೧೬೩೮ರ ವೇಳೆಗೆ ಬೆಂಗಳೂರಿನ ಮೇಲೆ ದಾಳಿಮಾಡಿ ಆತನನ್ನು ಮಾಗಡಿಯತ್ತ ಹೊರಡುವಂತೆ ಮಾಡಿತು.[೨೦]

ಬಿಜಾಪುರದ ಸುಲ್ತಾನರು

ವಿಜಯನಗರ ಸಾಮ್ರಾಜ್ಯ ತಾಳಿಕೋಟೆ ಕದನದಿಂದ ವಿನಾಶದ ಹಾದಿ ಹಿಡಿಯಿತು. ಬಿಜಾಪುರದ ಆದಿಲ್‌ಷಾಹಿಗಳು ಬಿಜಾಪುರದ ಕೀರ್ತಿ ಪತಾಕೆಯನ್ನು ದಕ್ಷಿಣ ಭಾರತದಾದ್ಯಂತ ವಿಸ್ತರಿಸುವ ಸಲುವಾಗಿ ಅವರ ದಂಡನಾಯಕ ರಣದುಲ್ಲಾಖಾನ್ ನೇತೃತ್ವದಲ್ಲಿ ದಂಡೆಯಾತ್ರೆಗೆ ಕಳುಹಿಸಿದ ವಿವರವು ''ಕಂಠೀರವ ನರಸರಾಜ ವಿಜಯ''ದಲ್ಲಿ ಉಲ್ಲೇಖಿಸಲಾಗಿದೆ. ರಣದುಲ್ಲಾಖಾನ್ ಕೆಳದಿ, ಬಸವಾಪಟ್ಟಣ ರಾಜ್ಯಗಳನ್ನು ಗೆದ್ದು ಹಿರಿಯೂರು, ಸಿರಾಗಳ ಮೂಲಕ ಬೆಂಗಳೂರನ್ನು ಮೂರು ದಿನಗಳ ಕಾಲ ಮುತ್ತಿದನು. ಬಲವಾದ ಫಿರಂಗಿ ಸೈನ್ಯ ಪಡೆಗಳನ್ನು ಒಳಗೊಂಡ ಭಾರೀ ಸೈನ್ಯವನ್ನು ಎದುರಿಸಲಾರದೆ ಮುಮ್ಮಡಿ ಕೆಂಪೇಗೌಡನು ಒಪ್ಪಂದ ಮಾಡಿಕೊಂಡನು. ಅದರಂತೆ ಕೆಂಪೇಗೌಡ ಬೆಂಗಳೂರನ್ನು ಬಿಟ್ಟುಕೊಟ್ಟು ಮಾಗಡಿಯನ್ನು ತನ್ನ ರಾಜ್ಯದ ರಾಜಧಾನಿಯಾಗಿ ಬದಲಾಯಿಸಿಕೊಂಡು ಬಿಜಾಪುರದ ಸುಲ್ತಾನರಿಗೆ ಕಪ್ಪ ಕಾಣಿಕೆ ನೀಡಲು ಒಪ್ಪಿದನು.[೨೧]

ಮರಾಠರು

ಗೋವಿಂದ ವೈದ್ಯ ಎಂಬ ಕವಿಯು ''ಕಂಠೀರವ ನರಸರಾಜ ವಿಜಯ'' ಕೃತಿಯಲ್ಲಿ ರಣದುಲ್ಲಾಖಾನ್ ತಾನು ಪಡೆದ ಬೆಂಗಳೂರನ್ನು ತನ್ನೊಂದಿಗೆ ಬಂದ ಷಾಹಜಿಗೆ ಬಿಟ್ಟು ಕೊಟ್ಟ ಬಗೆಯನ್ನು ತಿಳಿಸಲಾಗಿದೆ. ೧೬೭೫ರಲ್ಲಿ ಬಿಜಾಪುರದ ಆದಿಲ್‌ಷಾ ಮರಣಹೊಂದಿದ ತರುವಾಯ ತಂಜಾವೂರಿನಲ್ಲಿ ಹಕ್ಕುದಾರ ರಾಜನನ್ನು ಮೂಲೆಗೊತ್ತಿ ಷಾಹಜಿಯ ಮಗ ವೆಂಕೋಜಿ ಸ್ವತಂತ್ರವಾಗಿ ಆಳತೊಡಗಿದನು. ವೆಂಕೋಜಿ ಸಂಸಾರ ಸಮೇತ ತಂಜಾವೂರಿನಲ್ಲಿ ನೆಲೆಸಿದ್ದ. ಅವನಿಗೆ ಈ ವೇಳೆಗಾಗಲೇ ಬೆಂಗಳೂರಿನ ಮೇಲೆ ಆಸಕ್ತಿ ಕಡಿಮೆಯಾಗಿತ್ತು. ಆದ

ಕಾರಣ ಬೆಂಗಳೂರನ್ನು ಮಾರಲು ಯೋಚಿಸಿದನು. ಇದನ್ನರಿತ ಚಿಕ್ಕದೇವರಾಜ ಒಡೆಯರ್ ಮಾತುಕತೆಯ ಮೂಲಕ ಬೆಂಗಳೂರನ್ನು ಮೂರು ಲಕ್ಷರೂಪಾಯಿಗಳಿಗೆ ಕೊಳ್ಳಲು ಮುಂದಾದರು.

ಬೆಂಗಳೂರು ಮಾರಾಟವಾಗುವ ವಿಷಯ ವೆಂಕೋಜಿಯ ಅಣ್ಣ ಶಿವಾಜಿಗೂ ತಿಳಿಯಿತು. ಶಿವಾಜಿಯು ಉತ್ತರದಲ್ಲಿ (ಮಹಾರಾಷ್ಟ್ರ-ಕರ್ನಾಟಕ) ರಾಜ್ಯ ಕಟ್ಟಿ ೧೬೭೪ರಲ್ಲಿ ಛತ್ರಪತಿ ಎಂದೂ ಪಟ್ಟಾಭಿಷೇಕ ಮಾಡಿಸಿಕೊಂಡಿದ್ದನು. ತನ್ನ ತಂದೆಯ ದಕ್ಷಿಣದ ಜಾಗೀರು ಪಾಲು ಪಡೆಯಲು ದಕ್ಷಿಣಕ್ಕೆ ದಂಡೆತ್ತಿ ಬಂದನು. ಹಂಪಿ, ಶ್ರೀಶೈಲ ಮಾರ್ಗವಾಗಿ ತಂಜಾವೂರಿಗೆ ಪಯಣ ಬೆಳಸಿ ವೆಂಕೋಜಿಯನ್ನು ಸೋಲಿಸಿದನು. ೧೬೭೭ರಲ್ಲಿ ಬೆಂಗಳೂರು, ಕೋಲಾರ, ಚಿಕ್ಕ ಬಳ್ಳಾಪುರ, ದೊಡ್ಡಬಳ್ಳಾಪುರ ಗೆದ್ದನಾದರೂ ಬೆಂಗಳೂರನ್ನು ಮಾತ್ರ ತನ್ನ ಅತ್ತಿಗೆ (ವೆಂಕೋಜಿಯ ಪತ್ನಿ) ದೀಪಾಬಾಯಿಗೆ ಅವನು ಉಡುಗೊರೆಯಾಗಿ ನೀಡಿದನು.[೨೫]

ಮೊಘಲರು

ಬೆಂಗಳೂರನ್ನು ಮತ್ತೆ ವಾಪಸ್ಸು ವೆಂಕೋಜಿಯು ಪಡೆದುಕೊಂಡರೂ ಅದು ಅವನ ಬಳಿ ಹೆಚ್ಚು ಕಾಲ ಉಳಿಯಲಿಲ್ಲ. ರಣದುಲ್ಲಾಖಾನ್‌ನ ಬಂದುಗಳಾಗಿದ್ದ ಜಹಂಗೀರ್‌ಖಾನ್ ಮತ್ತು ಹುಸೇನ್‌ಖಾನ್ ಎಂಬ ಇಬ್ಬರು ಸರದಾರರನ್ನು ನಗರದ ರಕ್ಷಣೆಗಾಗಿ ನೇಮಿಸಲಾಗಿತ್ತು.[೨೬] ದಕ್ಷಿಣದಲ್ಲಿ ಎದ್ದಿದ್ದ ಗಲಭೆಗಳನ್ನು ಅಡಗಿಸಲು ಹಾಗೂ ಬೆಂಗಳೂರನ್ನು ಆಕ್ರಮಿಸಲು ಶಿವಾಜಿಯ ಮಗ ಸಾಂಬಾಜಿಯು ಕೇಶವ ಪಿಂಗಳೆ ಮತ್ತು ಸಂತಾಜಿ ಘೋರ್ಪಡೆ ಎಂಬ ಇಬ್ಬರು ಸೇನಾಧಿಪತಿಗಳನ್ನು ಕಳುಹಿಸಿದನು.

ಈ ವಿದ್ಯಮಾನಗಳನ್ನೆಲ್ಲಾ ಮೊಘಲ್ ಗೂಡಚಾರರು ತಮ್ಮ ಚಕ್ರವರ್ತಿಯಾಗಿದ್ದ ಔರಂಗಜೇಬನಿಗೆ ಮುಟ್ಟಿಸಿದರು. ಔರಂಗಜೇಬನು ಗೋಲ್ಕಂಡದಲ್ಲಿದ್ದ ತನ್ನ ಸೇನಾಪತಿ ಖಾಸಿಂಖಾನ್‌ನಿಗೆ ಬೆಂಗಳೂರನ್ನು ವಶಪಡಿಸಿಕೊಳ್ಳಲು ಆದೇಶ ನೀಡಿದನು. ಖಾಸಿಂಖಾನ್ ತನ್ನ ಬೃಹತ್ ಸೈನ್ಯದೊಂದಿಗೆ ೧೬೮೭ರ ಜುಲೈ ೧೦ರಂದು ಹೊರಟು ಕರ್ನೂಲೂ, ಪೆನಗೊಂಡ ಮಾರ್ಗವಾಗಿ ಬೆಂಗಳೂರಿಗೆ ಬಂದಿಳಿದನು. ಬೆಂಗಳೂರನ್ನು ಪಡೆಯಬೇಕೆಂದು ಹೊರಟಿದ್ದ ಮರಾಠ ಸೇನಾಪತಿಗಳು ಇನ್ನೂ ತಲುಪಿರಲಿಲ್ಲ. ನಗರದಲ್ಲಿದ್ದ ರಣದುಲ್ಲಾಖಾನನ ಸರದಾರರೂ ಈ ಯುದ್ಧದ ಸುಳಿವೇ ಇಲ್ಲದೆ ಆರಾಮವಾಗಿದ್ದರು. ಈ ರೀತಿಯಾಗಿ ಖಾಸಿಂ ಖಾನನಿಗೆ ಬೆಂಗಳೂರು ಅನಾಯಾಸವಾಗಿ ದೊರಕಿತು. ಈತನು ಬೆಂಗಳೂರಿನಲ್ಲಿ ನೆಲೆಸಿ ತನ್ನ ಸೈನ್ಯ ಬಲವನ್ನು ಹೆಚ್ಚಿಸಿ ಕೋಟೆಯನ್ನು ಬಲಪಡಿಸಿದನು. ಇದರಿಂದಾಗಿ ಮರಾಠಿ ಭಾಷೆಗಿದ್ದ ಪ್ರಾಮುಖ್ಯತೆಯು ಕಡಿಮೆಯಾಗಿ ಉರ್ದು ಹೆಚ್ಚಾಗಿ ಬಳಕೆಗೆ ಬಂತು. ಬೆಂಗಳೂರು ಷಾಹಜಿಯ ಆಡಳಿತಕ್ಕೆ ಬರುವ ವೇಳೆಗೆ ಭಾರಿ ಕೋಟೆಗಳಿಂದಲೂ, ಆಳವಾದ ಕಂದಂಕಗಳಿಂದಲೂ ಕೂಡಿ ಆಕರ್ಷಕ ನಗರವಾಗಿತ್ತು. ಕೋಟೆ ಸುತ್ತಲೂ ದೊಡ್ಡ ಕೆರೆಗಳಿದ್ದವು. ಕೋಟೆಯ ಗೋಡೆಗಳು ಭದ್ರವಾಗಿದ್ದವು. ಪಟ್ಟಣದ ಒಳಭಾಗದಲ್ಲಿ ಅರಮನೆ ಇದ್ದಿತು.[೨೭]

ಬೆಂಗಳೂರಿನ ಮಣ್ಣಿನ ಕೋಟೆಯ ಮೂಲ ಆಕಾರದಲ್ಲಿ ಬದಲಾವಣೆ ಆಗಿರಲಿಲ್ಲ. ಷಾಹಜಿಯು 'ಗೌರಿ ಮಹಲ್' ಎಂಬ ಅರಮನೆಯನ್ನು ಕಟ್ಟಿಕೊಂಡಿದ್ದ. ಅದು ಈಗಿನ ಚಿಕ್ಕಪೇಟೆ ಪ್ರದೇಶದಲ್ಲಿದೆ. ೧೯ನೇ ಶತಮಾನದಲ್ಲಿ ಅಲ್ಲಿ ಒಂದು ಶಾಲೆಯನ್ನು ನಡೆಸುತಿದ್ದರೆಂದು ಫಜಲುಲ್ ಹಸನ್ ಹೇಳಿದ್ದಾರೆ.[೨೩]

ಬೆಂಗಳೂರು ಪ್ರದೇಶದ ಅಧಿಪತಿಯಾದ ಷಾಹಜಿಯು ದಕ್ಷನು, ಉತ್ತಮ ಆಡಳಿತಗಾರನೂ ಆಗಿದ್ದು, ತನ್ನ ಸುತ್ತ ಮುತ್ತಲಿನ ಪಾಳೇಗಾರರ ಸೊಕ್ಕನ್ನೆಲ್ಲಾ ಅಡಗಿಸಿ ಬೆಂಗಳೂರಿನಲ್ಲಿ ಶಾಂತಿ ನೆಲೆಸುವಂತೆ ಮಾಡಿದನು. ಷಾಹಜಿಯ ಜೊತೆಗೆ ಅನೇಕ ಮರಾಠಿ ಜನರು ಬೆಂಗಳೂರಿಗೆ ಬಂದರು. ಈತನ ಆಳ್ವಿಕೆಯಲ್ಲಿ ಮರಾಠಿ ಭಾಷೆಗೆ ಪ್ರಾಧಾನ್ಯತೆ ದೊರೆಯಿತು. ಷಾಹಜಿಯ ಕಾಲದಲ್ಲಿ ಆರಂಭವಾದ ಗೋಸಾಯಿ ಮಠವನ್ನು ಗವಿಗಂಗಾಧರ ದೇವಾಲಯ ಪಕ್ಕದಲ್ಲಿ ಕಾಣಬಹುದು. ಷಾಹಜಿ ಆಸ್ಥಾನದಲ್ಲಿ ಇದ್ದ ಜಯರಾಮ ಪಿಂಡ್ಯ ಎಂಬಾತ ಬರೆದ 'ರಾಧ ಮಾಧವ ವಿಲಾಸ ಚಂಪೂ' ಎಂಬ ಸಂಸ್ಕೃತ ಕಾವ್ಯದಲ್ಲಿ ಷಾಹಜಿ ಅನೇಕ ಕನ್ನಡ, ಪರ್ಶಿಯನ್, ಮರಾಠಿ, ಸಂಸ್ಕೃತ ಪಂಡಿತರಿಗೆ ಆಶ್ರಯ ನೀಡಿದ ವಿವರಗಳಿವೆ. ಕ್ರಿ.ಶ.೧೬೬೩ ಷಾಹಜಿಯು ಶಿವಮೊಗ್ಗ ಜಿಲ್ಲೆಯ ಚನ್ನಗಿರಿ ತಾಲೂಕಿನ ಹೊದಿಗೆರೆ ಎಂಬ ಗ್ರಾಮದ ಬಳಿ ಕುದುರೆಯ ಮೇಲೆ ವೇಗವಾಗಿ ಹೋಗುತ್ತಿದ್ದಾಗ ಕುದುರೆಯಿಂದ ಕೆಳಗೆ ಬಿದ್ದು ಮೃತನಾದನು.[೨೪]

ಷಾಹಜಿಯು ಮರಣಾನಂತರ ವೆಂಕೋಜಿ ಬೆಂಗಳೂರಿನ ಒಡೆತನವನ್ನು ವಹಿಸಿಕೊಂಡನು. ವೆಂಕೋಜಿಯು ಬೆಂಗಳೂರನ್ನು ಸ್ವಲ್ಪ ಸಮಯ ಮಾತ್ರ ಆಳಿದನು. ಈತನ ಆಳ್ವಿಕೆಯ ಕಾಲದ ಪ್ರಮುಖ ಕುರುಹೊಂದು ಇಂದಿಗೂ ಬೆಂಗಳೂರಿನಲ್ಲಿದೆ. ಸುಮಾರು ೧೬೬೯ರಲ್ಲಿ ಈತ ಮಲ್ಲೇಶ್ವರ ಸಂಪಿಗೆ ರಸ್ತೆ ಬದಿಯಲ್ಲಿರುವ ''ಕಾಡು ಮಲ್ಲೇಶ್ವರ'' ದೇವಾಲಯಕ್ಕೆ ಭೇಟಿ ನೀಡಿ ದಾನ ನೀಡಿದನು. ಅದಕ್ಕೆ ಸಾಕ್ಷಿಯಾಗಿ ದೇವಾಲಯದ ಬಲಭಾಗದ ಬಂಡೆಯ ಮೇಲೆ ಶಿಲಾಶಾಸನ ಬರೆಸಿದ್ದಾನೆ. ವೆಂಕೋಜಿಯು ಅಧಿಕಾರ ವಹಿಸಿಕೊಂಡ ಕೆಲವೇ ವರ್ಷಗಳಲ್ಲಿ ತಂಜಾವೂರಿನ ರಾಜ ಮರಣ ಹೊಂದಿದ ನಂತರ ಅಧಿಕಾರಕ್ಕಾಗಿ ಒಳಜಗಳ ಪ್ರಾರಂಭವಾಗಿ ಈ ವಿಷಯ ಬಿಜಾಪುರದ ಆದಿಲ್‌ಷಾನವರೆಗೂ ಮುಟ್ಟಿತು. ಆಗ ಅವನು ಬೆಂಗಳೂರಿನಲ್ಲಿದ್ದ ವೆಂಕೋಜಿಗೆ ಕೂಡಲೇ ತಂಜಾವೂರಿಗೆ ಹೋಗಿ ಅಲ್ಲಿಯ ಪರಿಸ್ಥಿತಿಯನ್ನು ಪರಿಶೀಲಿಸಿ ವರದಿ ಸಲ್ಲಿಸುವಂತೆ ತಿಳಿಸಿದನು. ತಂಜಾವೂರಿಗೆ ತೆರಳಿದ ವೆಂಕೋಜಿ ಅಲ್ಲಿನ ರಾಜತ್ವಕ್ಕೆ ವಾಜ್ಯ ಮಾಡುತ್ತಿದ್ದವರನ್ನು ಓಡಿಸಿ ನಿಜವಾದ ಹಕ್ಕುದಾರ ಚಂಗಲಮಲದಾಸರ ಹೆಸರಿನಲ್ಲಿ ತಾನೇ ಆಡಳಿತದ ಜವಾಬ್ದಾರಿಯನ್ನು ವಹಿಸಿಕೊಂಡನು.

ಔರಂಗಜೇಬನಿಂದ ಒಂದು ಫರ್ಮಾನು (ರಾಜಾಜ್ಞೆ) ಬಂದು ಅದರ ಪ್ರಕಾರವಾಗಿ ಖಾಸಿಂ ಖಾನ್ ಸಿರಾ ಪ್ರಾಂತ್ಯದಲ್ಲಿ ಮೊಘಲ್ ಪ್ರತಿನಿಧಿಯಾಗಿ ನೇಮಕಗೊಂಡನು. ಈ ಕಾರ್ಯ ಬಹಳ ಮಹತ್ವ, ಹೆಚ್ಚುವೇತನ, ಗೌರವ-ಪ್ರತಿಷ್ಠೆಗಳನ್ನು ತಂದುಕೊಡುತ್ತಿದ್ದರಿಂದ ಖಾಸಿಂ ಖಾನ್ ಕೂಡಲೆ ಸಿರಾಕ್ಕೆ ಹೊರಡಲು ಸಿದ್ಧನಾದನು. ಆಗ ಅವನಿಗೆ ಬೆಂಗಳೂರು ಬೇಡವಾಯಿತು. ತಾರಮಂಡಲ ಪೇಟೆ ಅಂದರೆ ಈಗಿನ ಕಲಾಸಿಪಾಳ್ಯದಲ್ಲಿ ಒಂದು ಮಸೀದಿಯನ್ನು ಖಾಸಿಂಖಾನ್ ಕಟ್ಟಿಸಿದನು.[೨೫]

[illegible]

[illegible]

[illegible]

[illegible]

ಮೈಸೂರು ಒಡೆಯರು

ಮೈಸೂರು ಒಡೆಯರು ೧೩೯೯ರಿಂದ ವಿಜಯನಗರದ ಮಾಂಡಳಿಕರಾಗಿ ಮೈಸೂರಿನಿಂದ ಆಳ್ವಿಕೆ ಆರಂಭಿಸಿದರು. ಈ ಮನೆತನದ ಒಂಭತ್ತನೆಯ ಅರಸನಾದ ರಾಜ ಒಡೆಯರು (೧೫೭೮-೧೬೧೭) ಶ್ರೀರಂಗ ಪಟ್ಟಣ ಗೆದ್ದು ಅಲ್ಲಿ ಆಳುತ್ತಿದ್ದ ವಿಜಯನಗರದ ಪ್ರತಿನಿಧಿಯನ್ನು ಸೋಲಿಸಿದರು. ನಂತರ ಕಂಠೀರವ ನರಸರಾಜ ಒಡೆಯರು (೧೬೩೮-೧೬೫೯) ಬಿಜಾಪುರದವರನ್ನು ಪ್ರತಿಭಟಿಸಿ ತನ್ನ ಪ್ರತಾಪ ಮೆರೆದರು. ಚಿಕ್ಕದೇವರಾಜ ಒಡೆಯರ್ (ಕ್ರಿ.ಶ.೧೬೭೩-೧೭೦೪) ಬೆಂಗಳೂರಿನಿಂದ ಆಳ್ವಿಕೆ ನಡೆಸುತ್ತಿದ್ದ ವೆಂಕೋಜಿ, ಹಾಗೂ ಜಿಂಜಿಯಿಂದ ಆಳುತ್ತಿದ್ದ ಶಿವಾಜಿಯ ಅಳಿಯ ಹರಜಿ ಮಹಾಡಿಕ ಇವರ ವಿರುದ್ದ ಸೆಣಸಿದರು. ಶಿವಾಜಿಯ ಮಗ ಸಂಬಾಜಿಯು ಕೆಳದಿ, ಗೋಲ್ಕಂಡ, ಮುಂತಾದ ಶಕ್ತಿಗಳ ಜೊತೆ ಸೇರಿದಾಗ ಚಿಕ್ಕದೇವರಾಜ ಒಡೆಯರು ೧೬೭೮ರಲ್ಲಿ ಬಾಣವಾರದ ಕದನದಲ್ಲಿ ಅವರನ್ನು ಸೋಲಿಸಿ ''ಮಹಾರಾಷ್ಟ್ರ ಭೂಪಾಲ ಜಾಲರಿಪೂ'' ಹಾಗೂ ''ಅಪ್ರತಿಮ ವೀರ'' ಔರಂಗಜೇಬನಿಂದ ''ರಾಜ ಜಗದೇವ'' ಮುಂತಾದ ಬಿರುದುಗಳನ್ನು ಪಡೆದುಕೊಂಡರು.

ಚಿಕ್ಕದೇವರಾಜ ಒಡೆಯರ್ ಬೆಂಗಳೂರನ್ನು ಮೊಘಲ್ ಸೇನಾನಿ ಖಾಸಿಂಖಾನ್‌ನಿಂದ ಪಡೆದುದಕ್ಕೆ ಔರಂಗಜೇಬನ ಒಪ್ಪಿಗೆಯಿತ್ತು. ಇದರನ್ವಯ ಒಡೆಯರು ವಾರ್ಷಿಕವಾಗಿ ಪೊಗದಿಯನ್ನು ಕೊಡಬೇಕಾಗಿತ್ತು. ಆ ಕಾಲದಲ್ಲಿ ಒಬ್ಬ ಮೊಘಲ್ ಪೌಜುದಾರ ಬೆಂಗಳೂರಿನಲ್ಲಿ ಇರುತ್ತಿದ್ದ, ಅಲ್ಲದೆ ಹಲವಾರು ಪರ್ಶಿಯನ್ ದಾಖಲೆಗಳ ಪೈಕಿ ೧೭೦೩ರಲ್ಲಿ ಒಡೆಯರು ಮೊಘಲರಿಗೆ ಕಪ್ಪ (ಪೆಶ್‌ಕಾಶ್) ಪಾವತಿ ಮಾಡಿದ ದಾಖಲೆ ಇದೆ.[೯]

ಬೆಂಗಳೂರನ್ನು ಒಡೆಯರು ಪಡೆದ ಮೇಲೆ ಅದರ ಅಭಿವೃದ್ಧಿಯತ್ತ ಗಮನ ಹರಿಸಿದರು. ನಗರದ ದಕ್ಷಿಣಕ್ಕೆ ಹಳೆಯ ಕೋಟೆಗೆ ಸೇರಿದಂತೆ ಮೊಟ್ಟೆಯಾಕಾರದ ಇನ್ನೊಂದು ಬಲವಾದ ಮಣ್ಣಿನ ಕೋಟೆಯನ್ನು ಕಟ್ಟಿಸಿದರು. ಹನ್ನೆರಡು ಹೋಬಳಿಗಳನ್ನು ಒಳಗೊಂಡ ಬೆಂಗಳೂರು ಪ್ರದೇಶವನ್ನು ನೋಡಿಕೊಳ್ಳಲು ಚಿಕ್ಕದೇವರಾಜ ಒಡೆಯರ್ ದಳವಾಯಿ ದೊಡ್ಡಯ್ಯ ಎಂಬುವವನನ್ನು ನೇಮಿಸಿದ್ದರು. ತಮಿಳುನಾಡಿನ ಬಾರ ಮಹಲ್‌ನಿಂದ ನೂರಾರು ನೇಕಾರರನ್ನು ಕರೆತಂದು ಬೆಂಗಳೂರಿನಲ್ಲಿ ನೆಲೆಸುವಂತೆ ಮಾಡಿದರು. ಬೆಂಗಳೂರಿನಲ್ಲಿ ವ್ಯಾಪಾರ, ಕೈಗಾರಿಕೆಗಳನ್ನು ಬೆಳೆಸಲು ಒಡೆಯರು ವಿಶೇಷ ಗಮನ ನೀಡಿದರು. ಬೆಂಗಳೂರಿನ ಕೋಟೆ ವೆಂಕಟರಮಣ ದೇವಾಲಯವನ್ನು ನಿರ್ಮಿಸಿದರು. ಕಂಠೀರವ ನರಸರಾಜರ ಕಾಲದಲ್ಲಿ ೧೭೦೫ರಲ್ಲಿ ಕೊತ್ತನೂರು ಗ್ರಾಮವನ್ನು ಈ ದೇವಾಲಯಕ್ಕೆ ದಾನ ನೀಡಲಾಯಿತು. ಚಿಕ್ಕದೇವರಾಜ ಒಡೆಯರ್ ಬೆಂಗಳೂರಿನ ಆಡಳಿತವನ್ನು ನೋಡಿಕೊಳ್ಳಲು ಮೂವರು ಶಾನುಭೋಗರನ್ನು ನೇಮಿಸಿದರು. ಒಡೆಯರು ಕರಣಿಕ ಲಿಂಗಯ್ಯನನ್ನು ದಿಲ್ಲಿಯ ಔರಂಗ ಜೇಬನ ಆಸ್ಥಾನಕ್ಕೆ ಕಳುಹಿಸಿ ಅಲ್ಲಿನ ಆಡಳಿತ ಕ್ರಮಗಳ ಬಗ್ಗೆ ವಿವರವನ್ನು ಸಂಗ್ರಹಿಸಿ ಅದರ ಆಧಾರದ ಮೇಲೆ ಬೆಂಗಳೂರು ಹಾಗೂ ತಮ್ಮ ರಾಜ್ಯದಲ್ಲಿ ಆಡಳಿತ ಸುಧಾರಣೆಗಳನ್ನು ಮಾಡಿದರು. ಮೊಘಲರ ಪದ್ಧತಿಯಂತೆ ಆಡಳಿತ ವಿಕೇಂದ್ರಿಕರಣಕ್ಕಾಗಿ ಹದಿನೆಂಟು ಇಲಾಖೆಗಳನ್ನು ಆರಂಭಿಸಿದರು. ಇದು ಮುಂದೆ ಅಠಾರ ಕಛೇರಿ ಎಂದು ಪ್ರಸಿದ್ಧವಾಯಿತು.[೧೦]

ಬೆಂಗಳೂರಿನ ಪಾರುಪತ್ತೇಗಾರರು

ಚಿಕ್ಕದೇವರಾಜ ಒಡೆಯರು ಬೆಂಗಳೂರನ್ನು ಪಡೆದುಕೊಂಡ ಮೇಲೆ ಈ ಪಟ್ಟಣದ ಅಭಿವೃದ್ಧಿಯ ಕಡೆಗೆ ಗಮನ ಹರಿಸಿದರು. ಆಡಳಿತ ನಡೆಸಲು ಅಗತ್ಯವಾದ ವ್ಯವಸ್ಥೆ ಕೈಗೊಂಡರು. ಈ ಸಮಯದಲ್ಲಿ ಬೆಂಗಳೂರು ತಾಲೂಕಿಗೆ ಹನ್ನೆರಡು ಹೋಬಳಿಗಳು ಸೇರಿದ್ದವು. ಅವು ಕಸಬಾ ಹೋಬಳಿ, ವರ್ತೂರು, ಬೇಗೂರು, ವಸಂತಪುರ, ಕೆಂಗೇರಿ, ಯಶವಂತಪುರ, ಯಲಹಂಕ, ಹಲಸೂರು, ಕೃಷ್ಣರಾಜಪುರ, ಹೆಸರುಘಟ್ಟ, ಹೆಬ್ಬಾಳ ಹಾಗೂ ನಾಗವಾರ. ಒದೊಂದು ಹೋಬಳಿಗೂ ಒಬ್ಬೊಬ್ಬ ಹೋಬಳಿದಾರ್ ಅಥವಾ ಶೇಕ್‌ದಾರ್ ಎಂಬ ಅಧಿಕಾರಿ ಇರುತ್ತಿದ್ದರು. ಇಡೀ ಬೆಂಗಳೂರು ತಾಲೂಕಿನ ಆಡಳಿತವನ್ನು ಪಾರು ಪತ್ತೇಗಾರ ಎಂಬ ಅಧಿಕಾರಿ ನೋಡಿಕೊಳುತಿದ್ದನು. ಈತನು ಕೋಟೆಯ ರಕ್ಷಣೆ ಹಾಗೂ ಮೇಲ್ವಿಚಾರಣೆಗಳ ಕಡೆಗೆ ಗಮನ ಹರಿಸಬೇಕಾಗಿತ್ತು. ಈತನ ಕೈಕೆಳಗೆ ಕೋಟೆಯ ರಕ್ಷಣೆಗಾಗಿ ಕಿಲ್ಲೇದಾರ ಎಂಬ ಅಧಿಕಾರಿಯೊಬ್ಬನು ಇರುತ್ತಿದ್ದನು.

ಚಿಕ್ಕದೇವರಾಜ ಒಡೆಯರ್ ಕಾಲದಿಂದ ಹೈದರಾಲಿಯ ಕಾಲದವರೆಗೂ ಒಟ್ಟು ಇಪ್ಪತ್ತಾರು ಮಂದಿ ಪಾರು ಪತ್ತೇಗಾರರು ಆಳ್ವಿಕೆ ನಡೆಸಿದರು. ಅವರಲ್ಲಿ ಮೊದಲಿಗನು ದಳವಾಯಿ ದೊಡ್ಡಯ್ಯ[೧] ದಳವಾಯಿ ದೊಡ್ಡಯ್ಯ ಶಿಸ್ತಿನ ಅಧಿಕಾರಿಯಾಗಿದ್ದನು. ಕಂದಾಯ ವಸೂಲಿ ಮುಂತಾದ ಕೆಲಸಗಳಿಗಾಗಿ ಶ್ಯಾನುಭೋಗ ತಮ್ಮಯ್ಯನ ಬಳಿ ಅನೇಕ ಕರಣಿಕರು, ಗುಮಾಸ್ತರು ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿದ್ದರು. ದಳವಾಯಿ ದೊಡ್ಡಯ್ಯನ ತರುವಾಯ ಮಾಲಾರಂಗಯ್ಯ[೨] ಪಾರು ಪತ್ತೇಗಾರನಾದನು. ಈತನ ಕಾಲಾವಧಿಯಲ್ಲಿ ವ್ಯವಸಾಯಗಾರರಿಗೆ ಹೆಚ್ಚಿನ ಪ್ರೋತ್ಸಾಹ ದೊರೆಯಿತು. ನಂತರ ಗುರಿಕಾರ್ ಮಲ್ಲರಾಜಯ್ಯ[೩] ಪಾರು ಪತ್ತೆಗಾರನಾಗಿ ಬಹಳ ದಕ್ಷತೆಯಿಂದ ಆಳ್ವಿಕೆ ನಡೆಸಿದನು. ಈತನು ಕೇವಲ ಎರಡು ವರ್ಷ ಮಾತ್ರ ಅಧಿಕಾರದಲ್ಲಿದ್ದರೂ ಸಕಾಲಕ್ಕೆ ಸರಿಯಾಗಿ ಕಂದಾಯ ವಸೂಲಿ ಮಾಡಿ ಸರ್ಕಾರದ ಬೊಕ್ಕಸಕ್ಕೆ ಸಲ್ಲಿಸಿದನು.

ಮಲ್ಲರಾಜಯ್ಯನ ತರುವಾಯ ಕಳಲೆ ಮನೆತನದ ದಳವಾಯಿ ನಂಜರಾಜಯ್ಯ[೪] ಅಧಿಕಾರ ವಹಿಸಿದನು. ಇವನು ಬೆಂಗಳೂರಿನ ವರ್ತಕರಿಗೆ ಹೆಚ್ಚಿನ ಪ್ರೋತ್ಸಾಹವಿತ್ತನು. ವ್ಯಾಪಾರ ಅಭಿವೃದ್ಧಿಯು ದೇಶಾಭಿವೃದ್ಧಿಗೆ ಮೂಲ ಎಂಬುದು ಇವನ ಅಭಿಪ್ರಾಯವಾಗಿತ್ತು. ಹೊರನಾಡಿನಿಂದ ಶ್ರೀಮಂತ ವ್ಯಾಪಾರಿಗಳನ್ನು ಕರೆಯಿಸಿ ಬೆಂಗಳೂರಿನಲ್ಲಿ ಅವರನ್ನು ನೆಲೆಗೊಳಿಸಿದನು. ನಂಜರಾಜಯ್ಯನ ನಂತರ ಕಂಠೀರವಯ್ಯ[೫] ಎಂಬಾತ ಎರಡು ವರ್ಷಗಳ ಕಾಲ ಪಾರುಪತ್ತೇಗಾರನಾಗಿದ್ದನು. ಈತನ ನಂತರ ಬಂದ ಲಿಂಗರಾಜಯ್ಯ[೬] ಎಂಬುವವನು ಬೆಂಗಳೂರು ಪಟ್ಟಣದ ಅನೇಕ ಸ್ಥಳಗಳಲ್ಲಿ ಕೊಳ ಮತ್ತು ಕಲ್ಯಾಣಿಗಳನ್ನು ಕಟ್ಟಿಸಿದನು.

ಲಿಂಗರಾಜಯನ ಬಳಿಕ ಹೆಬ್ಬಣ್ಣ ಅಥವಾ ಹಿರಿಯಣ್ಣ[೭] ಬಡಗನಾಡು ಬ್ರಾಹ್ಮಣ ಪಾರು ಪತ್ತೇಗಾರನಾಗಿ ನೇಮಕವಾದನು. ಈತನು ಹದಿನಾಲ್ಕು ವರ್ಷಗಳ ಕಾಲ ಅಧಿಕಾರದಲ್ಲಿದ್ದನು. ಈತನು ಕಂದಾಚಾರದ ಶಾನುಭೋಗನೆಂದು ಹೆಸರು ಪಡಿದಿದ್ದನು. ಈ ಹಿರಿಯಣ್ಣನ ಕಾಲಾವಧಿಯಲ್ಲಿ ಚಿಕ್ಕದೇವರಾಜರ ಆಳ್ವಿಕೆ ಮುಗಿದು

[illegible]

[illegible]

[illegible]

[illegible]

ಅವರ ಮಗ ಕಂಠೀರವ ನರಸರಾಜರ ಆಳ್ವಿಕೆ ಆರಂಭವಾಯಿತು. ಹಿರಿಯಣ್ಣನ ತರುವಾಯ ಬೇರಿಕೆ ಶ್ರೀನಿವಾಸಯ್ಯನೆಂಬಾತನು[೮] ಪಾರುಪತ್ತೆಗಾರನಾದನು. ಈತನ ಬಳಿಕ ಹಿರಿಯಣ್ಣನ ಬಂಧುವಾದ ಬಡಗುನಾಡು ವೆಂಕಣ್ಣ[೯] ಎಂಬುವವನು ಪಾರುತ್ತೇಗಾರನಾದನು ಆರು ವರ್ಷ ಕಾಲ ಅಧಿಕಾರದಲ್ಲಿದ್ದನು. ವೆಂಕಣ್ಣನ ಮೇಲೆ ಮೈಸೂರು ಒಡೆಯರಿಗೆ ಕೃಷ್ಮಯ್ಯ ಎಂಬಾತನು ಚಾಡಿ ಹೇಳಿ ಅವರ ಮನಸ್ಸು ಕೆಡಿಸಿದನು. ತತ್ಪರಿಣಾಮವಾಗಿ ರಾಜರು ವೆಂಕಣ್ಣನನ್ನು ವಜಾಮಾಡಿ ಕೃಷ್ಣಯ್ಯ[೧೦] ನನ್ನು ನೇಮಿಸಿದರು. ಆದರೆ ಈತ ಕೇವಲ ಒಂದು ವರ್ಷ ಮಾತ್ರ ಕಾರ್ಯನಿರ್ವಹಿಸಿ ಓಡಿ ಹೋದನು. ಇತ್ತ ವೆಂಕಣ್ಣನು ಶ್ರೀರಂಗಪಟ್ಟಣದಲ್ಲಿ ರಾಜರನ್ನು ಕಂಡು ಕೃಷ್ಣಯ್ಯನು ಹೂಡಿದ್ದ ತಂತ್ರಗಳೆಲ್ಲಾವನ್ನು ಬಹಿರಂಗಗೊಳಿಸಿ ತಾನು ನಿರಾಪರಾಧಿಯೆಂದು ಮನವರಿಕೆ ಮಾಡಿಸಿ ರಾಜರ ವಿಶ್ವಾಸಗಳಿಸಿಕೊಂಡು ಪುನಃ ಪಾರು ಪತ್ತೇಗಾರನಾಗಿ ಒಂದು ವರ್ಷ ಅಧಿಕಾರದಲ್ಲಿದ್ದನು. ಆ ಬಳಿಕ ಓಡಿಹೋಗಿದ್ದ ಕೃಷ್ಣಯ್ಯ ಪುನಃ ಬೆಂಗಳೂರಿಗೆ ಬಂದು ವೆಂಕಣ್ಣನ ಕ್ಷಮಾಪಣೆ ಕೋರಿ ಇಬ್ಬರೂ ಸೇರಿ ಎಂಟು ವರ್ಷಗಳ ಕಾಲ ಪಾರುಪತ್ತೇಗಿರಿ ನಡೆಸಿದರು. ಈ ಸಮಯಕ್ಕಾಗಲೇ ಶ್ರೀರಂಗಪಟ್ಟಣದಲ್ಲಿ ದೊಡ್ಡ ಕೃಷ್ಣರಾಜ ಒಡೆಯರ ಆಳ್ವಿಕೆ ಆರಂಭವಾಯಿತು. ಇವರ ಕಾಲದಲ್ಲಿ ಪ್ರಸಿದ್ಧನಾದ ಕತ್ತಿಗೋಪಾಲ ರಾಜಯ್ಯ ಪಾರುಪತ್ತೇಗಾರನಾಗಿ ನೇಮಕಗೊಂಡನು. ಅವನು ಎಂಟು ವರ್ಷಗಳ ಕಾಲ ಅಧಿಕಾರದಲ್ಲಿದ್ದನು.[೧೧]

ಈತನ ಕಾಲಾವಧಿಯಲ್ಲಿ ಕೆಂಗೇರಿ ಹೋಬಳಿಗೆ ಸೇರಿದ ಘಾಟೇಗರಾ ಎಂಬ ಹಳ್ಳಿಯನ್ನು ಆಗ್ರಹಾರವಾಗಿ ಪರಿವರ್ತನೆ ಮಾಡಿ ಅದಕ್ಕೆ ನಂಜರಾಜರ ಅಗ್ರಹಾರ ಎಂದು ಹೆಸರಿಟ್ಟು ಸ್ಥಳೀಯ ಬ್ರಾಹ್ಮಣರಿಗೆ ದಾನ ಮಾಡಲಾಯಿತು.

ಅನಂತರ ೧೫ ಜನ ಪಾರು ಪತ್ತೇಗಾರರು ಕೆಲಸವನ್ನು ನಿರ್ವಹಿಸಿದರು.

೧.	ಸುಂಗಯ್ಯ	೨ ವರ್ಷ
೨.	ಉಗ್ರಾಣದ ಸುಬ್ಬರಾಯರು	೧೧ ವರ್ಷ
೩.	ಬಾಳೂರು ವೆಂಕಣ್ಣ	೧ ವರ್ಷ
೪.	ಸುಂದರ ಲಕ್ಷ್ಮೀರಮಣಯ್ಯ	೧ ವರ್ಷ
೫.	ಕಸಬಾ ವೆಂಕಟಗಿರಯ್ಯ	೧ ವರ್ಷ
೬.	ಕೋಡುಬಳ್ಳಿ ನರಸಯ್ಯ	೧ ವರ್ಷ
೭.	ಅನಂತಗಿರಿ ದೇವರಯ್ಯ	೧ ವರ್ಷ
೮.	ಅಪ್ಪರೆಡ್ಡಿ ಲಿಂಗನರಸಯ್ಯ	೧ ವರ್ಷ
೯.	ಅಪ್ಪರೆಡ್ಡಿ ಕೆಂಪೇಗೌಡ	೧ ವರ್ಷ

[illegible]

[illegible]

[illegible]	[illegible]
[illegible]	[illegible]
[illegible]	[illegible]
[illegible]	[illegible]
[illegible]	[illegible]
[illegible]	[illegible]
[illegible]	[illegible]
[illegible]	[illegible]
[illegible]	[illegible]
[illegible]	[illegible]

೧೦. ಕೋರಾದಾಸಪ್ಪ ೧ ವರ್ಷ

೧೨. ಅಚ್ಚಣ್ಣ ೧ ವರ್ಷ

೧೩. ಚನ್ನರಾಜ್ಯ ೧ ವರ್ಷ

೧೪. ತಿಮ್ಮರಾಜಯ್ಯ ೧ ವರ್ಷ

ಕೆಂಚಬಸೆಟ್ಟಿ ಕಾಲದಲ್ಲಿ ಆಡಳಿತವು ಬಹಳಷ್ಟು ಹದಗೆಟ್ಟು ಆತನು ಅನೇಕ ಆಪಾದನೆಗಳಿಗೆ ಗುರಿಯಾದನು. ಆದಕಾರಣ ಮೈಸೂರು ಅರಸರು ವಿಚಾರಣೆ ನಡೆಸಿ, ಆತನನ್ನು ಶಿಕ್ಷೆಗೆ ಗುರಿಪಡಿಸಿ ಕೆಲಸದಿಂದ ವಜಾ ಮಾಡಿದರು. ಈತನಾದ ಮೇಲೆ ಮೂರು ಮಂದಿ ಪಾರು ಪತ್ತೇಗಾರರಾಗಿ (ಅಚ್ಚಣ್ಣ, ಚೆನ್ನರಾಜಯ್ಯ, ತಿಮ್ಮರಾಜಯ್ಯ) ಕೆಲಸ ಮಾಡಿದರು. ಕಡೆಯವನಾದ ತಿಮ್ಮರಾಜಯ್ಯನ ಕಾಲದಲ್ಲಿ ಮೈಸೂರು ಅರಸರು ತಮ್ಮ ಅಧಿಕಾರವನ್ನೆಲ್ಲಾ ಕಳೆದುಕೊಂಡು ಹೈದರಾಲಿಯ ಅಧಿಕಾರಕ್ಕೆ ಒಳಪಟ್ಟು ಹೆಸರಿಗೆ ಮಾತ್ರ ರಾಜನಾಗಿದ್ದರು.[೨]

ಅಡಿ ಟಿಪ್ಪಣಿಗಳು

೧. ಶೇಷಗಿರಿರಾವ್.ಎಲ್.ಎಸ್. (ಸಂ.), ೨೦೦೫, ಬೆಂಗಳೂರು ದರ್ಶನ, ಸಂಪುಟ-೧, ಉದಯ ಬಾನು ಕಲಾ ಸಂಘ, ಬೆಂಗಳೂರು, ಪು-೧

೨. ಕನ್ನಡ ವಿಶ್ವಕೋಶ, ಸಂಪುಟ-೧೨೨, ಕನ್ನಡ ಅಧ್ಯಯನ ಸಂಸ್ಥೆ ಮೈಸೂರು

೩. ಶಿವತಾರಕ.ಕೆ.ಬಿ., ೨೦೦೧, ಕರ್ನಾಟಕ ಪುರಾತತ್ವ ನೆಲೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೧

೪. ಶೇಷಗಿರಿರಾವ್.ಎಲ್.ಎಸ್., (ಸಂ.), ಪೂರ್ವೋಕ್ತ, ೨೦೦೫, ಪು.೬

೫. ಗೋಪಾಲ್‌ರಾವ್.ಎಚ್.ಎಸ್., ೨೦೦೭, ಇತಿಹಾಸದ ಇಣಕು ನೋಟ, ಅನಂತ ಪ್ರಗತಿ ಎಂಟರ್ ಪ್ರೈಸಸ್, ಬೆಂಗಳೂರು, ಪು.೧೩೦

೬. ಗೋಪಾಲ್‌ರಾವ್.ಎಚ್.ಎಸ್., (ಸಂ.), ಪೂರ್ವೋಕ್ತ, ೨೦೦೭, ಪು.೧೩೨

೭. ಗೋಪಾಲ್‌ರಾವ್.ಎಚ್.ಎಸ್., (ಸಂ.), ಪೂರ್ವೋಕ್ತ, ೨೦೦೭, ಪು.೧೩೩

೮. ಶೇಷಗಿರಿರಾವ್.ಎಲ್.ಎಸ್., (ಸಂ.), ಪೂರ್ವೋಕ್ತ, ೨೦೦೫, ಪು.೬

೯. ಶೇಷಗಿರಿರಾವ್.ಎಲ್.ಎಸ್., (ಸಂ.) ಪೂರ್ವೋಕ್ತ, ೨೦೦೫, ಪು.೬-೭

೧೦. ಶೇಷಗಿರಿರಾವ್.ಎಲ್.ಎಸ್., (ಸಂ.), ಪೂರ್ವೋಕ್ತ, ೨೦೦೫, ಪು.೭

೧೧. ಶೇಷಗಿರಿರಾವ್.ಎಲ್.ಎಸ್., (ಸಂ.), ಪೂರ್ವೋಕ್ತ, ೨೦೦೫, ಪು.೮

೧೨. ಸೂರ್ಯನಾಥ್ ಯು. ಕಾಮತ್., (ಸಂ.), ೧೯೯೦, ಬೆಂಗಳೂರು ಜಿಲ್ಲಾ ಗೆಜೆಟಿಯರ್, ಸರ್ಕಾರಿ ಮುದ್ರಣ, ಬೆಂಗಳೂರು, ಪು.೫೦

೧೩. ಶೇಷಗಿರಿರಾವ್.ಎಲ್.ಎಸ್., (ಸಂ.), ಪೂರ್ವೋಕ್ತ, ೨೦೦೫, ಪು.೧೦

೧೪. ಶೇಷಗಿರಿರಾವ್.ಎಲ್.ಎಸ್., (ಸಂ.), ಪೂರ್ವೋಕ್ತ, ೨೦೦೫, ಪು.೧೧

೧೫. ಸೂರ್ಯನಾಥ್ ಯು. ಕಾಮತ್., (ಸಂ.), ಪೂರ್ವೋಕ್ತ, ೨೦೦೫, ಪು.೫೯ ೬೦

೧೬. ಶೇಷಗಿರಿರಾವ್.ಎಲ್.ಎಸ್., (ಸಂ.), ಪೂರ್ವೋಕ್ತ, ೨೦೦೫, ಪು.೧೨

೧೭. ಶೇಷಗಿರಿರಾವ್.ಎಲ್.ಎಸ್., (ಸಂ.), ಪೂರ್ವೋಕ್ತ, ೨೦೦೫, ಪು.೧೩

೧೮. ಸುಂದರ್‌ರಾವ್ ಬ.ನ. ವನವಿಹಾರಿ, ೧೯೮೫, ಬೆಂಗಳೂರು ಇತಿಹಾಸ, ವಸಂತಕಾವ್ಯ ಗ್ರಂಥಮಾಲಾ ಬೆಂಗಳೂರು, ಪು.೧೬

೧೯. ಸುಂದರ್‌ರಾವ್ ಬ.ನ.ವನವಿಹಾರಿ, ಪೂರ್ವೋಕ್ತ, ೧೯೮೫, ಪು.೧೯

೨೦. ಫಜಲುಲ್ ಹಸನ್.ಎಂ., ೧೯೭೦, ಬ್ಯಾಂಗಲೂರ್ ಥ್ರೂ ಧ ಸೆಂಚುರಿಸ್, ಹಿಸ್ಟಾರಿಕಲ್ ಪಬ್ಲಿಕೇಶನ್, ಬೆಂಗಳೂರು, ಪು.೧೮

೨೧. ಶೇಷಗಿರಿರಾವ್.ಎಲ್.ಎಸ್., (ಸಂ.), ಪೂರ್ವೋಕ್ತ, ೨೦೦೫, ಪು.೧೮

೨೨. ಫಜಲುಲ್ ಹಸನ್ ಎ., ಪೂರ್ವೋಕ್ತ, ೧೯೭೦, ಪು.೨೧

೨೩. ಶೇಷಗಿರಿರಾವ್.ಎಲ್.ಎಸ್., (ಸಂ.), ಪೂರ್ವೋಕ್ತ, ೨೦೦೫, ಪು.೧೯

೨೪. ಸುರೇಶ್ ಮೂನ, ೨೦೦೯, ಇದು ನಮ್ಮ ಬೆಂಗಳೂರು, ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.ಪು.೧೦

೨೫. ಸುರೇಶ್ ಮೂನ, ಪೂರ್ವೋಕ್ತ, ೨೦೦೯, ಪು.೧೧

೨೬. ಸುರೇಶ್ ಮೂನ, ಪೂರ್ವೋಕ್ತ, ೨೦೦೯, ಪು.೧೨

೨೭. ಸುರೇಶ್ ಮೂನ, ಪೂರ್ವೋಕ್ತ, ೨೦೦೫, ಪು.೮೪

೨೮. ಸುರೇಶ್ ಮೂನ, ಪೂರ್ವೋಕ್ತ, ೨೦೦೯, ಪು.೧೩

೨೯. ಶೇಷಗಿರಿರಾವ್.ಎಲ್.ಎಸ್., (ಸಂ.), ಪೂರ್ವೋಕ್ತ, ೨೦೦೫, ಪು.೨೪

೩೦. ಸುರೇಶ್ ಮೂನ, ಪೂರ್ವೋಕ್ತ, ೨೦೦೯, ಪು.೧೪

೩೧. ಸುಂದರ್‌ರಾವ್ ಬ.ನ. ವನವಿಹಾರಿ, ಪೂರ್ವೋಕ್ತ, ೧೯೮೫, ಪು.೧೨೩-೧೨೬

೩೨. ಸುಂದರ್‌ರಾವ್ ಬ.ನ. ವನವಿಹಾರಿ, ಪೂರ್ವೋಕ್ತ, ೧೯೮೫, ಪು.೧೨೯

* * *

ಅಧ್ಯಾಯ-ಮೂರು

ಮೈಸೂರು ಸುಲ್ತಾನರ ಆಳ್ವಿಕೆಯಲ್ಲಿ ರಾಜಕೀಯ ಕೇಂದ್ರವಾಗಿ ಬೆಂಗಳೂರು

೩.೧. ಕೋಟೆಗಳ ನಿರ್ಮಾಣ

೩.೨. ಬೆಂಗಳೂರು ಕೋಟೆಯ ಆಧುನೀಕರಣಕ್ಕೆ ಕೈಗೊಂಡ ಕ್ರಮಗಳು

೩.೩. ಟಿಪ್ಪು ಅರಮನೆ

೩.೪. ಆರ್ಮರಿ ಅಥವಾ ಮದ್ದುಗುಂಡು ಸಂಗ್ರಹಾಲಯ

೩.೫. ಸೈನ್ಯ ಜಮಾವಣೆಗೆ ಕೈಗೊಂಡ ಕ್ರಮಗಳು

೩.೬. ೧೭೯೧-೯೨ರ ಆಂಗ್ಲೋ ಮೈಸೂರು ಯುದ್ಧದಲ್ಲಿ ಬೆಂಗಳೂರು ವಹಿಸಿದ ಪಾತ್ರ

೩.೭. ಕಾವಲು ಪಡೆ ನೇಮಕ

೩.೮. ಮೈಸೂರು ಸುಲ್ತಾನರ ಯುದ್ಧಗಳಲ್ಲಿ ಬೆಂಗಳೂರಿನ ಪಾತ್ರ

ಅಧ್ಯಾಯ ಮೂರು

ಮೈಸೂರು ಸುಲ್ತಾನರ ಆಳ್ವಿಕೆಯಲ್ಲಿ ರಾಜಕೀಯ ಕೇಂದ್ರವಾಗಿ ಬೆಂಗಳೂರು

೧೮ನೇ ಶತಮಾನವು ಭಾರತದ ರಾಜಕೀಯದಲ್ಲಿ ಗೊಂದಲದ ಕಾಲವಾಗಿತ್ತು.ರಾಜಕೀಯ ಮಹತ್ವಾಕಾಂಕ್ಷಿಗಳಿಗೆ ತಮ್ಮ ಅಧಿಕಾರದ ಅದೃಷ್ಟದ ಪರೀಕ್ಷೆಗೆ ಹಾಗೂ ಅಧಿಕಾರದ ಸ್ಥಾಪನೆಗೂ ಮಿತಿ ಇಲ್ಲದ ಅವಕಾಶ ಕಲ್ಪಿಸಿತು. ಪರಿಣಾಮವಾಗಿ ಹೈದರಾಲಿಯಂತಹ ವ್ಯಕ್ತಿ ಮೈಸೂರು ಸಂಸ್ಥಾನದಲ್ಲಿ ಅಧಿಕಾರ ಪಡೆಯಲು ಕಾರಣವಾಯಿತು. ಕರ್ನಾಟಕ ಚರಿತ್ರೆಯಲ್ಲಿ ಕ್ರಿ.ಶ. ೧೭೬೧-೧೭೯೯ರ ವರೆಗೆ ಮೈಸೂರು ಒಡೆಯರ ಕಾಲದ ಮಧ್ಯಂತರವಾಗಿ ಬರುವ 'ಮೈಸೂರು ಸುಲ್ತಾನ'ರ ಚರಿತ್ರೆ ಅದ್ವಿತೀಯವಾದುದು. ಮೈಸೂರು ಒಡೆಯರ ಅಸಮರ್ಥತೆ, ಅದಕ್ಷತೆ ಮತ್ತು ದಳವಾಯಿಗಳ ಅಧಿಕಾರ ಲಾಲಸೆ, ಅಧಿಕಾರಕ್ಕಾಗಿ ಕಚ್ಚಾಟ ಹಾಗೂ ಬಾಹ್ಯವಾಗಿ ಮರಾಠರು, ನಿಜಾಮರು ಬ್ರಿಟಿಷರ ಆಕ್ರಮಣಕ್ಕೆ ಒಳಗಾಗುವುದರಿಂದ ಆಂತರಿಕವಾಗಿ ಉಂಟಾಗಿರುವ ಕ್ಲಿಷ್ಟ, ಸಂದಿಗ್ಧ ಪರಿಸ್ಥಿತಿಯಲ್ಲಿ ಮಹತ್ವಾಕಾಂಕ್ಷಿಗಳಾದ ಸುಲ್ತಾನರು ಏಳಿಗೆ ಹೊಂದಲು ಕಾರಣವಾಯಿತು. ಈ ದಿಸೆಯಲ್ಲಿ ಮೈಸೂರು ಸುಲ್ತಾನರು ಮಹತ್ವಪೂರ್ಣವಾದ ಪಾತ್ರವನ್ನು ವಹಿಸಿದರಲ್ಲದೆ ಮೈಸೂರು ಸಂಸ್ಥಾನವನ್ನು ಬಲಿಷ್ಠ ಸಂಸ್ಥಾನವಾಗಿ ಮಾಡಿದರು.

೩.೧. ಕೋಟೆಗಳ ನಿರ್ಮಾಣ

ಮೈಸೂರು ಸುಲ್ತಾನರು ತಮ್ಮ ಕಲೆಯ ಆಸ್ತಿಯನ್ನು ನಮಗೆ ಬಿಟ್ಟು ಹೋಗಿದ್ದಾರೆ. ನಿರಂತರವಾಗಿ ಯುದ್ಧ ಹೋರಾಟಗಳಲ್ಲಿಯೇ ಅವರು ಕಾಲ ತಲ್ಲಿನರಾಗಿದ್ದರೂ ಕಲೆ ಮತ್ತು ವಾಸ್ತುಶಿಲ್ಪಗಳಲ್ಲಿ ಆಸಕ್ತಿ ತೋರುವುದನ್ನು ಮರೆಯಲಿಲ್ಲ. ಮೊಘಲ್ ಶೈಲಿಯ ವಾಸ್ತುಶಿಲ್ಪದಿಂದ ಪ್ರಭಾವಿತರಾಗಿದ್ದ ಇವರು ಬೆಂಗಳೂರು ಮತ್ತು ಶ್ರೀರಂಗಪಟ್ಟಣಗಳಲ್ಲಿ ಕಟ್ಟಿದ ಅರಮನೆಗಳಿಗೆ ಅವುಗಳ ಮಾದರಿಯಾಗಿ ಇಟ್ಟುಕೊಂಡರು. ಇವರು ರಾಜ್ಯಾದ್ಯಂತ ಅನೇಕ ಕೋಟೆಗಳನ್ನು, ದುರ್ಗಗಳನ್ನು ನಿರ್ಮಿಸಿದರು. ಅವುಗಳಲ್ಲಿ ಹಲವು

[illegible]

[illegible]

[illegible]

[illegible]

[illegible]

ಅಧಿಕಾರಕ್ಕೆ ಬರುವ ಮೊದಲಿನಿಂದಲೂ ಇದ್ದವು. ಅಂಥವುಗಳನ್ನು ದುರಸ್ತಿಪಡಿಸಿದರು. ಬಲಗೊಳಿಸಿದರು. ಅವುಗಳಲ್ಲಿ ಬಹುತೇಕ ಮಣ್ಣಿನ ಕೋಟೆಗಳಾಗಿದ್ದವು. ಈ ಕೋಟೆಗಳನ್ನು ಕಲ್ಲಿನ ಭದ್ರಕೋಟೆಯಾಗಿ ಮಾರ್ಪಡಿಸಿದರು. ಎತ್ತರವಾದ ಗೋಡೆಗಳು, ಬುರುಜುಗಳು, ಬತ್ತೇರಿಗಳು, ಒಳ ಚರಂಡಿಗಳು, ಕೋಟೆ ತೆನೆಗಳು, ಮತ್ತು ಕೈಪಿಡಿಗಳು ರಹಸ್ಯವಾಗಿರುವ ದಾರಿಗಳು ನಿರ್ಮಾಣವಾದವು. ಇಂದಿಗೂ ಪ್ರಭಾವಶಾಲಿಯಾಗಿ ನಿಂತಿರುವ ಕೋಟೆಗಳ ಸಾಲಿನಲ್ಲಿ ಬೆಂಗಳೂರು ಕೋಟೆಯ ಒಂದಾಗಿರುವುದು ಕಂಡುಬರುತ್ತದೆ.[೨]

೩.೨ ಬೆಂಗಳೂರು ಕೋಟೆಯ ಆಧುನೀಕರಣಕ್ಕೆ ಕೈಗೊಂಡ ಕ್ರಮಗಳು

ಬೆಂಗಳೂರು ತನ್ನ ವಶಕ್ಕೆ ಬಂದ ಮೇಲೆ ಹೈದರಾಲಿಯು ಮಾಡಿದ ಮೊದಲ ಕೆಲಸವೆಂದರೆ ಕೋಟೆಗಳ ಪುನರ್ನಿರ್ಮಾಣ. ಆಗಿನ ಖಿಲ್ಲೇದಾರ ಇಬ್ರಾಹಿಂ ಸಾಹೇಬನು ಕೋಟೆಯ ಗೋಡೆಗಳನ್ನು ಕಲ್ಲಿಂದ ಕಟ್ಟಿಸಿದ. ಕೆಂಪೇಗೌಡ ಮತ್ತು ಷಾಹಜಿ ಕಾಲದ ಬುರುಜುಗಳನ್ನೆಲ್ಲಾ ಕೆಡವಿ ಪಂಚರಾಶಿ ತೋಪುಗಳನ್ನು ನೆಡಲಾಯಿತು. ಒಂದೊಂದು ಬತ್ತೇರಿಗೂ ಎರಡೆರಡು ತೋಪುಗಳನ್ನು ಅಂದರೆ ಒಟ್ಟು ೭೨ ತೋಪುಗಳನ್ನು ಕೋಟೆಯ ಮೇಲೆ ಸ್ಥಾಪಿಸಲಾಯಿತು. ದಕ್ಷಿಣ ಅಂಡಕಾರದ ಕೋಟೆ ಪ್ರದೇಶವು ಅರಮನೆ, ಲಾಯ, ದ್ವಾರಗಳು, ದೇವಾಲಯ, ಇತ್ಯಾದಿ ಕಟ್ಟಡಗಳಿಂದ ಕೂಡಿದ್ದು ಕೋಟೆ ಎಂದು ಕರೆಯಲ್ಪಡುತ್ತಿದ್ದ ಈ ಭಾಗವನ್ನು ಅರಮನೆ (citadel complex) ಎಂದೂ ಗುರುತಿಸಬಹುದು. ಈ ಅರಮನೆಯ ಆವರಣವು ಉತ್ತರ ದಕ್ಷಿಣಕ್ಕೆ ಕಿಮ್ಸ್ ಆಸ್ಪತ್ರೆಯಿಂದ ಮಾರುಕಟ್ಟೆ ಮತ್ತು ಪೂರ್ವ ಪಶ್ಚಿಮಕ್ಕೆ ಕಲಾಸಿಪಾಳ್ಯ ಪೋಲೀಸ್ ಠಾಣೆಯಿಂದ ಕನ್ನಡ ಸಾಹಿತ್ಯ ಪರಿಷತ್ ಭವನದವರೆಗಿನ ಪ್ರದೇಶಗಳಲ್ಲಿ ವಿಸ್ತರಿಸಿಕೊಂಡಿತ್ತು. ಇದು ಒಟ್ಟು ೧೨ ಹೆಕ್ಟೇರ್ ವಿಸ್ತೀರ್ಣ ಪ್ರದೇಶವನ್ನು ಒಳಗೊಂಡಿತ್ತು. ಈ ಆವರಣವನ್ನು ನಾಲ್ಕು ಮುಖ್ಯ ರಸ್ತೆಗಳಿಂದ ವಿಭಜಿಸಲಾಗಿತ್ತು. ಇಲ್ಲಿಯ ನಾಲ್ಕು ಮುಖ್ಯ ರಸ್ತೆಗಳು ಕೋಟೆ ವೆಂಕಟರಮಣ ದೇವಾಲಯದ ಎದುರಿಗೆ ಸೇರುತ್ತಿದ್ದವು. ಈ ಆವರಣದ ಮಧ್ಯ ಭಾಗದಲ್ಲಿ ಕೋಟೆ ವೆಂಕಟರಮಣ ದೇವಾಲಯವಿದ್ದು ಅರಮನೆಗಳು, ಲಾಯಗಳು, ಮದ್ದಿನ ಮನೆಗಳು ಆಸ್ಥಾನ (ದರ್ಬಾರ್) ಅಥವಾ ಆಡಳಿತ ಕಚೇರಿಗಳು ಈ ಅರಮನೆ ಆವರಣದಲ್ಲಿದ್ದ ಕೆಲವು ಪ್ರಮುಖ ಕಟ್ಟಡಗಳು, ಈ ಆವರಣವನ್ನು ಪ್ರವೇಶಿಸಲು ನಾಲ್ಕು ದಿಕ್ಕುಗಳಲ್ಲಿ ದ್ವಾರಗಳಿದ್ದವು ಅವುಗಳೆಂದರೆ

ಕಲಾಸಿ ಪಾಳ್ಯ ಅಥವಾ ಆನೇಕಲ್ ದ್ವಾರ (ಪೂರ್ವ)

ಮೈಸೂರು ದ್ವಾರ (ಪಶ್ಚಿಮ)

ದೆಹಲಿ ದ್ವಾರ (ಉತ್ತರ)

ಕಾನಕಾನಹಳ್ಳಿ ದ್ವಾರ(ದಕ್ಷಿಣ)ಗಳೆಂದು ಗುರುತಿಸಲಾಗಿದೆ.

ಇವುಗಳಲ್ಲಿ ದೆಹಲಿ ದ್ವಾರವೆಂದು ಕರೆಯಲ್ಪಡುವ ದ್ವಾರವು ಪ್ರಸ್ತುತ ಮಾರುಕಟ್ಟೆಯ ಬಳಿ ಕಂಡುಬರುತ್ತದೆ.

[illegible]

[illegible]

[illegible]

[illegible]

ಬೆಂಗಳೂರು ಕೋಟೆಯು ಇಲ್ಲಿಯವರೆಗೂ ಉಳಿದ ಏಕೈಕ ದ್ವಾರ. ಅರಮನೆ ಆವರಣದ ಸುತ್ತಲಿನ ಕೋಟೆಯು ಅನೇಕ ಕೊತ್ತಳಗಳಿಂದ ಕೂಡಿತ್ತೆಂದು ತಿಳಿದುಬರುತ್ತದೆ. ಕೋಟೆಯ ಸುತ್ತಲೂ ಆಳವಾದ ಕಂದಕವಿದ್ದು, ದೆಹಲಿ ದ್ವಾರದ ಮುಂಭಾಗದಲ್ಲಿ ಆಂಜನೇಯ ದೇವಾಲಯ ಕಾಣಬಹುದು. ೧೭೯೨ರ ನಂತರ ಟಿಪ್ಪುವು ಕೋಟೆಯನ್ನು ದುರಸ್ತಿಗೊಳಿಸಿ ಇನ್ನೂ ಬಲಗೊಳಿಸಿ, ಶಿವಾಜಿ ಎಂಬ ಮರಾಠ ಸರದಾರನನ್ನು ೩೦೦೦ ಅಶ್ವದಳದ ಮುಖ್ಯಸ್ಥನಾಗಿಸಿ ಬೆಂಗಳೂರಿನ ಕೋಟೆಯನ್ನು ಲಾರ್ಡ್ ಕಾರ್ನ್‌ವಾಲೀಸನಿಗೆದುರಾಗಿ ರಕ್ಷಿಸುವ ಗುರುತರ ಹೊಣೆಗಾರಿಕೆಯನ್ನು ವಹಿಸಿದ್ದನು.

ಸುಲ್ತಾನರಿಬ್ಬರು ಬೆಂಗಳೂರು ಕೋಟೆಯ ಕಡೆಗೆ ವಿಶೇಷವಾದ ಗಮನ ನೀಡಿದರು. ಇದು ಆಯಕಟ್ಟಿನ ಕೋಟೆಯಾಗಿತ್ತು.[೩]

೩.೩. ಟಿಪ್ಪು ಅರಮನೆ

ಬೆಂಗಳೂರು ಸ್ಥಾಪನೆಗೊಂಡ ಸುಮಾರು ಇನ್ನೂರ ಇಪ್ಪತೊಂದು ವರ್ಷಗಳ ನಂತರ ಜಾಹಗೀರ್ ಆಗಿ ಅಂದರೆ ೧೭೫೮ರ ಸುಮಾರಿಗೆ ಬೆಂಗಳೂರನ್ನು ಮೈಸೂರು ಒಡೆಯರಿಂದ ಹೈದರ್ ಜಾಹಗೀರ್ ಆಗಿ ಪಡೆದನು. ನಂತರ ಹೈದರಾಲಿ ಮತ್ತು ಟಿಪ್ಪು ಸುಲ್ತಾನ್ ಸುಂದರವಾದ ಅರಮನೆಯ ನಿರ್ಮಾಣಕ್ಕೆ ಭದ್ರ ಬುನಾದಿಯನ್ನು ಹಾಕಿದರು.

ಕೋಟೆ ವೆಂಕಟರಮಣ ದೇವಾಲಯದ ಬಳಿ ಇರುವ ಟಿಪ್ಪು ಅರಮನೆ ನಗರದ ಪ್ರಮುಖ ಇತಿಹಾಸದ ಸ್ಮಾರಕಗಳಲ್ಲೊಂದಾಗಿದೆ. ಇದು ಭಾರತೀಯ ಮತ್ತು ಇಸ್ಲಾಮಿಕ್ ಶೈಲಿಯ ಪ್ರಮುಖ ರಚನೆಯಾಗಿದೆ.

ಶ್ರೀರಂಗಪಟ್ಟಣದ ಬಳಿ ಲಾಲಬಾಗ್ ಎಂಬ ಉದ್ಯಾನವನ್ನು ನಿರ್ಮಿಸಿದಾಗಲೇ ಹೈದರ್‌ನು ಬೆಂಗಳೂರಿನಲ್ಲಿ ಒಂದು ಸುಂದರವಾದ ಅರಮನೆಯನ್ನು ಕಟ್ಟಿಸತೊಡಗಿದನು. ಈ ಅರಮನೆಯ ಕಾಮಗಾರಿ ಕೆಲಸ ಪ್ರಾರಂಭವಾದದ್ದು ೧೭೮೧ರಲ್ಲಿ ಆದರೆ ದುರಾದೃಷ್ಟವಶಾತ್ ಮುಂದಿನ ವರ್ಷವೇ ಅಂದರೆ ೧೭೮೨ರಲ್ಲಿ ಹೈದರನು ಮರಣಹೊಂದಿದನು. ಟಿಪ್ಪು ಸುಲ್ತಾನನು ತಂದೆ ಪ್ರಾರಂಭಿಸಿದ ಕೆಲಸವನ್ನು ಮುಂದುವರೆಸಿ ೧೭೯೨ರಲ್ಲಿ ಪೂರ್ಣಗೊಳಿಸಿದನು ಎಂಬುದು ಅರಮನೆಯಲ್ಲಿನ ಫಲಕದ ಮೇಲಿನ ಬರಹದಿಂದ ತಿಳಿದು ಬರುತ್ತದೆ ಕಟ್ಟಡ ನಿರ್ಮಾಣ ಕಾರ್ಯದಲ್ಲಿ ಬಳಸಿದ ಮರ ಮುಟ್ಟುಗಳು ಹಾಗೂ ಇತರೆ ಸಾಮಾನುಗಳ ಕೆಲವು ದಾಖಲೆಗಳ ಪ್ರಕಾರ ಸಿರಾದ ದಿಲ್‌ವಾರ್‌ಖಾನ್ ಎಂಬ ಗೌರರ್ನರ್ ವೈಭವದಿಂದ ಕೂಡಿದ ಈ ಅರಮನೆಯನ್ನು ಕಟ್ಟಲು ಅನುವಾದ ಎಂಬುದಾಗಿ ತಿಳಿದು ಬರುತ್ತದೆ.

ಮೈಸೂರು ಸುಲ್ತಾನರು ತಮ್ಮ ಶ್ರೀರಂಗಪಟ್ಟಣ ಹಾಗೂ ಬೆಂಗಳೂರಿನ ಅರಮನೆಗೆ ಸಿರಾದ ಅರಮೆನೆಯನ್ನು ಹಾಗೂ ಅಕ್ಬರ್‌ನ ಅಲಹಾದಬಾದಿನ ಪ್ರಸಿದ್ಧ ಹಿಂದೂ ಮುಸ್ಲಿಂ ಶಿಲ್ಪ ಶೈಲಿಯ ದರಬಾರ್ ಹಾಲಿನ ಮಾದರಿಯನ್ನು ಅಳವಡಿಸಿಕೊಂಡರು. ಇದರ ನಿರ್ಮಾಣಕ್ಕಾಗಿ ನೆರೆಯ ರಾಜ್ಯವಾದ

[illegible]

[illegible]

[illegible]

[illegible]

ತಮಿಳುನಾಡಿನಿಂದ ಕೆಲಸಗಾರರನ್ನು ತರಿಸಲಾಗಿತ್ತು. ಈ ಸುಂದರ ಅರಮನೆಯು ಸಂಪೂರ್ಣವಾಗಿ ಮರ ಮತ್ತು ವಿಶೇಷವಾದ ಮಣ್ಣಿನಿಂದ ನಿರ್ಮಿಸಲ್ಪಟ್ಟಿದೆ ಮುಂಭಾಗದಲ್ಲಿರುವ ಎತ್ತರವಾದ ಮರದ ಕಂಬಗಳು ನೆಲದಿಂದ ಛಾವಣಿಯವರೆಗೂ ಇದ್ದು ತಳಭಾಗದಲ್ಲಿ ಎಂಟುದಳಗಳುಳ್ಳ ಕಮಲ ಪುಷ್ಪದ ರಚನೆಯಾಗಿದೆ. ಮೇಲ್ಭಾಗದಲ್ಲಿ ಕಂಬಗಳ ನಡುವಿನ ಭಾಗದಲ್ಲಿ ಬಹಳ ಸುಂದರವಾದ ಕಮಾನುಗಳಿವೆ. ಇವೆಲ್ಲಾ ಹಿಂದೂ ಮತ್ತು ಮೊಘಲ್ ಶೈಲಿಯ ಮಿಶ್ರಣವಾಗಿದ್ದು ಇದನ್ನು ಇಂಡೋಸಾರ್ಸನಿಕ್ ಶೈಲಿ ಎನ್ನುತ್ತಾರೆ.

ಕ್ರಿ.ಶ. ೧೮೦೦ ಮೇ ೧೦ ರಂದು ಬುಖಾನನ್ ಬೆಂಗಳೂರು ತಲುಪಿ ಇವರ ಕೋಟೆಯೊಳಗೆ ಎದ್ದು ಕಾಣುತ್ತಿದ್ದ ಈ ಅರಮನೆಯ ಬಗ್ಗೆ ಹೀಗೆ ವಿವರಿಸಿರುವನು ''ಅರಮನೆ ನೋಡಲು ಬಹಳ ಸುಂದರವಾಗಿತ್ತು. ಅದರ ಮಹಡಿಯ ಮೇಲೆ ನಾಲ್ಕು ಕೋಣೆಗಳಿದ್ದು ಎರಡು ಬಾಲ್ಕನಿಗಳನ್ನು ಒಳಗೊಂಡಿದೆ. ಒಂದರಲ್ಲಿ ಟಿಪ್ಪು ಸುಲ್ತಾನನು ಆಗಾಗ ಬಂದು ಕುಳಿತಿರುತ್ತಿದ್ದನು. ಇನ್ನೊಂದನ್ನು ಸರಕಾರಿ ಅಧಿಕಾರಿಗಳು ಹಾಗೂ ಗುಮಾಸ್ತರು ತಮ್ಮ ಕೆಲಸಗಳಿಗಾಗಿ ಬಳಸುತ್ತಿದ್ದರು. ಕೆಳಗಡೆ ಗುಮಾಸ್ತರು ಲೆಕ್ಕ ಪತ್ರಗಳನ್ನು ಬರೆಯುವುದರಲ್ಲಿ ನಿರತರಾಗಿರುತ್ತಿದ್ದರು. ಅರಮನೆಯಲ್ಲಿದ್ದ ಪ್ರತಿಯೊಂದು ಹಜಾರದ ಪಕ್ಕದಲ್ಲಿಯೂ ಖಾಸಗಿ ಕೋಣೆಗಳಿದ್ದವು. ಆದರೆ ಇವು ಚಿಕ್ಕದಾಗಿದ್ದವು. ಅರಮನೆಯವರ ಉಪಯೋಗಕ್ಕಾಗಿ ಹಲವು ಕೊಠಡಿಗಳಿದ್ದವು. ಅವುಗಳ ಮೇಲೆಲ್ಲಾ ಸುಂದರ ಚಿತ್ರಗಳಿರುತ್ತಿದ್ದವು. ಸ್ನಾನದ ಕೊಠಡಿಗಳು ಬಹಳ ಚಿಕ್ಕದಾಗಿದ್ದವು. ಸುಲ್ತಾನನ ಹಿರಿಯ ಪತ್ನಿಗಾಗಿಯೇ ಒಂದು ಸಭಾಂಗಣವಿತ್ತು. ಆಕೆ ವಿಶೇಷ ದಿನಗಳಲ್ಲಿ ಮುಸ್ಲಿಂ ಮಹಿಳೆಯರಿಗೆ ದರ್ಶನ ನೀಡುತ್ತಿದ್ದಳು. ಆಕೆಯನ್ನು ಕಾಣಬರುತ್ತಿದ್ದವರಲ್ಲಿ ಮುಸ್ಲಿಂ ಅಧಿಕಾರಿಗಳ ಪತ್ನಿಯರೂ, ಮತ್ತಿತ್ತರ ವರ್ಗದ ಮಹಿಳೆಯರು ಇರುತ್ತಿದ್ದರು. ಅರಮನೆಯಲ್ಲಿನ ನೌಬತ್‌ಖಾನ್ ಎಂಬ ಭಾಗದಲ್ಲಿ ಪ್ರತಿ ಶುಕ್ರವಾದ ವಾದ್ಯ ಸಂಗೀತ ನಡೆಯುತಿತ್ತು ಎಂಬುದಾಗಿ ತಿಳಿದು ಬರುತ್ತದೆ.''[೪]

೩.೪. ಆರ್ಮೃರಿ ಅಥವಾ ಮದ್ದು ಗುಂಡು ಸಂಗ್ರಹಾಲಯ

ಮೈಸೂರು ಸುಲ್ತಾನರ ಕಾಲದ ಯುದ್ಧ ಶಸ್ತ್ರಾಗಾರ ಬೆಂಗಳೂರಿನ ಪ್ರಮುಖ ಐತಿಹಾಸಿಕ ಸ್ಮಾರಕಗಳಲ್ಲಿ ಒಂದಾಗಿದೆ. ಕೋಟೆ ವೆಂಕಟರಮಣಸ್ವಾಮಿ ದೇವಾಲಯದ ಎದುರಿನ ಬೆಂಗಳೂರಿನ ಮೆಡಿಕಲ್ ಕಾಲೇಜಿನ ಬಲ ಬದಿಗೆ ಒಂದು ಸಣ್ಣ ರಸ್ತೆಯಲ್ಲಿರುವ ಒಂದು ಟ್ರಾನ್ಸ್‌ಫಾರ್ಮರ್ ಪಕ್ಕದಲ್ಲಿ ಸುಮಾರು ೧೦೦x೧೦೦ ಅಡಿ ಚದರ ವಿಸ್ತೀರ್ಣವುಳ್ಳ ಹಳ್ಳವೊಂದರಲ್ಲಿ ಕಂಡುಬರುತ್ತದೆ. ಏಕೆಂದರೆ ಹೈದರಾಲಿಯು ಬ್ರಿಟಿಷರ ವಿರುದ್ಧ ಯುದ್ಧದಲ್ಲಿ ವಿಶೇಷವಾಗಿ ಬಳಸುತ್ತಿದ್ದ ರಾಕೆಟ್‌ಗಳನ್ನು ತಯಾರಿಸಿ ಸಂಗ್ರಹ ಮಾಡುತ್ತಿದ್ದ ಜಾಗವಿದಾಗಿ ಕಂಡು ಬಂದಿದೆ. ಹೈದರಾಲಿಯು ಫ್ರೆಂಚ್‌ರೊಂದಿಗೆ ಸಂಪರ್ಕ ಬೆಳೆಸಿದಾಗ ಅವರಲ್ಲಿನ ಯುದ್ಧ ಬಗೆಗಿನ ನೈಪುಣ್ಯತೆ ಮತ್ತು ಉದ್ಯಾನವನಗಳನ್ನು ನಿರ್ಮಿಸುವ ವಿಧಾನವನ್ನು ಬಹುವಾಗಿ ಮೆಚ್ಚಿಕೊಂಡು ಆ ವಿಧಾನವನ್ನು ಅಳವಡಿಸಿಕೊಂಡಿರುವುದು ತಿಳಿಯುತ್ತದೆ.

[illegible]

[illegible]

[illegible]

ಯುದ್ಧ ಶಸ್ತ್ರಾಗಾರ ರಚನೆಯನ್ನು ಗಮನಿಸಿದರೆ ಇದನ್ನು ಗಾರೆ ಮತ್ತು ಇಟ್ಟಿಗೆಗಳಿಂದ ನಿರ್ಮಿಸಿರುವುದು ಕಂಡು ಬರುತ್ತದೆ. ಕಟ್ಟಡದ ಆಕೃತಿಯೂ ಬಹಳ ಭಿನ್ನವಾಗಿದೆ. ಆಯುತಾಕಾರದಲ್ಲಿರುವ ಇದರ ಛಾವಣಿಯು ಎರಡು ಕಡೆ ಇಳಿಜಾರಾಗಿದ್ದು, ಮನೆಗಳ ಮುಂದೆ ಪೋರ್ಟಿಕೋ ಇರುವಂತೆ ಇದರ ಪ್ರವೇಶ ದ್ವಾರವು ಕಟ್ಟಡದಿಂದ ಮುಂದೆ ಚಾಚಿಕೊಂಡಿದೆ. ಇದಕ್ಕೆ ಬಹಳ ಬಲವಾದ ಕಬ್ಬಿಣದ ಬಾಗಿಲು ಹಾಗೂ ಕಿಟಕಿಗಳಿದ್ದವು ಆದರೆ ಈಗ ಅವು ಕಾಣೆಯಾಗಿರುವವು.[೬]

೩.೫. ಸೈನ್ಯ ಜಮಾವಣೆಗೆ ಕೈಗೊಂಡ ಕ್ರಮಗಳು

ಹೈದರಾಲಿಯ ಕಾಲದಲ್ಲಿ ಬೆಂಗಳೂರು ಒಂದು ಪ್ರಮುಖ ಮಿಲಿಟರಿ ಕೆಂದ್ರವಾಗಿ ಬೆಳೆಯ ತೊಡಗಿತು. ಇದು ಬ್ರಿಟಿಷರಿಗೂ ಅನೂಕೂಲವಾಗಿ ಅವರ ನಂತರ ಅದು ಮುಂದುವರೆದು ಇಂದಿಗೆ ದೇಶದ ಒಂದು ಪ್ರಮುಖ ರಕ್ಷಣಾ ಚಟುವಟಿಕೆಗಳ ಕೇಂದ್ರಬಿಂದುವಾಗಿದೆ. ಹೈದರನು ದಕ್ಷಿಣ ಭಾರತದ ದಂಡಯಾತ್ರೆ ಕೈಗೊಂಡಾಗ ಅವನ ಕೇಂದ್ರ ಸ್ಥಾನ ಆಗಿನ ರಾಜಧಾನಿಯಾಗಿದ್ದ ಶ್ರೀರಂಗಪಟ್ಟಣವಾಗಿರದೆ. ಅವನಿಗೆ ಜಹಾಗೀರಯಾಗಿಬಂದದ್ದು ಬೆಂಗಳೂರಾಗಿತ್ತು.

ಈ ವೇಳೆಗೆ ಬೆಂಗಳೂರು ಒಂದು ಪ್ರದೇಶ ಎನ್ನುವುದಕ್ಕಿಂತ ಸೇನಾ ತರಬೇತಿ ಶಿಬಿರವೇನೋ ಎನ್ನುವಂತಿತ್ತು. ಎಲ್ಲಿ ನೋಡಿದರೂ ಸೈನಿಕರು, ಕಾಲಾಳುಗಳು, ಕುದುರೆ ಸವಾರರು, ವಿವಿಧ ವೇಷಗಳಲ್ಲಿದ್ದ ಗೂಡಚಾರರು ಹೀಗೆ ಎಲ್ಲಾ ಒಟ್ಟು ಇಲ್ಲಿ ನೆರೆದಿದ್ದವರ ಸಂಖ್ಯೆ ೮೩,೦೦೦. ಇಷ್ಟೊಂದು ದೊಡ್ಡ ಸೈನ್ಯ ಬೀಡು ಬೀಡಲು ಕೋಟೆಯೊಳಗೆ ಜಾಗವಿರಲಿಲ್ಲ. ಹೈದರನು ಕೋಟೆಯ ಹೊರಗೆ ದೊಡ್ಡ ಡೇರೆಗಳನ್ನು ಹಾಕಿಸಿ ಕೊಟ್ಟಿದ್ದನು. ಈ ರೀತಿಯಾದ ವ್ಯವಸ್ಥೆ ಮಾಡಲು ನೆರೆ ರಾಜ್ಯದಿಂದ ಕೆಲಸಗಾರರನ್ನು ಕರೆಸಿದ್ದನು. ಅವರ ಹೆಸರು ಕಲಾಸಿಗಳು ಎಂದು, ಇವರು ಯುದ್ಧ ಸಮಯದಲ್ಲಿ ಈ ರೀತಿ ನಿರ್ಮಾಣಗಳಂತಹ ರಚನಾತ್ಮಕ ಕಾರ್ಯಗಳಿಗೆ ಬಳಕೆಯಾಗುತ್ತಿದ್ದರು. ಇವರ ಸಂಖ್ಯೆ ಹೆಚ್ಚಾಗಿ ವಾಸಕ್ಕಾಗಿ ಒಂದು ಪ್ರದೇಶವನ್ನು ನೀಡಲಾಯಿತು. ಅದು ಕ್ರಮೇಣ ಕಲಾಸಿಪಾಳ್ಯವಾಯಿತು.

ಹೈದರಾಲಿ ಮತ್ತು ಟಿಪ್ಪುಸುಲ್ತಾನ್ ಮೊದಲಬಾರಿಗೆ ರಾಕೆಟ್ ತಯಾರಿಸುವ ಮೂಲಕ ವಿಶ್ವದ ಯುದ್ಧ ಕಲೆ ಹಾಗೂ ವಿಜ್ಞಾನಕ್ಕೆ ದೊಡ್ಡ ಕೊಡುಗೆ ನೀಡಿದರು. ಗಿನ್ನೀಸ್ ಹಿಸ್ಟರಿ ಆಫ್ ಲ್ಯಾಂಡ್ ವಾರ್‌ಫೇರ್‌ನಲ್ಲಿ ದಾಖಲಿಸಿರುವಂತೆ "ವಿಶ್ವದ ಮೊಟ್ಟ ಮೊದಲ ರಾಕೆಟ್ ಕ್ಷಿಪಣಿಯನ್ನು ಮೈಸೂರು ಸುಲ್ತಾನರು ಬ್ರಿಟಿಷರ ವಿರುದ್ಧ ೧೭೯೦ರಲ್ಲಿ ಪ್ರಯೋಗಿಸಿದರು. ಇದರ ಪರಿಣಾಮವಾಗಿ ವಿಲಿಯಂ ಕಾಂಗ್ರೀವ್ ಎಂಬ ಇಂಗ್ಲೀಷ್ ವ್ಯಕ್ತಿ ೧೮೦೫ರಲ್ಲಿ ರಾಕೆಟ್ಟುಗಳನ್ನು ಉತ್ಪಾದಿಸಿದ್ದನ್ನು ೧೮೦೬ರಲ್ಲಿ ಚೌಲೋನ್ ನೌಕ ದಾಳಿಯಲ್ಲಿ ಬಳಸಿಕೊಳ್ಳಲಾಯಿತು. (ಹುತಾತ್ಮ ಟಿಪ್ಪುಸುಲ್ತಾನ್.....೧ ೨೦೦೩-೨೬)

ಸುಲ್ತಾನರ ಕ್ಷಿಪಣೆ ೧.೪ ಕಿ.ಮೀ. ದೂರ ಸಾಗುವ ಸಾಮಾರ್ಥ್ಯ ಹೊಂದಿದ್ದವು. ಮೈಸೂರಿನಲ್ಲಿ ಇದು ಬಳಕೆಯಾದ ನಂತರದ ೩೭ ವರ್ಷಗಳವರೆಗೂ ಬ್ರಿಟೀಷರಿಗೆ ಈ ತಂತ್ರಜ್ಞಾನದ ಅರಿವಿರಲಿಲ್ಲ. ೧೭೯೯ರಲ್ಲಿ

[illegible]

[illegible]

[illegible]

[illegible]

[illegible]

[illegible]

ಶ್ರೀರಂಗಪಟ್ಟಣ ಇದು ಪತನದ ನಂತರ ವಿಲಿಯಂ ಕಾಂಗ್ರೀವ್ ಈ ತಂತ್ರಜ್ಞಾನ ಹಾಗೂ ಅದರ ಹಿಂದಿನ ತತ್ವಗಳನ್ನು ಕದ್ದೊಯ್ದು ಅದನ್ನೇ ಇಂಗ್ಲೆಂಡಿನಲ್ಲಿ ಪುನರಾವರ್ತಿಸಿದನೇ ವಿನಹ ಹೊಸ ಅನೇಷಣೆಯನ್ನೇನೂ ಮಾಡಲಿಲ್ಲ.

ಹೈದರಾಲಿಯು ರಾಕೆಟ್‌ಗಳನ್ನು ತಯಾರಿಸುವ ಕಾರ್ಖಾನೆಗಳನ್ನು ಬೆಂಗಳೂರು, ಬಿದನೂರು, ಚಿತ್ರದುರ್ಗ, ಶ್ರೀರಂಗಪಟ್ಟಣಗಳಲ್ಲಿ ನಿರ್ಮಿಸಿದ. ಈ ಸ್ಥಳಗಳಲ್ಲಿ ತಯಾರಿಸಲಾಗುತ್ತಿದ್ದ ರಾಕೆಟ್‌ಗಳನ್ನು ಜೋಪಾನವಾಗಿಡಲು ಯುದ್ಧ ಶಸ್ತ್ರಾಗಾರಗಳನ್ನು ನಿರ್ಮಿಸಿರುವುದು ತಿಳಿದುಬರುತ್ತದೆ.

ಬೆಂಗಳೂರಿನ ಈ ಸ್ಥಳದಲ್ಲಿ ಹೈದರಾಲಿ ರಾಕೆಟ್‌ಗಳನ್ನು ಆಗಾಗ್ಗೆ ಉಡಾಯಿಸಿ ಪರೀಕ್ಷಿಸುತ್ತಿದನೆಂದು ಇವು ಗಗನಕ್ಕೆ ಎಗರಿ ಅಲ್ಲಿ ಸಿಡಿದು ನಕ್ಷತ್ರದ ಪುಂಜಗಳಂತೆ ಚದುರಿಸುತ್ತಿದ್ದರೆಂದೂ ಆದ್ದರಿಂಲೇ ಈ ಸ್ಥಳಕ್ಕೆ 'ತಾರಮಂಡಲಪೇಟೆ' ಎಂಬ ಹೆಸರಿತ್ತೆಂದೂ ಹೇಳಲಾಗಿದೆ.

ಈ ರಾಕೆಟ್‌ಗಳ ಬಗ್ಗೆ ಸಮಕಾಲೀನ ಗ್ರಂಥಗಳಾದ 'ನಿಶಾನ್ ಹೈದರಿ'ಯಲ್ಲಿ ಉಲ್ಲೇಖಿಸಲಾಗಿದ್ದು ಈ ಗ್ರಂಥವನ್ನು ಬರೆದ ಹುಸೇನ್ ಆಲೀಖಾನ್ ಕಿರ್ಮಾನಿ ಅವರು ಟಿಪ್ಪು ಸುಲ್ತಾನನು ರಾಯಭಾರಿಗಳು ಟರ್ಕಿಯ ಸುಲ್ತಾನನನ್ನು ಭೇಟಿ ಮಾಡಿದ ಬಗ್ಗೆ ವಿವರಿಸುತ್ತಾ, ರಾಯಭಾರಿಗಳು ಸುಲ್ತಾನನಿಗೆ ಅರ್ಪಿಸಿದ ಕೊಡುಗೆಗಳಲ್ಲಿ ಈ ರಾಕೆಟ್‌ಗಳು ಇದ್ದವೆಂದೂ, ಆ ದೇಶದಲ್ಲಿ ಇವುಗಳ ಬಗೆಗೆ ತಿಳಿದಿಲ್ಲವಾದ್ದರಿಂದ ಇವುಗಳನ್ನು ಬಹಳ ಗೌರವಾದರ ಹಾಗೂ ಕುತೂಹಲದಿಂದ ಸ್ವೀಕರಿಸಲಾಯಿತೆಂದು ಬರೆದಿದ್ದಾರೆ.

ಹೈದರನ ಆಧೀನದಲ್ಲಿ ಅನೇಕ ಪಾಳೆಗಾರರು ತಮ್ಮ ಸೈನಿಕರನ್ನು ಕಳುಹಿಸುತ್ತಿದ್ದರು. ಇವರೆಲ್ಲರ ಒಟ್ಟು ವಿವರ ಹೀಗಿದೆ.

ಕುದುರೆ ಸವಾರರು	೧೪,೦೦೦
ಸಿಲಾದಾರರು	೧೨.೦೦೦
ಸವಣೂರು ದಂಡು	೨.೦೦೦
ಶಿಸ್ತಿನ ಕಾಲಾಳುಗಳು	೧೫.೦೦೦
ಹಳೆಯ ಸೈನಿಕರು	೧೨.೦೦೦
ಸ್ಥಳೀಯ ಸಂಸ್ಥೆಯಿಂದ ಆಯ್ಕೆಯಾದವರು	೧೮.೦೦೦
ಪಾಳೆಗಾರರ ಕಾಲಾಳುಗಳು, ಶಿಕ್ಷಣವಿಲ್ಲದವರು	೧೦.೦೦೦
ಹೀಗೆ ಒಟ್ಟು	೮೩.೦೦೦

(ಬೆಂಗಳೂರು ನಗರ ನಿರ್ಮಾಪಕರು ೨೦೦೨, ೨೦)

[illegible]

[illegible]

[illegible]

[illegible]	[illegible]	[illegible]

[illegible]

ಬೆಂಗಳೂರು ದಕ್ಷಿಣ ಭಾಗವು ಈ ರೀತಿಯಾಗಿ ಮಿಲಿಟರಿ ಕಾರ್ಯಾಚರಣೆಯ ಕೇಂದ್ರ ಸ್ಥಾನವಾಗಿತ್ತು. ಹೈದರನು ಬ್ರಿಟಿಷರನ್ನು ಸದೆ ಬಡಿಯಲು ಫ್ರೆಂಚರ ಸ್ನೇಹ ಬೆಳೆಸಿದನು.

ಟಿಪ್ಪು ಸೈನ್ಯವನ್ನು ಆಧುನಿಕಗೊಳಿಸುವಲ್ಲಿ ಆಸಕ್ತಿ ಉಳ್ಳವನಾಗಿದ್ದನು. ಇವನ ಸೈನ್ಯ ಷೇಕ್ಸ್, ಸಯದ್, ಪಠಾಣ, ಎಂಬ ೩ ವಿಭಾಗಗಳನ್ನೊಳಗೊಂಡಿತ್ತು. ಪಾಶ್ಚಾತ್ಯ ಮಾದರಿಯನ್ನು ಅಳವಡಿಸಿಕೊಳ್ಳಲು ಫ್ರೆಂಚ್ ಇಂಜಿನಿಯರ್‌ಗಳನ್ನು ಬರಮಾಡಿಕೊಂಡಿದ್ದನು.

೧೭೮೨ರ ವೇಳೆಗೆ ಟಿಪ್ಪುವಿನ ಬಳಿ ೧.೮೦.೦೦೦ ದಷ್ಟು ಶಾಶ್ವತ ಸೈನ್ಯವಿತ್ತು. ಇವರೆಲ್ಲರಿಗೂ ತಿಂಗಳಿಗೆ ಸರಿಯಾದ ವೇತನ ಪಾವತಿಯಾಗುತ್ತಿತ್ತು. ಪ್ರತಿ ಹಗಲು ಮತ್ತು ಸಂಜೆ ಸೇನೆಯ ಅಧಿಕಾರಿಗಳು ಮತ್ತು ಸೈನಿಕರು ಕವಾಯತು ನಡೆಸಬೇಕಾಗಿತ್ತು. ವಿಶ್ವಾಸದ್ರೋಹವನ್ನು ಹೊರತುಪಡಿಸಿ ಮತ್ಯಾವುದೇ ಅಪರಾಧಗಳಿಗೂ ದೈಹಿಕ ಶಿಕ್ಷೆ ವಿಧಿಸುವುದನ್ನು ಟಿಪ್ಪುವಿನ ಆಳ್ವಿಕೆಯಲ್ಲಿ ನಿಷೇಧಿಸಲಾಗಿತ್ತು.

೧೭೮೬ರ ಸಮಯಕ್ಕೆ ಸೈನಿಕರ ಸಂಖ್ಯೆಯೂ ೧.೮೦.೦೦೦ ರಷ್ಟಾಗಿದ್ದ ಸೈನಿಕರ ಸಂಖ್ಯೆಗೆ ಬೆಂಬಲವಾಗಿ ರೈತ ಮಿಲಿಷಿಯಾಗಳನ್ನು ಕಟ್ಟಲಾಗಿತ್ತು. ಈ ಸೈನ್ಯವೂ ರಸ್ತೆಗಳನ್ನು ತೆರೆವುಗೊಳಿಸುವುದು, ಸಿಡಿ ಮದ್ದುಗಳನು ಸಿದ್ಧಪಡಿಸುವುದು, ವಶಪಡಿಸಿಕೊಂಡ ಪಟ್ಟಣಗಳನ್ನು ಕಾಯುವುದು ಹಾಗೂ ಇನ್ನಿತರ ಜವಾಬ್ದಾರಿಗಳನ್ನು ಹೊತ್ತುಕೊಂಡು ಮುಖ್ಯ ಸೈನ್ಯವು ರಣರಂಗದಲ್ಲಿನ ಕಾರ್ಯಚರಣೆಯ ಬಗ್ಗೆ ಮಾತ್ರ ಗಮನ ಕೇಂದ್ರಿಕರಿಸಲು ಸಹಕರಿಸುತ್ತಿತ್ತು. ಟಿಪ್ಪು ಆಯುಧಗಳ ಹಾಗೂ ಸೈನ್ಯದ ಚಲನೆಗೆ ತ್ವರಿತ ಹಾಗೂ ಸಮರ್ಥವಾದ ಉತ್ತಮ ಸಂಚಾರ ಸಾಗಾಣಿಕೆ ಜಾಲವನ್ನು ನಿರ್ಮಿಸಿದ್ದನು. ೧೬೮೬ರ ವೇಳೆಗೆ ಟಿಪ್ಪುವಿನ ಸೈನ್ಯ ನಾಲ್ಕು ಲಕ್ಷ ಎತ್ತುಗಳನ್ನು ಹೊಂದಿತ್ತು. ಎನ್.ಕೆ. ಸಿನ್ಹಾ ಎಂಬುವವರು ಬರೆದಂತೆ "ಬ್ರಿಟಿಷರು ಹೈದರನನ್ನು ಹಿಂಬಾಲಿಸಲು ಸಾಧ್ಯವೇ ಇರಲಿಲ್ಲ. ಏಕೆಂದರೆ ಹೈದರ್ ಬಳಿ ಇದ್ದ ಅತ್ಯತ್ತಮ ಎತ್ತುಗಳು ಬ್ರಿಟಿಷರ ಪ್ರತಿ ಒಂದು ಹೆಜ್ಜೆಗೆ ಎರಡು ಹೆಜ್ಜೆ ಮುಂದಿರುತ್ತಿದ್ದವು." (ಹುತಾತ್ಮ ಟಿಪ್ಪುಸುಲ್ತಾನ್, ೨೦೦೩,೩೬)

ಕಬ್ಬನ್ ಬರೆದಿರುವಂತೆ ಇದರಿಂದಾಗಿ "ಹೈದರಾಲಿಯು ಎರಡು ದಿನಗಳಲ್ಲಿ ನೂರು ಮೈಲಿಯಷ್ಟು ಮುನ್ನೆಡೆಸಲು ಸಾಧ್ಯವಾಗುತ್ತಿತ್ತು. ಆದ ಕಾರಣ ಹೈದರಾಲಿಯು ಎರಡುವರೆ ದಿನಗಳಲ್ಲಿ ಚಿದಂಬರಂನ್ನು ಮುಕ್ತಿಗೊಳಿಸಲು ಸಾಧ್ಯವಾದರೆ, ಬಿದನೂರು ವಿಮೋಚನೆಗೆ ಟಿಪ್ಪು ಜನರಲ್ ಮೆಡೋಸ್‌ಗಿಂತ ಎರಡು ದಿನ ಮುಂಚಿತವಾಗಿಯೇ ತಲುಪಲು ಸಾಧ್ಯವಾಯಿತು."(ಕೃಷ್ಣರಾವ್ ಎಂ.ವಿ. ೧೯೫೭, ೧೪೭) ಟಿಪ್ಪುವಿನ ಆಳ್ವಿಕೆಯ ಪರಿಚಯಿಸಿದ ಮತ್ತೊಂದು ಮುಖ್ಯ ಸುಧಾರಣೆಯೆಂದರೆ ಸೈನಿಕರಿಗೆ ಭೂಮಿ ನೀಡಿದ್ದು. ಸುಮಾರು ಮೂರು ಲಕ್ಷ ಸೈನಿಕರಿಗೆ ಈ ರೀತಿ ಭೂಮಿ ನೀಡಲಾಯಿತು. ಮೈಸೂರು ಸುಲ್ತಾನರು ತಾವು ನಡೆಸಿದ ವಸಾಹತುಶಾಹಿ ವಿರೋಧಿ ಯುದ್ಧಗಳಲ್ಲಿ ಮೂರು ಬಗೆಯ ಸಮರ ವಿಧಾನಗಳನ್ನು ಬಳಸಿರುವುದು ಕಂಡುಬರುತ್ತದೆ. ಅವುಗಳೆಂದರೆ

[illegible]

[illegible]

೧. ಮುಚ್ಚುಮರೆಯ ಗೆರಿಲ್ಲಾ ಯುದ್ಧ

೨. ಚಲನೆ ಯುದ್ಧ

೩. ಮುತ್ತಿಗೆ ಹಾಕಿ ಮಾಡುವ ಸ್ಥಾನಿಕ ಯುದ್ಧ[೬]

ಇದಲ್ಲದೆ ಮೈಸೂರು ಸುಲ್ತಾನರು ಮೂರು ಬಾರಿ ಮೈಸೂರಿಗೆ ನೌಕಾ ಪಡೆಯೊಂದನ್ನು ಒದಗಿಸಲು ಪ್ರಯತ್ನಿಸಿದರು. ಟಿಪ್ಪುವಿನ ಈ ಪ್ರಯತ್ನದ ಉದ್ದೇಶ ಅರಬ್ಬೀ ಸಮುದ್ರದಲ್ಲಿ ಬ್ರಿಟಿಷರ ಅಧಿಪತ್ಯಕ್ಕೆ ಸವಾಲು ಹಾಕಿ ವಸಾಹತು ಸುಲಿಗೆಯ ಸಾಗಾಣಿಕೆಯನ್ನು ತಡೆಗಟ್ಟುವುದಾಗಿತ್ತು. ಈ ನಿಟ್ಟಿನಲ್ಲಿ ೮೦ ಪುಟ್ಟ ನೌಕಾ ಪಡೆಯೊಂದನ್ನು ಸಹ ಕಟ್ಟಲಾಯಿತು. ಹಾಗೂ ಪ್ರಭುತ್ವದಲ್ಲಿ ಮೀರ್-ಇ-ಯಾಮ್ ಎಂಬ ಇಲಾಖೆಯನ್ನು ನೌಕಾ ವ್ಯವಹಾರಗಳನ್ನು ನೋಡಿಕೊಳ್ಳಲೆಂದೇ ರಚಿಸಲಾಗಿತ್ತು.[೭]

೩.೬. ೧೭೯೧-೯೨ರ ಆಂಗ್ಲೋ-ಮೈಸೂರು ಯುದ್ಧದಲ್ಲಿ ಬೆಂಗಳೂರು ವಹಿಸಿದ ಪಾತ್ರ

ಟಿಪ್ಪುಸುಲ್ತಾನನ ಚಟುವಟಿಕೆಗಳು ಬ್ರಿಟಿಷರಿಗೆ ತಿಳಿದಿದ್ದವು. ಮಂಗಳೂರಿನ ಒಪ್ಪಂದ ತಾತ್ಕಾಲಿಕವಾಗಿ ಶಾಂತಿಯನ್ನೇರ್ಪಡಿಸುವ ಒಪ್ಪಂದವಾಗಿತ್ತು. ಮೈಸೂರಿನೊಡನೆ ಮತ್ತೊಂದು ಯುದ್ಧ ಅನಿವಾರ್ಯವಾಗಿತ್ತು. ಬ್ರಿಟಿಷರಲ್ಲದೆ ಮರಾಠರು ಮತ್ತು ಹೈದರಾಬಾದಿನ ನಿಜಾಮ ತಮ್ಮ ಮಧ್ಯೆ ಪ್ರಬಲನಾದ ವ್ಯಕ್ತಿಯೊಬ್ಬನು ಪ್ರವರ್ಧಮಾನಕ್ಕೆ ಬರುವುದನ್ನು ಸಹಿಸದಾದರು. ಆದುದರಿಂದ ಟಿಪ್ಪುವನ್ನು ತುಳಿಯುವ ಅವಕಾಶಕ್ಕಾಗಿ ಕಾದು ಕುಳಿತರು.

ಈ ಮಧ್ಯೆ ಟಿಪ್ಪು ಮತ್ತು ತಿರುವಾಂಕೂರಿನ ರಾಜನ ನಡುವೆ ವಿವಾದವೊಂದು ಏರ್ಪಟ್ಟು ಇವರ ನಡುವೆ ೧೭೮೯ರ ಡಿಸೆಂಬರ್ ೨೯ರಂದು ತಿರುವಾಂಕೂರಿನ ಸೈನ್ಯಕ್ಕೂ ಮೈಸೂರಿನ ಸೈನ್ಯಕ್ಕೂ ಕಾಳಗ ಆರಂಭವಾಯಿತಾದರೂ ಈ ಅವಧಿಯಲ್ಲಿ ಹಲವಾರು ಅವ್ಯವಸ್ಥಿತ ಸ್ವರೂಪದ ಕಾಳಗಗಳು ನಡೆದವು. ಡಿಸೆಂಬರ್ ೧೭೮೯ರಿಂದ ಫೆಬ್ರವರಿ ೧೭೯೨ರ ವರೆಗಿನ ಎರಡು ವರ್ಷಗಳ ಕಾಲಾವಧಿಯಲ್ಲಿ ಎರಡು ಹಂತದಲ್ಲಿ ಯುದ್ಧವು ನಡೆದವು ೧೭೯೦ರ ಏಪ್ರಿಲ್‌ನಿಂದ ಡಿಸೆಂಬರ್‌ವರೆಗಿನ ಮೊದಲ ಹಂತದಲ್ಲಿ ಬ್ರಿಟಿಷರು ಮತ್ತು ಟಿಪ್ಪು ಹೋರಾಡಿದರು ಆದರೆ ದ್ವಿತೀಯ ಹಂತದಲ್ಲಿ ೧೭೯೧ರ ವೇಳೆಗೆ ಟಿಪ್ಪುವಿನ ಬೆಳವಣಿಗೆಯನ್ನು ಸಹಿಸಿದ ಮರಾಠರು, ಹೈದರಾಬಾದಿನ ನಿಜಾಮ, ಹಾಗೂ ಬ್ರಿಟಿಷರು ಒಂದು ಮೈತ್ರಿಕೂಟವನ್ನು ರಚಿಸಿಕೊಂಡ ಸೈನ್ಯವು ಮೈಸೂರಿನ ಮೇಲೆ ಆಕ್ರಮಣ ಮಾಡಿತು. ಟಿಪ್ಪುವಿನ ಬಲವಾದ ಕೋಟೆಗಳು ಇವರ ದಾಳಿಗೆ ಜಗ್ಗಲಿಲ್ಲವಾದರೂ ಕೊನೆಗೆ ೧೭೯೧ರ ಫೆಬ್ರವರಿ ೬ರಂದು ರಾತ್ರಿ ಅನಿರೀಕ್ಷಿತ ದಾಳಿ ನಡೆಸಿ ಶ್ರೀರಂಗಪಟ್ಟಣವನ್ನು ಮುತ್ತಿದರು. ಇದರಿಂದ ಟಿಪ್ಪು ಸಂಧಿ ಕೋರಿದನು. ಒಪ್ಪಂದದನ್ವಯ ಯುದ್ಧ ಮುಕ್ತಾಯವಾಯಿತು.

ಟಿಪ್ಪುವಿನ ವಿರುದ್ಧ ಬ್ರಿಟಿಷರು ಇಲ್ಲಿನ ಪ್ರಬಲ ಪ್ರಭುತ್ವಗಳೆನಿಸಿದ ಮರಾಠರು ಮತ್ತು ಹೈದರಾಬಾದಿನ ನಿಜಾಮನೊಂದಿಗೆ ಕ್ರಮೇಣ ಜೂನ್ ೬ ಮತ್ತು ಜುಲೈ ೪ ೧೭೯೦ರಂದು ಒಪ್ಪಂದ ಮಾಡಿಕೊಂಡರು.

[illegible]

ಬೋಂಸ್ಲೆ, ಸಿಂಧ್ಯಾ, ಹೋಳ್ಕರ್, ಮೊದಲಾದ ಮರಾಠ ನಾಯಕರನ್ನ ಲಾರ್ಡ್ ಕಾರ್ನ್‌ವಾಲೀಸನು ಮನವೊಲಿಸಿ ಅವರುಗಳನ್ನು ಬ್ರಿಟಿಷರ ಪರ ಸೇರಲು ಕೋರಿದನು. ಕೊಚ್ಚಿಯ ರಾಜನೊಡನೆ ಒಪ್ಪಂದ ಮಾಡಿಕೊಂಡು ಅದರನ್ವಯ ಬ್ರಿಟಿಷರ ನೆರವಿಗೆ ಬದಲಾಗಿ ರಾಜ ನಿಗದಿಯಾದ ಹಣವನ್ನು ನೀಡಬೇಕೆಂದು ತಿರ್ಮಾನಿಸಲಾಯಿತು.

ಹಾಗೂ ಇದೇ ರೀತಿ ಕಣ್ಣಾನೂರಿನ ಬೇಬಿಯನ್ನು, ಕೊಡಗಿನ ರಾಜನನ್ನು ಮತ್ತು ಮೈಸೂರಿನ ರಾಣಿಯನ್ನು ಪ್ರೋತ್ಸಾಹಿಸಲಾಯಿತು. ಟಿಪ್ಪುವಿನ ವಿರುದ್ಧ ಈ ರೀತಿಯಾಗಿ ಒಂದು ಪ್ರಬಲವಾದ ಒಕ್ಕೂಟ ಏರ್ಪಟ್ಟಿತು. ಸುಲ್ತಾನನು ಸಂಪೂರ್ಣವಾಗಿ ಒಂಟಿತನವನ್ನು ಅನುಭವಿಸುತ್ತಿದ್ದ ಕಾಲದಲ್ಲಿ ತಮ್ಮ ಉದ್ದೇಶಗಳನ್ನು ಸಾರ್ಥಕ ಪಡಿಸಿಕೊಳ್ಳುವುದು ಒಕ್ಕೂಟದ ಧ್ಯೇಯವಾಯಿತು.[೧೦]

ಕರ್ನಲ್ ಫಾಯಿಡ್, ಜನರಲ್ ಮೆಡೋಸ್‌ನಂತಹವರು ಟಿಪ್ಪು ಸುಲ್ತಾನನನ್ನು ಸೋಲಿಸಲು ಅಸಮರ್ಥರಾದುದನ್ನು ಕಂಡು ಗವರ್ನರ್ ಜನರಲ್ ಲಾರ್ಡ್ ಕಾರ್ನ್‌ವಾಲೀಸ್‌ನು ಸುಲ್ತಾನನ್ನು ಎದುರಿಸಲು ಮುಂದಾದನು. ಈ ಉದ್ದೇಶ ಸಾಧನೆಗಾಗಿ ಅವನು ಮದ್ರಾಸಿನ ಸೈನ್ಯದ ಸರ್ವಾಧಿಕಾರವನ್ನು ವಹಿಸಿಕೊಂಡನು. ಮದ್ರಾಸ್ ಸೇನೆಯಲ್ಲಿದ್ದ ಎಲ್ಲಾ ತುಕಡಿಗಳು ಬೇಲೂರಿನಲ್ಲಿ ಒಟ್ಟಾದವು. ಮದ್ರಾಸಿನಿಂದ ಶ್ರೀರಂಗಪಟ್ಟಣಕ್ಕೆ ನೇರವಾದ ಮಾರ್ಗ ಯಾವುದೆಂಬುದನ್ನು ಕಂಡು ಹಿಡಿಯಲು ತಜ್ಞರಿಗೆ ಸೂಚನೆ ನೀಡಲಾಯಿತು. ಅವರು ನಕ್ಷೆಗಳನ್ನು ಪರಿಶೀಲಿಸಿ ಮದ್ರಾಸಿನಿಂದ ವೇಲೂರು ಅಲ್ಲಿಂದ ಬೆಂಗಳೂರು ಮುಂದೆ ಚನ್ನಪಟ್ಟಣ, ಮದ್ದೂರು, ಮಂಡ್ಯಗಳ ಮೂಲಕ ಶ್ರೀರಂಗಪಟ್ಟಣ ಸೇರುವುದೇ ನೇರವಾದ ಮಾರ್ಗವೆಂದು ಸೂಚಿಸಿದರು.

ಲಾರ್ಡ್ ಕಾರ್ನ್‌ವಾಲೀಸ್‌ನು ಕ್ರಿ.ಶ. ೧೭೯೧ರ ಫೆಬ್ರವರಿ ೫ರಂದು ದಂಡಿನೊಡನೆ ಸೇನಾ ಯಾತ್ರೆಯನ್ನು ಆರಂಭಿಸಿದನು. ೧೧ರಂದು ದಂಡು ವೇಲೂರು ತಲುಪಿತು. ಅಲ್ಲಿ ಇನ್ನಷ್ಟು ಸೇನೆಯನ್ನು ಜೊತೆ ಮಾಡಿಕೊಂಡು ಈ ಮಹಾಸೇನೆ ಅಂಬೂರ್ ಕಣಿವೆಯ ಮೂಲಕ ಮುನ್ನಡೆಯಿತು. ಈ ಮಧ್ಯೆ ಗೂಢಚಾರ ದಳದ ಮುಖ್ಯಸ್ಥನಾಗಿದ್ದ ಕರ್ನಲ್ ರೀಡ್ ಎಂಬಾತನು ಸಣ್ಣ ಪಟ್ಟ ಪಾಳೆಯಗಾರರನ್ನು ತಾನು ವಶಪಡಿಸಿಕೊಂಡು ಬ್ರಿಟಿಷರಿಗೆ ನೆರವಾಗುತ್ತಿದ್ದನು. ಈ ಪಾಳೆಯಗಾರರು ಮೈಸೂರು ಸುಲ್ತಾನರ ಆಡಳಿತದಿಂದಾಗಿ ಬೇಸತ್ತು ನಾನಾ ವಿಧವಾದ ಸಂಕಷ್ಟಗಳಿಗೆ ಗುರಿಯಾಗಿದ್ದರು. ಆದ್ದರಿಂದ ಇವರಿಂದ ಸಾಕಷ್ಟು ಲಂಚ ಪಡೆದು, ಅವರ ಪರವಾಗಿ ಹೋರಾಡುವುದಾಗಿ ಮಾತುಕೊಟ್ಟರು. ಈ ಪಾಳೆಯಗಾರರಲ್ಲಿ ಮುಖ್ಯರಾದವರೆಂದರೆ ಕಂದುಗೋಧಿ ಪಾಳ್ಯದ ಪಾಳೆಯಗಾರ, ಚಿಕ್ಕಬಳ್ಳಾಪುರ, ಮದನಪಲ್ಲಿ, ಪುಂಗನೂರು ಮತ್ತು ಆನೇಕಲ್ ಊರುಗಳ ಪಾಳೆಯಗಾರರು. ಇವರಿಗೆಲ್ಲಾ ಮುಂದೆ ಸೂಕ್ತ ರೀತಿಯಲ್ಲಿ ರಕ್ಷಣೆ ನೀಡುವುದಾಗಿ ಬ್ರಿಟಿಷರು ಭರವಸೆ ನೀಡಿದ್ದರು. ಇದಕ್ಕೆ ಪ್ರತಿಯಾಗಿ ಈ ಪಾಳೆಯಗಾರರು ಬ್ರಿಟಿಷ್ ಸೈನಿಕರಿಗೆ ಆಹಾರ ಪದಾರ್ಥಗಳನ್ನು ಒದಗಿಸಬೇಕಾಗಿತ್ತು.

ಅಲ್ಲದೆ ಕರ್ನಲ್ ರೀಡನು ಕೆಲವು ಭಾರತೀಯ ನೌಕರರನ್ನು ಆಯ್ಕೆ ಮಾಡಿಕೊಂಡು ಅವರಿಗೆ ವರ್ತಕರ ವೇಷ ಧರಿಸಿ ಮೈಸೂರು, ಶ್ರೀರಂಗಪಟ್ಟಣಗಳಿಗೆ ಕಳುಹಿಸಿ, ಅಲ್ಲಿಂದ ಅನೇಕ ರಹಸ್ಯ ವಿಚಾರಗಳನ್ನು, ಉಪಯುಕ್ತ ನಕ್ಷೆಗಳನ್ನು, ಭೂಪಟಗಳನ್ನೂ ತರಿಸಿಕೊಂಡಿದ್ದನು. ಇದರಿಂದಾಗಿ ಸೇನಾಧಿಕಾರಿಗಳಿಗೆ ನೇರವಾದ ಮಾರ್ಗದರ್ಶನವಾಗುವುದರ ಜೊತೆಗೆ ಗುಡ್ಡ ಬೆಟ್ಟಗಳು ನದಿಗಳು ಎಲ್ಲಿ ಹರಿಯುತ್ತವೆ, ಬಯಲು ಸೀಮೆ ಯಾವುದು, ಗ್ರಾಮಗಳಲ್ಲಿವೆ ಎಂಬ ವಿಚಾರಗಳು ತಿಳಿಯುತ್ತಿತ್ತು.[೧೧]

ಇತ್ತ ಟಿಪ್ಪು ಫ್ರೆಂಚರ ನೆರವು ಪಡೆಯಲು ಪಾಂಡಿಚೇರಿಯಲ್ಲಿ ಉಳಿದಿದ್ದನು. ಲಾರ್ಡ್ ಕಾರ್ನ್‌ವಾಲೀಸನ ದಂಡು ಶ್ರೀರಂಗಪಟ್ಟಣದ ಕಡೆ ಸಾಗಿ ಬರುತ್ತಿರುವ ವಿಷಯವನ್ನು ತಿಳಿದು ಟಿಪ್ಪು ಪಾಂಡಿಚೇರಿಯನ್ನು ಬಿಟ್ಟು ಬ್ರಿಟಿಷರ ಸೈನ್ಯವನ್ನೆದುರಿಸಲೆಂದು ಚಂಗಮ ಮತ್ತು ಪಾಲಕಾಡು ಕಣಿವೆಗಳ ಮೂಲಕ ಮೈಸೂರಿಗೆ ಹಿಂದುರಿಗಿದನು. ಆದರೆ ಅಂಬೂರಿನತ್ತ ಮುನ್ನಡೆವ ತೋರಿಕೆಯನ್ನು ಮಾಡಿದ ಕಾರ್ನ್‌ವಾಲೀಸನು, ಟಿಪ್ಪುವನ್ನು ವಂಚಿಸಿ ಮುಗಳಿ ಕಣಿವೆ ಮುಖಾಂತರ ಮೈಸೂರನ್ನು ಪ್ರವೇಶಿಸಿದನು. ಕಾರ್ನ್‌ವಾಲೀಸನು ಬೆಂಗಳೂರಿನ ಮೇಲೆ ದಂಡೆತ್ತಿ ಬರುವನೆಂದು ನಿರೀಕ್ಷಿಸಿದ ಟಿಪ್ಪು ಬ್ರಿಟಿಷರು ಅಲ್ಲಿಗೆ ಆಗಮಿಸುವ ಮೊದಲೇ ಅದನ್ನು ಕಾಪಾಡುವ ಕೆಲಸಗಳನ್ನು ಮಾಡಬೇಕೆಂದು ಕೂಡಲೇ ಹೊರಟನು. ಮಾರ್ಚ್ ೩ರಂದು ಬೆಂಗಳೂರನ್ನು ಸೇರಿದ ಮೇಲೆ ಅದರ ದಂಡನಾಯಕನಾದ ಸೈಯದ್ ಫೀರ್‌ನನ್ನೂ, ರಾಜರಾಮಚಂದ್ರನೆಂಬೊಬ್ಬ ಅಧಿಕಾರಿಗಳನ್ನು ಸಂಚಿನ ಆಧಾರದ ಮೇಲೆ ಸೆರೆಯಲ್ಲಿರಿಸಿ, ಕೃಷ್ಣಗಿರಿಯ ಫೌಜುಧಾರ ಬಹೂದ್ದೂರ್ ಖಾನ್‌ನನ್ನು ಆ ಕೋಟೆಯ ದಂಡನಾಯಕನನ್ನಾಗಿ ನೇಮಿಸಿದನು. ಅದರ ರಕ್ಷಣಾ ಕಾರ್ಯದಲ್ಲಿ ಸಹಾಯಕರಾಗಿರಲೆಂದು ಮಹಮದ್ ಖಾನ್ ಬಕ್ಷಿ ಮತ್ತು ಸೈಯದ್ ಹಮೀದರನ್ನು ನೇಮಕ ಮಾಡಿದನು. ಈ ಏರ್ಪಾಡುಗಳನ್ನು ಮಾಡಿದ ಮೇಲೆ ಶತ್ರುವು ಮುನ್ನುಗ್ಗುವುದನ್ನು ತಡೆಗಟ್ಟಲೆಂದು ಹೊರಕ್ಕೆ ನಡೆದನು.

ಈ ನಡುವೆ ಕಾರ್ನ್‌ವಾಲೀಸನು ಬೆಂಗಳೂರಿನತ್ತ ಮುನ್ನುಗ್ಗುವುದನ್ನು ಮುಂದುವರೆಸಿದ್ದನು. ಅವನು ಕೋಲಾರವನ್ನು ಫೆಬ್ರವರಿ ೨೮ರಂದು ವಶಪಡಿಸಿಕೊಂಡು, ಯಾವ ಅಡತಡೆಗಳೂ ಇಲ್ಲದೆ ಮುನ್ನಡೆದ ಈ ಸೈನ್ಯ ಮಾರ್ಚ್ ೫ರ ವೇಳೆಗೆ ಹೊಸಕೋಟೆಯನ್ನು ತಲುಪಿತು. ಈ ಸ್ಥಳಗಳಲ್ಲಿ ರಕ್ಷಣಾ ಸೇನೆ ಇರಲಿಲ್ಲ. ಇದ್ದ ಕೆಲವು ಕೋವಿಗರು ಮೊದಲ ಕರೆಯಲ್ಲಿಯೇ ಶರಣಾಗತರಾದರು.

ಲಾರ್ಡ್ ಕಾರ್ನ್‌ವಾಲೀಸನ ಸೈನ್ಯದಲ್ಲಿ ೨೨.೩೦೦ ಮಂದಿ ನುರಿತ ಸೈನಿಕರಿದ್ದರು. ಇಷ್ಟಲ್ಲದೆ ಸೇವಕರು, ಹೆಂಗಸರು ಎಲ್ಲಾ ಸೇರಿ ಒಂದು ಲಕ್ಷ ಮೂವತ್ತು ಸಾವಿರ ಮಂದಿ ಇದ್ದರು. ಅನೇಕ ಸಿಪಾಯಿಗಳು ಹೆಂಡತಿ ಮಕ್ಕಳನ್ನೂ ಜೊತೆಗೆ ಕರೆ ತಂದಿದ್ದರು(ಇದು ಅಂದಿನ ಪದ್ಧತಿ). ಹೀಗಾಗಿ ಸೈನ್ಯದ ಗಾತ್ರ ಬೆಳೆದು ಹೋಗಿತ್ತು. ಇಷ್ಟೊಂದು ಜನಕ್ಕೂ ಬಿಡಾರಗಳಲ್ಲಿ ಊಟದ ವ್ಯವಸ್ಥೆ ಆಗಬೇಕಾಗಿತ್ತು. ಆಹಾರ ಪದಾರ್ಥಗಳ ನೆರವಿಗಾಗಿ ಸೈನ್ಯದ ಜೊತೆಯಲ್ಲಿ ಅಂಗಡಿಗಳೇ ಹೊರಡುತ್ತಿದ್ದವು. ಸೈನ್ಯ ಬಿಡಾರ ಹೂಡಿದಲ್ಲೆಲ್ಲಾ ಈ ಅಂಗಡಿ ಮಾಲೀಕರು ತಾವು ತಂದಿದ್ದ ಸಾಮಾನುಗಳನ್ನು ಹರಡಿ ಅಂಗಡಿ ಇಡುತ್ತಿದ್ದರು. ಈ ವಿಧವಾದ

ತಾತ್ಕಾಲಿಕ ಅಂಗಡಿಗಳಲ್ಲಿ ದಿನಸಿ ಪದಾರ್ಥಗಳೂ, ಬಟ್ಟೆ ಬರೆಗಳೂ ಇತರ ಆಕರ್ಷಣೀಯ ವಸ್ತುಗಳೂ ಇರುತ್ತಿದ್ದವು. ಕ್ಯಾಪ್ಟನ್ ಇನ್ನಸ್ ಮನ್ರೋ ಎಂಬಾತ ಈ ವಿಚಾರವಾಗಿ ಒಂದು ಗ್ರಂಥವನ್ನೇ ಬರೆದಿದ್ದಾನೆ. (ಮೂಹಿಬುಲ್ ಹಸನ್ ಖಾನ್, ೨೧೬)

ಕಾರ್ನ್‌ವಾಲೀಸನ ಸೈನ್ಯದಲ್ಲಿ ಈ ಜನಸಾಗರವಲ್ಲದೆ ೮೦,೦೦೦ ಗಾಡಿಗಳೂ, ನೂರಾರು ಒಂಟೆಗಳೂ, ಕುದುರೆಗಳೂ ಇದ್ದವು. ಒಂದು ನೂರು ಆನೆಗಳೂ, ಆನೆಯೊಂದಕ್ಕೆ ಇಬ್ಬರಂತೆ ಇನ್ನೂರು ಮಂದಿ ಮಾವುತರು ಇದ್ದರು. ಒಂದೊಂದು ಒಂಟೆಗೂ ಒಬ್ಬೊಬ್ಬ ಚಾಕರನಿರುತ್ತಿದ್ದ. ಒಂದೊಂದು ಕುದುರೆಗೆ ಸವಾರಿ ಮಾಡುವುದಕ್ಕೊಬ್ಬ ಹುಲ್ಲು ಮೇಯಿಸುವುದಕೊಬ್ಬನಂತೆ ಇಬ್ಬರು ಆಳುಗಳಿರುತ್ತಿದ್ದರು.

ಯಾವುದೇ ಪ್ರತಿರೋಧವನ್ನು ಎದುರಿಸಲಿಲ್ಲವಾದರೂ ಟಿಪ್ಪುವಿನ ಅಶ್ವಾರೋಹಿ ಪಡೆಗಳು ಅವರ ಹಿಂದಿನಿಂದ ಕಿರುಕುಳವನ್ನು ಕೊಡುತ್ತಾ, ಎತ್ತುಗಳನ್ನು ಹೊತ್ತುಕೊಂಡು ಹೋಗುತ್ತಿದ್ದವು. ಬ್ರಿಟಿಷರ ದಾಸ್ತಾನಿನ ಮೂಟೆಗಳ ಮೇಲೆ ಮತ್ತು ಚದುರಿದಂತೆ ಮೇಲೆ ಎರಗುತ್ತಿದ್ದವು. ಶತ್ರುಗಳು ನಡೆಯುವ ದಾರಿಯುದ್ದಕ್ಕೂ ಇದ್ದ ಪ್ರದೇಶಗಳ ಬೆಳೆಯನ್ನು ನಾಶಮಾಡಿ, ಅವರಿಗೆ ವಸ್ತುಗಳ ತೀವ್ರ ಕೊರತೆಯನ್ನುಂಟು ಮಾಡುತ್ತಿದ್ದರು. ಆದರೂ ಬ್ರಿಟಿಷರ ಸೈನ್ಯವು ಬೆಂಗಳೂರಿಗೆ ಹತ್ತು ಮೈಲಿಗಳ ದೂರದಲ್ಲಿದೆ ಎನ್ನುವಾಗಲೇ ಟಿಪ್ಪುವಿನ ಆಶ್ವದಳವು ಸ್ವಲ್ಪ ರಭಸದಿಂದ ಕಾಣಿಸಿಕೊಂಡು, ಮಾರ್ಚ್ ೫ರ ಬೆಳಿಗ್ಗೆ ಬ್ರಿಟಿಷರ ಸೈನ್ಯದ ಮೇಲೆ ಫಿರಂಗಿಗಳನ್ನು ಹಾರಿಸಿ ಪ್ರತಿರೋಧವನ್ನು ತೋರಿದರು. ಮತ್ತು ಅವರ ವಸ್ತು ಸಂಗ್ರಹದ ಮೇಲೆ ದಾಳಿ ನಡೆಯಿತು. ಆದರೆ ಇದು ಅವರ ಮುನ್ನಡೆಯನ್ನು ಕುಗ್ಗಿಸಲಿಲ್ಲ. ಸುಮಾರು ೧೦ ಮಂದಿಯನ್ನು ಕಳೆದುಕೊಂಡು ಅವರು ಆ ಮಧ್ಯಾಹ್ನದ ವೇಳೆಗೆ ಬೆಂಗಳೂರನ್ನು ಮುಟ್ಟುವುದರಲ್ಲಿ ಯಶಸ್ವಿಯಾದರು.

ಮಾರ್ಚ್ ೬ರ ಸಂಜೆ ಫ್ಲಾಯ್ಡ್‌ನು ಕೋಟೆಯ ಪೂರ್ವದಲ್ಲಿ ತನ್ನೆಲ್ಲಾ ಅಶ್ವಪಡೆಯೊಡನೆ ಯಾವುದೇನೆಂಬುದನ್ನು ತಿಳಿಯಲು ಸುಳಿದಾಡುತ್ತಿದ್ದಾಗ, ಅವನ ಮೇಲೆ ಬಾಲಾಜಿರಾಯನ ಅಧಿಪತ್ಯದಲ್ಲಿ ಟಿಪ್ಪು ಕಳುಹಿಸಿದ್ದ ೧೦೦೦ ಕುದುರೆಗಳೊಡನೆ ಕಾಳಗ ಆರಂಭವಾಯಿತು. ಮೈಸೂರಿನವರು ಮೊದಲು ತಮ್ಮ ಹಿಡಿತವನ್ನು ಪಡೆದರಾದರೂ ತಮಗಿಂತ ಅತ್ಯಂತ ಹೆಚ್ಚಿನ ಸಂಖ್ಯೆಯ ಸೇನೆ ಬ್ರಿಟಿಷರಿಗೆ ಒದಗಿದುದರಿಂದ, ಕೊನೆಗೆ ಬಿಟ್ಟುಕೊಟ್ಟರು. ಅವರನ್ನು ಬೆನ್ನಟ್ಟುತ್ತಿರುವಾಗ, ಟಿಪ್ಪುವಿನ ಸೈನ್ಯವು ಆಗ ತಾನೆ ಒಂದು ಕೋಟೆಯ ನೈರುತ್ಯದಲ್ಲಿ ಪಾಳೆಯವನ್ನು ಹೂಡುತ್ತಿದ್ದುದನ್ನು ಸೇನೆಯ ಹಿಂಭಾಗದ ಉತ್ತರದ ಸ್ಥಳದಿಂದ ಫಾಯ್ಡ್‌ನು ಕಂಡನು. ಅವನು ಯಾವುದೇ ಪ್ರಯತ್ನದಲ್ಲಿ ತೊಡಗಬಾರದೆಂದು ಕಾರ್ನ್‌ವಾಲೀಸನಿಂದ ಆಜ್ಞೆಯಾಗಿದ್ದರೂ, ಶತ್ರುವಿಗೊಂದು ಹೊಡೆತವನ್ನು ಕೊಟ್ಟರೆ, ಬರುವ ಹೊಗಳಿಕೆಯ ಪ್ರತೀಕ್ಷೆಯಿಂದ ಆಕರ್ಷಿತನಾದನು. ಮೊದಲವನು ಯಶಸ್ವಿಯಾದನು. ಅಡುಗೆಯನ್ನು ಮಾಡುತ್ತಲೋ, ವಿಶ್ರಾಂತಿಯನ್ನು ಪಡೆಯುತ್ತಲೋ ಇದ್ದ ಮೈಸೂರಿನವರು ದಿಗ್ಭ್ರಾಂತರದರು. ಆದರೆ ಬಹು ಬೇಗನೆಯೆ ಒಗ್ಗೂಡಿ, ಬ್ರಿಟಿಷರ ಮೇಲೆ ಪ್ರತಿದಾಳಿಯನ್ನೆಸಗಿದರು. ಫ್ಲಾಯ್ಡ್‌ನಿಗೆ ಮುಖದಲ್ಲಿ ಗಾಯವಾಗಿ ಕುದುರೆಯಿಂದುರುಳಿದನು. ಅವನ

ಕಡೆಯವರು ಅವನನ್ನು ಹೊತ್ತುಕೊಂಡು ಹೋದರು. ಈ ಕಾಳಗದಲ್ಲಿ ಬ್ರಿಟಿಷರು ಸುಮಾರು ೪೦೦ ಜನರನ್ನು ಕಳೆದುಕೊಂಡರು. ಸುಮಾರು ೧೦೦ ಮಂದಿ ಕೈಸೆರೆ ಹಿಡಿಯಲಾಯಿತಾದರೂ, ಟಿಪ್ಪುವಿನ ಅಪ್ಪಣೆಯಂತೆ ಅವರ ಗಾಯಗಳಿಗೆ ಔಷದೋಪಚಾರ ಮಾಡಿಸಿ ಕಳುಹಿಸಿದರು.

ಫ್ಲಾಯ್ಡ್‌ನ ವಿರುದ್ಧವಾದ ಕಾರ್ಯಾಚರಣೆಯಲ್ಲಿ ಟಿಪ್ಪು ಜಯವನ್ನು ಪಡೆದಿದ್ದರೂ ಕೂಡ ರಾತ್ರಿಯ ದಾಳಿಯ ಭಯದಿಂದ ಅದೇ ರಂಗದಲ್ಲಿರುವುದು ಸರಿಯಲ್ಲವೆಂದು ಭಾವಿಸಿ, ೨೦೦೦ ಜನರನ್ನು ನಗರದ ರಕ್ಷಣೆಗಾಗಿರಿಸಿ, ಬೆಂಗಳೂರಿನ ನೈಋುತ್ಯಕ್ಕೆ ಒಂಬತ್ತು ಮೈಲಿಗಳ ದೂರದಲ್ಲಿರುವ ಕೆಂಗೇರಿಗೆ ಜರುಗಿದನು. ಅತ್ತಕಡೆ ಕಾರ್ನ್‌ವಾಲೀಸನು ಅವನ ಪಡೆಗಳಿಗಾದ ನಷ್ಟವನ್ನು ಮತ್ತು ಅವರು ಅನುಭವಿಸುತ್ತಿದ್ದ ಧಾನ್ಯ ಮತ್ತು ಹುಲ್ಲಿನ ತೀವ್ರತರನಾದ ಕೊರತೆಯನ್ನು ಗಮನಿಸಿ, ಕಾಲವನ್ನು ವ್ಯರ್ಥಮಾಡದೆ ಬೆಂಗಳೂರು ಕೋಟೆಗೆ ಮುತ್ತಿಗೆ ಹಾಕಲು ನಿರ್ಧರಿಸಿದನು.

ಬೆಂಗಳೂರು ಕೋಟೆಯು ೧೬ನೇ ಶತಮಾನದಲ್ಲಿ ಕೆಂಪೇಗೌಡನಿಂದ ಮೂಲತಃ ಮಣ್ಣಿನಿಂದ ನಿರ್ಮಾಣವಾಗಿದ್ದಿತು. ನಂತರ ಹೈದರ್ ಮತ್ತು ಟಿಪ್ಪು ಪೂರ್ಣವಾಗಿ ಕಲ್ಲಿನಿಂದ ಕಟ್ಟಿಸಿದರು. ಅದು ಅಂಡಾಕಾರವಾಗಿದ್ದು ಒಂದು ಮೈಲಿಗಿಂತ ಸ್ವಲ್ಪ ಹೆಚ್ಚಿನ ಸುತ್ತಳತೆಯುಳ್ಳದಾಗಿತ್ತು. ಅದು ಭದ್ರವೂ ಹಾಗೂ ಉನ್ನತವೂ ಆದ ಆಳುಬೇರಿಯಿಂದ ಕೂಡಿತ್ತು. ಅದಕ್ಕೆ ೨೬ ಬುರುಜುಗಳಿದ್ದು ಮೂರು ಬಾಯಿಗಳ ಫಿರಂಗಿಗಳಿದ್ದವು. ಅಲ್ಲಿ ಐವರು ಅಶ್ವಾರೋಹಿಗಳಿದ್ದರು. ಆಳವಾದ ಕಂದಕವಿದ್ದು. ಮುತ್ತಿಗೆಯ ಕಾಲದಲ್ಲಿ ಅತ್ಯಲ್ಪವಾದ ನೀರಿದ್ದಿತು. ಅದಕ್ಕೆ ಎರಡು ಹೆಬ್ಬಾಗಿಲುಗಳಿದ್ದವು. ನಗರದ ಎದುರಾಗಿದ್ದುದನ್ನು ದೆಹಲಿಯ ಬಾಗಿಲೆಂದೂ ಮತ್ತೊಂದನ್ನು ಮೈಸೂರು ಬಾಗಿಲೆಂದು ಕರೆಯಲಾಗಿದ್ದಿತು.[೨]

ಬ್ರಿಟಿಷ್ ಸೈನಿಕರು ಹಲಸೂರು ಗ್ರಾಮದ ಬಳಿ ಬಿಡಾರ ಹೂಡಿದ್ದರು. ಕಾರ್ನ್‌ವಾಲೀಸನು ಹಾಗೂ ಜನರಲ್ ಮೆಡೋಸನು ತಮ್ಮ ಡೇರೆಯಲ್ಲಿ ಕುಳಿತು ಮುತ್ತಿಗೆಯ ಬಗ್ಗೆ ಚರ್ಚೆ ನಡೆಸುತ್ತಿದ್ದಾಗ ಸುಲ್ತಾನನ ಕಡೆಯ ವಕೀಲನೊಬ್ಬ ಡೇರೆಯೊಳಕ್ಕೆ ಬಂದು ನಮಸ್ಕರಿಸಿ "ನಾನು ನಿಮಗೆ ಸಹಾಯ ಮಾಡಲು ಬಂದಿರುವೆ, ಆದರೆ ನಮ್ಮದೊಂದು ಷರತ್ತು. ಪೇಟೆಯಲ್ಲಿರುವ ಜನರ ಪ್ರಾಣರಕ್ಷಣೆ, ಮಾನರಕ್ಷಣೆ ಮಾಡಲು ನೀವು ಒಪ್ಪಿಕೊಳ್ಳಬೇಕು. ಅವರ ಆಸ್ತಿಗಳಿಗೆ ಹಾನಿಯನ್ನುಂಟು ಮಾಡಕೂಡದು ಎಂಬ ವಿಚಾರಗಳನ್ನೊಳಗಂಡಂದ್ದನ್ನು ಕಾರ್ನ್‌ವಾಲೀಸನು ಒಪ್ಪಿ ಯಾವುದೇ ರೀತಿಯಾದ ಹಾನಿಯಾಗದು ಎಂಬ ಭರವಸೆ ಇತ್ತನು.

ಆ ದಿನ ರಾತ್ರಿ ಒಂದು ಸಾವಿರ ಬ್ರಿಟಿಷ್ ಸೈನಿಕರು ವೇಷಾಂತರ ಹೊಂದಿ ಮುಸ್ಲಿಮರಂತೆ ವೇಷ ಧರಿಸಿ ಉಪ್ಪಾರ ಪೇಟೆಯ ಬಳಿಗೆ ಬಂದರು. ಇವರಿಗೆ ನೆರವು ನೀಡಲು ಕೆಲವು ಸ್ಥಳೀಯ ಮುಖಂಡರು ಬಳೆಪೇಟೆಯಲ್ಲಿರುವ ವಾಲಿಸುಗ್ರೀವ ದೇವಾಲಯದ ಬಳಿ ಕಾದಿದ್ದರು. ಆಗ ಉಪ್ಪಾರ ಪೇಟೆಯ ಉತ್ತರದಲ್ಲಿ ಮರಗಳ ತೋಪೊಂದಿತ್ತು. ಆ ತೋಪಿನಲ್ಲಿ ಬ್ರಿಟಿಷರ ಸೈನ್ಯ ಬೀಡು ಬಿಟ್ಟಿತು. ಆ ನಡು ರಾತ್ರಿಯಲ್ಲಿ ಸೈನಿಕರು ಒಬ್ಬೊಬ್ಬರಾಗಿ ಕೈಯಲ್ಲಿ ಬಂದೂಕು, ಸೊಂಟದಲ್ಲಿ ಪಿಸ್ತೂಲು ಇಟ್ಟುಕೊಂಡು,

ಮುಸ್ಲಿಂಮರ ಟೋಪಿಗಳನ್ನು ಧರಿಸಿಕೊಂಡು ಧರ್ಮಾಂಬುದಿಕೆರೆಯ ಎಡ ಭಾಗದಲ್ಲಿ ಹೊರಟು ಕುರುಚಲು ಗಿಡಗಳನ್ನು ಹಾದು ಕಂದಕವನ್ನು ದಾಟಲಾರಂಭಿಸಿದರು. ಕದಂಕದಲ್ಲಿ ಆಯಾಕಟ್ಟಾದ ಅಂದರೆ ಹೆಚ್ಚು ಆಳವಿಲ್ಲದ ಸ್ಥಳವನ್ನು ಹುಡುಕಿ, ಆ ಸ್ಥಳದಲ್ಲಿ ದಾಟಿ, ಎದುರುಗಡೆ ಗದ್ದೆಯನ್ನು ಹತ್ತಿ ಸಾಲಾಗಿ ನಿಂತರು. ಕಾರ್ನ್‌ವಾಲೀಸನೂ ಸಹ ಈ ಸೈನಿಕರೊಡನೆ ಸೇರಿದ್ದನು. ಹೀಗೆ ಸೈನಿಕರು ದಾಟಿ ಬರಲು ಆಯಕಟ್ಟಿನ ಸ್ಥಳ ತೋರಿಸಿ ನೆರವು ನೀಡಿದವರು ಸ್ಥಳೀಯ ಜನರೇ.

ಕಂದಕದ ಅಂಚಿನಲ್ಲಿದ್ದ ಮನೆಗಳನ್ನು ಖಾಲಿ ಮಾಡಿಸಬೇಕಾದುದು ಅನಿವಾರ್ಯವಾಯಿತು ಏಕೆಂದರೆ ಫಿರಂಗಿಗಳ ಹೊಡೆತದಿಂದ ಆ ಮನೆಗಳಿಗೆ ಘಾಸಿಯಾಗಿ ವಾಸವಾಗಿದ್ದವರಿಗೆ ಪ್ರಾಣಾಪಾಯವುಂಟಾಗುವ ಸಂಭವವಿತ್ತು. ಸ್ವಲ್ಪ ಹೊತ್ತಿನಲ್ಲಿಯೇ ಸಾವಿರ ಮಂದಿ ಸಿಪಾಯಿಗಳೂ ನಿರಾಯಾಸವಾಗಿ ಕಂದಕವನ್ನು ದಾಟಿಬಳೆಪೇಟೆಯೊಳಕ್ಕೆ ಬಂದೇ ಬಿಟ್ಟರು. ಇತ್ತ ಸಯ್ಯದ್ ಸಾಹೇಬನು ಹಲಸೂರು ಬಾಗಿಲಿನಲ್ಲಿ ತಕ್ಕ ಬಂದೋಬಸ್ತ್ ಮಾಡಿ, ಬ್ರಿಟಿಷ್ ಸೈನಿಕರು ಒಳಕ್ಕೆ ನುಗ್ಗದಂತೆ ಅಡ್ಡಿ ಅಡಚಣೆಗಳನ್ನೊಡ್ಡಿ ನೂರಾರು ಸೈನಿಕರನ್ನು ಕಾವಲು ಹಾಕಿದ್ದನು. ಈ ಸೈನಿಕರು ರಾತ್ರಿಯೆಲ್ಲಾ ಪಂಜುಗಳನ್ನುರಿಸಿಕೊಂಡು ಕಾಯುತ್ತಿದ್ದರು. ಇನ್ನೊಂದು ಕಡೆ ಕಮ್ರುದ್ದೀನ್‌ಖಾನನ ಅಶ್ವಪಡೆ ಪಶ್ಚಿಮದ ಕಡೆಯಿಂದ ಬ್ರಿಟಿಷ್ ಸೈನ್ಯದ ಮೇಲೆ ಎರಗಿತು. ಹೀಗಾಗಿ ಆಂಗ್ಲರ ಸೈನ್ಯಕ್ಕೂ ಬೆಂಗಳೂರು ಪಟ್ಟಣದಲ್ಲಿದ್ದ ಸೈನ್ಯಕ್ಕೂ ಹೊರವಲಯದಲ್ಲಿ ಕಾಳಗ ಆರಂಭವಾಯಿತು. ಬ್ರಿಟಿಷರೂ ಸುತ್ತುಗಟ್ಟಿದರು. ಆಗ ಮೇಜರ್‌ಗೌಡಿ ಎಂಬ ಸೇನಾಧಿಕಾರಿಯು ತನ್ನ ಕಡೆಯ ಸೈನಿಕರನ್ನು ಫ್ಲಾಯಿಡನ ಸೈನಿಕರ ನೆರವಿಗೆ ಕಳುಹಿಸಿದ. ಆಗ ಕಮ್ರುದ್ದೀನ್ ಖಾನನ ಸೈನ್ಯ ಹಿಮ್ಮೆಟ್ಟಬೇಕಾಯಿತು.[೧೩]

ಕಾರ್ನ್‌ವಾಲೀಸನು ಬೆಂಗಳೂರಿನ ಈಶಾನ್ಯದಲ್ಲಿ ಬೀಡು ಬಿಟ್ಟು, ಮಾರ್ಚ್ ಒನೇಯ ತಾರೀಕು ಬೆಳಗಿನ ಜಾವದಲ್ಲಿ ನಗರವನ್ನು ಮುತ್ತಲು ಆಜ್ಞೆ ಮಾಡಿದನು. ಉತ್ತರಕ್ಕಿರುವ ಒಂದು ಹೆಬ್ಬಾಗಿಲು ಅವರ ಮೊದಲ ಮುತ್ತಿಗೆಗೆ ಗುರಿಯಾಯಿತು. ಅಷ್ಟೇನೂ ಕಷ್ಟವಿಲ್ಲದ ಅದನ್ನು ನಿರ್ವಹಿಸಿ ಬ್ರಿಟಿಷ್ ಪಡೆಗಳು ಮುಂದಕ್ಕೆ ನುಗ್ಗಿದವು. ಕಲ್ಲುಗಳನ್ನು ಅಡ್ಡ ಹಾಕಲಾಗಿದ್ದ ಒಳಗಿನ ಬೃಹತ್ತಾದ ಪ್ರತಿರೋದವನ್ನು ಅವರು ಎದುರಿಸಿದರು. ಆದ್ದರಿಂದ ಕಡೆಗೆ ದೊಡ್ಡ ಫಿರಂಗಿಗಳನ್ನು ತಂದು ಬಾಗಿಲನ್ನು ತಳ್ಳಲಾಯಿತು. ಮೇಲೆ ಬೀಳಲು ಬಂದಿದ್ದವರು ಆಳುವೇರಿಯನ್ನು ಹತ್ತಿದರು. ರಕ್ಷಣಾ ಸೇನೆ ಹಠದಿಂದ ವಿರೋಧಿಸಿತಾದರೂ, ಕೊನೆಗೆ ಚದುರಿ ಕೋಟೆಯೊಳಕ್ಕೆ ಸಾಧ್ಯವಾದಷ್ಟು ವೇಗದಿಂದ ಓಡಿಹೋಯಿತು.

ಮೈಸೂರಿನವರು ಕೋಟೆಯೊಳಕ್ಕೆ ಹಿಮ್ಮೆಟ್ಟಿದಾಗ ನಗರವು ಆಂಗ್ಲ ಪಡೆಗಳ ಕೊಳ್ಳೆಗೆ ತುತ್ತಾಯಿತು. ಮುತ್ತಿಗೆಯ ಕಾಲದಲ್ಲಿ ತಮ್ಮ ವಸ್ತುಗಳೊಡನೆ ಬಹುಮಂದಿ ಪ್ರಜೆಗಳು, ಓಡಿಹೋಗಿದ್ದರಾದರೂ, ಬಂಗಾರದ ಮತ್ತು ಬೆಳ್ಳಿಯ ಒಡವೆಗಳನ್ನು ಮತ್ತು ಹೊಸ ಬಟ್ಟೆಗಳನ್ನು ಪಡೆಯದ ಆಂಗ್ಲಯೋಧನೊಬ್ಬನಾದರೂ ಇರಲಿಲ್ಲ. ಬ್ರಿಟಿಷರು ಕೂಡ ದೊಡ್ಡ ಪ್ರಮಾಣದಲ್ಲಿ ಧಾನ್ಯವನ್ನೂ, ಸೈನ್ಯ

[illegible]

ಆದರೆ ಮುತ್ತಿಗೆ ಹಾಕಿದ್ದ ಸೈನ್ಯವು ಕೋಟೆಗೆ ಸಾಕಷ್ಟು ಪೂರೈಕೆಯಿಲ್ಲದೆ ಬಳಲಿತು. ಏಕೆಂದರೆ ಇಡೀ ಬ್ರಿಟಿಷ್ ಸೈನ್ಯವನ್ನು ಸುತ್ತುವರಿದು ನಿಂತಿದ್ದ ಟಿಪ್ಪುವು ಅವರಿಗೆ ಆಹಾರ ಒದಗಿಸುತ್ತಿದ್ದ ಎಲ್ಲಾ ದಾರಿಗಳನ್ನು ತಡೆದು ಬಿಟ್ಟಿದ್ದನು. ಸುಲ್ತಾನನು ಬ್ರಿಟಿಷರನ್ನು ಎದುರಿಸಲು ಸಜ್ಜಾಗುತ್ತಿದ್ದನು.

ಇದರಿಂದಾಗಿ ಕಾರ್ನ್‌ವಾಲೀಸನು ಬೇಗ ಕೋಟೆಯನ್ನು ವಶಪಡಿಸಿಕೊಳ್ಳುವುದು ಅನಿವಾರ್ಯವಾಯಿತು. ಟಿಪ್ಪುವು ಅವರ ಮೇಲೆ ಬೀಳುವ ಮೊದಲೇ ಬ್ರಿಟಿಷರು ಮಾರ್ಚ್ ೨೧ರಂದು ರಹಸ್ಯವಾಗಿ ಕೋಟೆಗೆ ಮುತ್ತಿಗೆ ಹಾಕಿದರು. ಟಿಪ್ಪುವಿಗೆ ಆಶ್ಚರ್ಯವಾಯಿತು. ಕಾವಲು ಪಡೆಯು ಉಗ್ರವಾಗಿ ಹೋರಾಡಿತು. ಯುದ್ಧದಲ್ಲಿ ಸೈನ್ಯಾಧಿಕಾರಿಯೇ ಮರಣ ಹೊಂದಿದನು. ಟಿಪ್ಪು ಆಯ್ದ ೨೦೦೦ ಸಂಖ್ಯೆಯ ಜನರನ್ನು ರಕ್ಷಣಾ ಸೇನೆಯ ನೆರವಿಗೆ ಕಳುಹಿಸಿದನು. ಆದರೆ ಅವರು ಅಲ್ಲಿಗೆ ತುಂಬ ತಡವಾಗಿ ತಲುಪಿದವು. ಇದರಿಂದಾಗಿ ಕೋಟೆಯು ಇಂಗ್ಲೀಷರ ಪಾಲಾಯಿತು. ಇದರಿಂದ ಆಂಗ್ಲರಿಗೆ ೧೩೧ರಷ್ಟು ಸಾವುಗಳಾದವು. ಮೈಸೂರಿನವರು ೧೦೦೦ಕ್ಕೂ ಹೆಚ್ಚಿನ ಜನರನ್ನು ಕಳೆದುಕೊಂಡರು. ಗಾಯಗೊಂಡಿದ್ದ ಸುಮಾರು ೩೦೦ ಸೈನಿಕರೊಡನೆ ಷೇರ್ ಅನ್ಸಾರ್ ಮತ್ತು ಶಿವಾಜಿಯವರನ್ನು ಸೆರೆ ಹಿಡಿಯಲಾಯಿತು.[೧೫]

೩.೭. ಕಾವಲು ಪಡೆಯ ನೇಮಕ

ಹೈದರ್ ಮತ್ತು ಟಿಪ್ಪುವು ರಾಜ್ಯದ ವಿವಿದೆಡೆಗೆ ಕೋಟೆಗಳನ್ನು ನಿರ್ಮಾಣ ಮಾಡಿದರು. ಇವುಗಳು ರಾಜ್ಯದಲ್ಲಿನ ಆರ್ಥಿಕತೆಯನ್ನು, ರಾಜಕೀಯವನ್ನು ನಿರ್ಧರಿಸುವಂತಾಗಿದ್ದವು. ಹಾಗಾಗಿ ಮೈಸೂರು ಸುಲ್ತಾನರು ನಿರ್ಮಾಣ ಮಾಡಿದ ಪ್ರತಿಯೊಂದು ಕೋಟೆಗಳಿಗೂ ಸುರಕ್ಷತೆಯ ದೃಷ್ಟಿಯಿಂದ ಕಾವಲು ಪಡೆಯೊಂದನ್ನು ನೇಮಕ ಮಾಡುತ್ತಿದ್ದರು. ೧೭೫೮ರ, ವೇಳೆಗೆ ಬೆಂಗಳೂರು ಮೈಸೂರು ಒಡೆಯರಿಂದ ಹೈದರಾಲಿಗೆ ಜಹಾಗೀರಾಗಿ ದೊರೆಯಿತು. ಬೆಂಗಳೂರು ಪಾರುಪತ್ತೇಗಾರರ ಬದಲಾಗಿ ತನ್ನ ಕಡೆಯ ಖಿಲ್ಲೇದಾರನಾಗಿದ್ದ ಕಬೀರ್ ಬೇಗ್ ಎಂಬಾತನನ್ನು ಅಮಲ್ದಾರನ್ನಾಗಿ ನೇಮಿಸಿದನು. ಹೈದರ್‌ನಿಂದ ನೇಮಕವಾದಂತಹ ಖಿಲ್ಲೇದಾರರು ಜನರ ಹಿತಾಸಕ್ತಿಗಳನ್ನು ಕಾಪಾಡುವುದರ ಜೊತೆಗೆ ಯುದ್ಧದ ಸಂದರ್ಭದಲ್ಲಿ ಶತ್ರು ಸೈನ್ಯವನ್ನು ಸಮರ್ಥವಾಗಿ ಹಿಮ್ಮೆಟ್ಟಿಸಬೇಕಾಗಿತ್ತು. ಈ ಅಧಿಕಾರಿಗಳು ಜನರಿಂದ ಕಾಲಕಾಲಕ್ಕೆ ತೆರಿಗೆಯನ್ನು ಸಂಗ್ರಹಿಸಿ ರಾಜ್ಯಕ್ಕೆ ಸಲ್ಲಿಸಬೇಕಾಗಿತ್ತು.

''ಹೈದರನು ೧೭೬೨ರಲ್ಲಿ ಸಿರಾವನ್ನು ಗೆದ್ದು ಅದರ ನವಾಬನಾದನು, ಚಿಕ್ಕಬಳ್ಳಾಪುರ, ಮಡಕ ಶಿರಾ, ದೊಡ್ಡ ಬಳ್ಳಾಪುರ ಇವನ್ನೆಲ್ಲಾ ವಶಪಡಿಸಿಕೊಂಡನು, ಬೆಂಗಳೂರಿನಲ್ಲಿ ಚಿಕ್ಕದೇವರಾಜ ಒಡೆಯರ್ ಕಟ್ಟಿಸಿದ್ದ ಮಣ್ಣಿನ ಕೋಟೆಯನ್ನು ಕಲ್ಲಿನ ಕೋಟೆಯಾಗಿ ಪರಿವರ್ತಿಸಿದ. ಬೆಂಗಳೂರು ಪ್ರಮುಖ ವಾಣಿಜ್ಯ ಮತ್ತು ಕೈಗಾರಿಕ ನಗರವಾಗಿ ಬೆಳೆಯಲು ಹೈದರಾಲಿಯ ಕೊಡುಗೆ ದೊಡ್ಡದು ಎಂದು ಬುಕಾನನ್ ತಿಳಿಸಿದನು.''(ಶೇಷಗಿರಿರಾವ್ ಎಲ್.ಎಸ್., ೨೦೦೫, ೨೭)

ಹೈದರಾಲಿಯು ಬ್ರಿಟಿಷರನ್ನು ಸದೆ ಬಡಿಯಲು ಫ್ರೆಂಚರ ಸ್ನೇಹವನ್ನು ಬೆಳೆಸಿದನು. ಅವರ ಯುದ್ಧ ಕೌಶಲ್ಯಗಳನ್ನು ತನ್ನ ಸೈನ್ಯಕ್ಕೆ ನೀಡಿದನು. ಕೋಟೆಯೊಳಗೆ ಯುದ್ಧದ ಬಳಕೆಗಾಗಿ ಕ್ಷಿಪಣಿಗಳನ್ನು ತಯಾರಿಸುವ ಕಾರ್ಖಾನೆಯನ್ನು ಸ್ಥಾಪಿಸಿದನು. ಈ ಕ್ಷಿಪಣಿಗಳನ್ನು ಹಾಗೂ ಇತರೆ ಯುದ್ಧದ ಶಸ್ತ್ರಾಸ್ತ್ರಗಳನ್ನು ಶೇಖರಿಸಿಡಲು ವಿಶೇಷವಾದ "ಆರ್ಮರಿ" ಅಥವಾ ಯುದ್ಧ ಶಸ್ತ್ರಾಗಾರ ನಿರ್ಮಿಸಿನು.[೧೬] ಹೈದರಾಲಿಯು ಆರು ಸಾವಿರ ಸವಾರರು ಮತ್ತು ಇನ್ನೂರು ಕಾಲ್ದಳದವರೊಡನೆ ಬಳಸು ಮಾರ್ಗದಲ್ಲಿ ಹೊರಟು ೧೩೦ ಮೈಲಿ ದೂರವನ್ನು ಮೂರುವರೆ ದಿನಗಳಲ್ಲಿ ಪ್ರಯಾಣ ಮಾಡಿ ಶೀಘ್ರದಲ್ಲಿ ಮದ್ರಾಸಿನ ಬಳಿಗೆ ೧೭೬೯ರಲ್ಲಿ ಬಂದನು.[೧೬] ಹೈದರಾಲಿಯು ಹೂಡಿದ ಯುದ್ಧ ತಂತ್ರಗಳಿಂದಾಗಿ ಬ್ರಿಟೀಷರು ಮಣಿದು ಒಪ್ಪಂದ ಮಾಡಿಕೊಂಡರು.[೧೭]

ಹೈದರಾಲಿಯ ನೆನಪನ್ನು ತಂದು ಕೊಡುವ ಬೆಂಗಳೂರಿನ ಮತ್ತೊಂದು ಕೇಂದ್ರವೇ ಲಾಲ್‌ಬಾಗ್, ೧೭೬೧ಲ್ಲಿ ಬೆಂಗಳೂರು ಕೋಟೆಯ ಪೂರ್ವ ಭಾಗಕ್ಕೆ ಒಂದು ಮೈಲಿ ದೂರದಲ್ಲಿ ನಾಲ್ಕು ಎಕರೆ ಭೂಮಿಯನ್ನು ಹದಗೊಳಿಸಿ ಒಂದು ಉದ್ಯಾವನವನ್ನು ನಿರ್ಮಿಸಿದನು. ತೋಟಗಾರಿಕೆಯಲ್ಲಿ ನಿಪುಣರಾದವರನ್ನು ದೆಹಲಿ, ಲಾಹೋರ್, ಮುಲ್ತಾನ್ ಮುಂತಾದ ಪ್ರಾಂತಗಳಿಗೆ ಕಳುಹಿಸಿ ಅತ್ಯಂತ ಶ್ರೇಷ್ಠವಾದ ಹೂ-ಹಣ್ಣು ಹಾಗೂ ಅಲಂಕಾರಿಕ ಸಸ್ಯಗಳನ್ನು ತರಿಸಿಕೊಂಡನು. ಕರ್ನಾಟಕದ ಹಾಗೂ ಬೆಂಗಳೂರು ಇತಿಹಾಸದಲ್ಲಿ ಒಬ್ಬ ಧೀರ ಕೆಚ್ಚೆದೆಯ ಅಧಿಕಾರಿಯಾಗಿ ಜೀವಿಸಿದವನು ಹೈದರಾಲಿ. ೧೭೮೦ರಲ್ಲಿ ಮರಾಠರು, ನಿಜಾಮನೂ, ಬ್ರಿಟಿಷರು ಸೇರಿ ಸಂಘಟಿಸಿದ್ದ ಸಂಯುಕ್ತ ಪಕ್ಷವನ್ನು ಎದುರಿಸಿ ಹೈದರಾಲಿ ಎರಡನೇ ಆಂಗ್ಲೋ-ಮೈಸೂರು ಯುದ್ಧ ನಡೆಯುತ್ತಿದ್ದಾಗಲೇ ೧೭೮೨ರ ಡಿಸೆಂಬರ್‌ನಲ್ಲಿ ಬೆನ್ನುಫಣಿ ರೋಗದಿಂದಾಗಿ ಮರಣ ಹೊಂದಿದನು.[೧೮]

ಟಿಪ್ಪು ಸುಲ್ತಾನ್

ಕ್ರಿ.ಶ.೧೭೫೩ರಲ್ಲಿ ಇಂದಿನ ಬೆಂಗಳೂರು ಜಿಲ್ಲೆಗೆ ಸೇರಿದ ದೇವನಹಳ್ಳಿಯಲ್ಲಿ ಜನಿಸಿದನು. ಹೈದರಾಲಿಯು ತಾನು ಓದು ಬರಹ ತಿಳಿಯದಿದ್ದರೂ ಮಗನಿಗೆ ಪಾರ್ಸಿ, ಉರ್ದು, ಕನ್ನಡ, ಫ್ರೆಂಚ್ ಭಾಷೆಗಳನ್ನು ಕಲಿಸಿದ. ಟಿಪ್ಪು ತಂದೆಯೊಡನೆ ಬೆಳೆದು ಆತನ ಯುದ್ಧ ಕೌಶಲ್ಯಗಳನ್ನು, ಶೌರ್ಯಗಳನ್ನು ತನ್ನದಾಗಿಸಿಕೊಂಡಿದ್ದನು. ೧೭೮೨ರಲ್ಲಿ ಎರಡನೇ ಆಂಗ್ಲೋ-ಮೈಸೂರು ಯುದ್ಧವನ್ನು ಟಿಪ್ಪು ತಂದೆಯ ಮರಣನಂತರ ಮುಂದುವರೆಸಿ ಬ್ರಿಟೀಷರನ್ನು ೧೭೮೩ರಲ್ಲಿ ವಂದವಾಸಿ(ವಾಂಡಿವಾಶ್)ನಲ್ಲಿ ಸೋಲಿಸಿದನಾದರೂ ಬಿದನೂರು ಹಾಗೂ ಮಂಗಳೂರನ್ನು ಕಳೆದುಕೊಂಡನು. ಇದರಿಂದ ಮಂಗಳೂರು ಒಪ್ಪಂದವಾಯಿತು. ಬೆಂಗಳೂರಿನಲ್ಲಿ ಹೈದರಾಲಿಯು ೧೭೮೧ರಲ್ಲಿ ಅರಮನೆಯ ನಿರ್ಮಾಣವನ್ನು ಪ್ರಾರಂಭಿಸಿ ಮರುವರ್ಷ ನಿಧನ ಹೊಂದಿದ್ದನು. ಟಿಪ್ಪು ಅರಮನೆ ಕಾರ್ಯವನ್ನು ಮುಂದುವರೆಸಿದನು. ಅರಮನೆಯು ಕೇವಲ ಗಾರೆ ಮತ್ತು ಮರಗಳಿಂದ ನಿರ್ಮಾಣವಾಯಿತು. ೧೭೮೯ರಲ್ಲಿ ಟಿಪ್ಪು ತಿರುವಾಂಕೂರಿನ ಮೇಲೆ ದಾಳಿ ಮಾಡಿದಾಗ ರಾಜರ ಪರ

ಬ್ರಿಟಿಷರು ಟಿಪ್ಪುವಿನ ವಿರುದ್ಧ ಯುದ್ಧ ಸಾರಿದ್ದರ ಸಲುವಾಗಿ ಮೂರನೆಯ ಆಂಗ್ಲೊ-ಮೈಸೂರು ಯುದ್ಧನಡೆಯಿತು.

ಕರ್ನಲ್ ಫ್ಲಾಯಿಡ್, ಜನರಲ್ ಮಡೋಸ್ ಮುಂತಾದವರನ್ನೆಲ್ಲಾ ಟಿಪ್ಪು ಸುಲ್ತಾನ್ ಸೋಲಿಸಿದ್ದುದರಿಂದ ಗರ್ವನರ್ ಜನರಲ್ ಕಾರ್ನ್‌ವಾಲೀಸನು ತಾನೇ ಟಿಪ್ಪುವಿನೊಂದಿಗೆ ಯುದ್ಧ ಮಾಡಲು ಹೊರಟನು. ೧೭೯೧ರಲ್ಲಿ ಮದ್ರಾಸಿನಿಂದ ಹೊರಟ ಸೇನೆ ಫೆಬ್ರವರಿ ೧೧ರಂದು ವೇಲೂರು ತಲುಪಿತು. ೧೭೯೧ರ ಫೆಬ್ರವರಿ ೨೮ರಂದು ಕೋಲಾರ ಬ್ರಿಟಿಷರ ವಶವಾಯಿತು. ಯಾವ ಅಡೆ ತಡೆಗಳೂ ಇಲ್ಲದೆ ಮುನ್ನೆಡೆದ ಸೈನ್ಯ ಫೆಬ್ರವರಿ ೫ರೊಳಗೆ ಹೊಸಕೋಟೆಯನ್ನು ತಲುಪಿತು.[೧೯]

ಮೈಸೂರಿನ ಇತಿಹಾಸ ಬರೆದ ಮೊದಲಿಗ ಕರ್ನಲ್ ಮಾರ್ಕ್ ವಿಲ್ಕ್ಸ್, ೧೭೯೧ರಲ್ಲಿ ಬ್ರಿಟಿಷ್ ಸೈನ್ಯ ಬೆಂಗಳೂರನ್ನು ಪ್ರವೇಶಿಸಿದಾಗ ಕಂಡ ಚಿತ್ರವನ್ನು ಈ ರೀತಿಯಾಗಿ ವಿವರಿಸಿದ್ದಾನೆ, ''ಹಲಸೂರು ಗೇಟ್‌ನಿಂದ ಬ್ರಿಟಿಷ್ ಸೈನ್ಯ ಬೆಂಗಳೂರನ್ನು ಪ್ರವೇಶ ಮಾಡಿತು. ಅಲ್ಲಿ ಪೇಟೆಯ ತುಂಬಾ ಬೃಹತ್ ಪ್ರಮಾಣದ ಸೈನ್ಯಕ್ಕೆ ಬೇಕಾಗಿದ್ದ ಧಾನ್ಯರಾಶಿ ಬಿದ್ದಿತು. ಬೆಂಗಳೂರು ಆಗ ಭಾರಿ ಕೈಗಾರಿಕೆಗಳ ಮತ್ತು ವಾಣಿಜ್ಯೋದಮದ ಕೇಂದ್ರವಾಗಿತ್ತು. ಸೈನ್ಯಕ್ಕೆ ಹೆದರಿ ಬೆಲೆ ಬಾಳುವ ವಸ್ತುಗಳೊಂದಿಗೆ ಅಲ್ಲಿನ ಜನ ಓಡಿಹೋಗಿದ್ದರೂ ಅಲ್ಲಿ ಕಂಡ ಹತ್ತಿ ವಸ್ತುಗಳು ಮತ್ತು ಕಚ್ಚಾವಸ್ತುಗಳು ಈ ನಗರವನ್ನು ಒಂದು ಬೃಹತ್ ಉತ್ಪಾದನ ಕೇಂದ್ರವಾಗಿತ್ತು ಎಂಬುದನ್ನು ಸಾಬೀತುಗೊಳಿಸುತ್ತದೆ. ಬೆಂಗಳೂರು ದೊಡ್ಡ ವ್ಯಾಪಾರ ಕೇಂದ್ರವಾಗಿ ಬೆಳೆಯಲು ಇನ್ನೊಂದು ಮುಖ್ಯ ಕಾರಣ ಟಿಪ್ಪು ಅನುಸರಿಸಿದ ವಾಣಿಜ್ಯ ನೀತಿ. ಬ್ರಿಟಿಷರು ತನ್ನ ಕಬಂದ ಬಾಹುಗಳನ್ನು ಎಲ್ಲೆಡೆ ಚಾಚಿ, ಅಡ್ಡ ಬಂದುದೆಲ್ಲಾವನ್ನು ನಿರ್ಧಯವಾಗಿ ನಾಶಮಾಡುತ್ತಿದ್ದ ಸಂದರ್ಭದಲ್ಲಿ ಅದನ್ನು ಪರಿಣಾಮಕಾರಿಯಾಗಿ ಎದುರಿಸಿದವರಲ್ಲಿ ಟಿಪ್ಪು ಸುಲ್ತಾನ್ ಬಹಳ ಮುಖ್ಯನಾದವನು. ಬಟ್ಟೆ ಉದ್ಯಮದೊಂದಿಗೆ ಬೆಂಗಳೂರಿನಲ್ಲಿ ಬೆಳೆದ ಮತ್ತೊಂದು ದೊಡ್ಡ ಉದ್ಯಮವೆಂದರೆ ಯುದ್ಧೋಪಕರಣಗಳ ತಯಾರಿಕ ಘಟಕಗಳು. ತಾರಮಂಡಲವೆಂಬ ಬೃಹತ್ ರಕ್ಷಣಾ ವಸ್ತುವಿನ ಉತ್ಪಾದನಾ ಘಟಕ ಅಲ್ಲಿ ನೆಲೆಗೊಂಡಿತ್ತು. ಕಬ್ಬಿಣ ಮತ್ತು ಮಿಶ್ರಲೋಹಗಳಿಂದ ಅಲ್ಲಿ ಫಿರಂಗಿಗಳನ್ನು, ಮದ್ದುಗುಂಡು ಮತ್ತು ಕತ್ತಿಯನ್ನು ಬೃಹತ್ ಪ್ರಮಾಣದಲ್ಲಿ ಉತ್ಪಾದಿಸುತ್ತಿದ್ದರು. ಯುದ್ಧ ನಿರತ ಮೈಸೂರು ಮತ್ತು ಭಾರತದೆಲ್ಲೆಡೆ ಈ ವಸ್ತುಗಳು ಅನಿವಾರ್ಯವಾಗಿ ಬೇಕಾಗಿದ್ದವು. ಹಾಗೆಯೇ ಬೆಂಗಳೂರು ನಗರ ಅತೀ ಹೆಚ್ಚಿನ ಸೈನ್ಯಕ್ಕೆ ಪ್ರಮುಖ ವಾಸಸ್ಥಾನವಾಗಿತ್ತು. ಇವೆಲ್ಲದರೊಂದಿಗೆ ಬೆಂಗಳೂರು ಒಂದು ಮಿಲಿಟರಿ ತಾಣವಾಗಿ, ವಿವಿಧ ಕಸಬು ಉತ್ಪಾದನೆಗಳಲ್ಲಿ ತೊಡಗಿದ ಜನರಿಂದ ಗಿಜಿಗುಡುತ್ತಿತ್ತು.''[೨೦]

ಟಿಪ್ಪು ಸುಲ್ತಾನನು ಬೆಂಗಳೂರಿನ ಕೋಟೆ ಬ್ರಿಟಿಷ್ ರಕ್ಷಣಾ ಕೇಂದ್ರವಾಗಿದ್ದಿತೆಂದು ಈ ಕೋಟೆಯನ್ನು ಒಡೆಸಿದನು. ಮುಂದೆ ೧೭೯೯ರಲ್ಲಿ ಬ್ರಿಟಿಷ್ ಸೈನ್ಯ ಶ್ರೀರಂಗಪಟ್ಟಣ ಮುತ್ತಿತ್ತು. ಮೇ ತಿಂಗಳ ೪ರಂದು ಮಧ್ಯಾಹ್ನ ಕೋಟೆಯನ್ನು ಮುತ್ತಿದಾಗ ಟಿಪ್ಪು ಸುಲ್ತಾನ್ ಹೋರಾಡುತ್ತಲೇ ಮರಣವನ್ನಪ್ಪಿದನು. ತನ್ನ

ಅಪಾರ ಧೈರ್ಯ, ಶೌರ್ಯ ಸಾಹಸಗಳಿಂದ ಬ್ರಿಟಿಷರ ವಿರುದ್ಧ ಸೆಣಸಾಡಿ ಅವರನ್ನು ನಮ್ಮ ನಾಡಿನಿಂದ ಹೊಡೆದೋಡಿಸಲು ಪ್ರಯತ್ನಿಸಿದ "ಮೈಸೂರು ಹುಲಿ" ಎಂದು ಚರಿತ್ರೆಯಲ್ಲಿ ಹೆಸರು ಪಡೆದ ಈತ ಬೆಂಗಳೂರು ಹಾಗೂ ಕರ್ನಾಟಕದ ಇತಿಹಾಸದಲ್ಲಿ ಒಬ್ಬ ಅತ್ಯಂತ ಪ್ರಮುಖ ಐತಿಹಾಸಿಕ ವ್ಯಕ್ತಿ ಅಷ್ಟೆ ಅಲ್ಲದೆ ಬೆಂಗಳೂರು ನಗರ ನಿರ್ಮಾಪಕರಲ್ಲಿ ತನ್ನದೇ ಆದ ಮಹತ್ವದ ಸ್ಥಾನವನ್ನು ಪಡೆದಿದ್ದಾನೆ.[೨೮]

ಹೈದರಾಲಿಯ ಕಾಲದಲ್ಲಿ ಖಿಲ್ಲೇದಾರರು

೧. ಇಬ್ರಾಹಿಂ ಸಾಹೇಬ್ ೧೦ ವರ್ಷ

೨. ಹುಸೇನ್ ಸಾಹೇಬ್ ೨ ವರ್ಷ

೩. ಮಿರ್ಜಾ ಇಸ್ಮಾಯಿಲ್ ಹುಸೇನ್ ಬೇಗ್ ೬ ವರ್ಷ

೪. ಹೈದರ್ ಹುಸೇನ್ ೫ ವರ್ಷ

ಹೈದರಾಲಿಯ ಕಾಲದಲ್ಲಿದ್ದ ಬೆಂಗಳೂರು ತಾಲೂಕು ಅಮಲ್ದಾರರು

೧. ಕಬೀರ್ ಬೇಗ್ ೨ ವರ್ಷ

೨. ಜಾಫರ ಆಲಿಖಾನ್ ೮ ವರ್ಷ

೩. ಗುಲಾಂ ರಜ್ವಿ ೩ ವರ್ಷ

೪. ದಾಸಪ್ಪ ೯ ವರ್ಷ

ಈ ದಾಸಪ್ಪನ ಕಾಲದಲ್ಲಿ ಹೈದರಾಲಿಯು ಮೃತನಾದನು. ಅದೇ ವರ್ಷ ಟಿಪ್ಪು ಸುಲ್ತಾನ್ ಅಧಿಕಾರ ವಹಿಸಿಕೊಂಡು ಬೆಂಗಳೂರನ್ನು ತನ್ನ ವಶಕ್ಕೆತೆಗೆದುಕೊಂಡನು. ಹಾಗೆ ಅಧಿಕಾರಕ್ಕೆ ಬಂದ ಮೇಲೆ ದಾಸಪ್ಪನನ್ನು ವಜಾಮಾಡಿ ಗುಲಾಂ ಹೈದರ್ ಎಂಬಾತನನ್ನು ಅಮಲ್ದಾರನ್ನಾಗಿ ನೇಮಿಸಿದನು. ಈತನು ಎಂಟು ವರ್ಷಗಳ ಕಾಲ ಬೆಂಗಳೂರಿನ ಅಮಲ್ದಾರನಾಗಿದ್ದನು. ಈ ಸಮಯದಲ್ಲಿ ಟಿಪ್ಪು ಸುಲ್ತಾನನು ಜೋಗಿಪಂತ್ ಅಥವಾ ಜೋಗಿಪಂಡಿತ್ ಎಂಬಾತನನ್ನು ಬೆಂಗಳೂರು ಜಿಲ್ಲೆಯ ಅಸೂಫ್‌ನನ್ನಾಗಿ ನೇಮಿಸಿದನು. ಬೆಂಗಳೂರಿನ ಎಲ್ಲಾ ಅಮಲ್ದಾರರು ಈತನ ಕೈಕೆಳಗೆ ಕೆಲಸ ಮಾಡುವಂತೆ ಹುಕುಂ ಹೊರಡಿಸಿದನು. ಈತನು ಏಳು ವರ್ಷಗಳ ಕಾಲ ಕಾರ್ಯನಿರ್ವಹಿಸಿದನು.

೧೭೯೧ರಲ್ಲಿ ಲಾರ್ಡ್ ಕಾರ್ನ್‌ವಾಲೀಸನ ನಾಯಕತ್ವದಲ್ಲಿ ಒಂದು ದೊಡ್ಡ ಸೈನ್ಯವು ಬೆಂಗಳೂರು ಕೋಟೆಯನ್ನು ವಶಪಡಿಸಿಕೊಂಡಿತು. ಕೆಲವು ವರ್ಷಗಳ ನಂತರ ಬ್ರಿಟಿಷರಿಗೂ ಸುಲ್ತಾನನಿಗೂ ಒಂದು ಒಪ್ಪಂದ ಏರ್ಪಟ್ಟು ಬೆಂಗಳೂರು ಪ್ರಾಂತ ಪುನಃ ಟಿಪ್ಪುವಿನ ವಶಕ್ಕೆ ಬಂತು. ಜೋಗಿಪಂತನಿಗೆ ಆಗದ ಶತ್ರುಗಳು ಅವನು ಬೆಂಗಳೂರು ಮುತ್ತಿಗೆಯಲ್ಲಿ ಬ್ರಿಟಿಷರಿಗೆ ಸಹಾಯ ಮಾಡಿದ ಎನ್ನುವ ಕಾರಣಕ್ಕಾಗಿ ಅವನನ್ನು ಕೊಲೆ ಮಾಡಿದರು. ಟಿಪ್ಪು ಸುಲ್ತಾನನು ಬೆಂಗಳೂರು ಪ್ರಾಂತವನ್ನು ಪುನಃ ಪಡೆದುಕೊಂಡ

[illegible]

[illegible]

[illegible]

[illegible]

ಮೇಲೆ ಗುಲಾಂ ಹೈದರ್‌ನನ್ನು ಕೆಲಸದಿಂದ ವಜಾ ಮಾಡಿ, ಹೈದರ್‌ಬೇಗ್ ಎಂಬುವವನನ್ನು ಅಮಲ್ದಾರನನ್ನಾಗಿ ನೇಮಿಸಿದನು. ಇವನು ಎರಡು ವರ್ಷಗಳ ಕಾಲ ಕಾರ್ಯನಿರ್ವಹಿಸಿದನು. ಈತನ ಬಳಿಕ ಮಲ್ತಾನ್ ಸಾಹೇಬ್ ಎಂಬಾತನು ಅಮಲ್ದಾರನಾಗಿ ನೇಮಕಗೊಂಡು ಒಂದು ವರ್ಷಕಾಲ ಮಾಡಿ ಬೆಂಗಳೂರು ಅಸೂಫ್ ಪದವಿಗೇರಿದನು. ಅನಂತರ ಇವನ ಜಾಗದಲ್ಲಿ ಮಿರ್ ಮಹಮದ್ ಎಂಬಾತನು ನೇಮಕ ಹೊಂದಿ ಒಂದು ವರ್ಷ ಕಾರ್ಯ ನಿರ್ವಹಿಸಿದನು. ಇವನಾದ ನಂತರ ಮಹಮದ್ ಅಲಿ ಮಹಕರ್ ಎಂಬಾತನು ಅಮಲ್ದಾರನಾಗಿ ಐದು ವರ್ಷ ಆಳ್ವಿಕೆ ನಡೆಸಿದನು.

ಈ ಐದು ವರ್ಷಗಳಲ್ಲಿ ಅಮಲ್ದಾರ್ ಕೆಲಸ ಮಾಡಿದವರೆಂದರೆ

೧. ಅಬ್ದುಲ್ ಕರೀಂ - ಒಂದು ವರ್ಷ ಆರು ತಿಂಗಳು

೨. ಗುಲಾಂ ಮಾಹಿಯುದ್ದೀನ್ - ಒಂದು ವರ್ಷ ಆರುತಿಂಗಳು

೩. ಗುಲಾಂ ಮಹಮದ್ - ಎರಡು ವರ್ಷ

ಟಿಪ್ಪು ಮರಣಾನಂತರ (೧೭೯೯)ರ ದಿವಾನ್ ಪೂರ್ಣಯ್ಯನವರು ಅಧಿಕಾರಕ್ಕೆ ಬಂದ ಬಳಿಕ ಈ ಕೆಳಕಂಡವರು ಬೆಂಗಳೂರಿನಲ್ಲಿ ಅಮಲ್ದಾರ್‌ರಾಗಿ ಕಾರ್ಯನಿರ್ವಹಿಸಿದರು.

೧. ವೆಂಕಟಯ್ಯ - ೧ ವರ್ಷ

೨. ಶೇಷಗಿರಿರಾವ್ - ೧ ವರ್ಷ

೩. ಮಾಧವರಾವ್ - ೬ ವರ್ಷ

೩.೮. ಮೈಸೂರು ಸುಲ್ತಾನರ ಯುದ್ಧಗಳಲ್ಲಿ ಬೆಂಗಳೂರಿನ ಪಾತ್ರ

೧೭ನೇ ಶತಮಾನದ ಮಧ್ಯ ಭಾಗದಿಂದಲೂ ಬೆಂಗಳೂರು ಯುದ್ಧಗಳಿಂದ ಪ್ರಾಮುಖ್ಯತೆಯನ್ನು ಪಡೆದುಕೊಂಡಿತ್ತು. ಈ ನಗರವು ಆಯಕಟ್ಟಿನ ಸ್ಥಳದಲ್ಲಿ ನಿರ್ಮಾಣವಾಗಿದ್ದು ಮೈಸೂರು ರಾಜ್ಯದ ಉತ್ತರ ತುದಿಯ ಬಲಿಷ್ಠ ಮಿಲಿಟರಿ ನೆಲೆಯಾಗಿ ಪ್ರಸಿದ್ಧ ಪಡೆಯಿತು. ಅಲ್ಲಿಂದ ಸುಮಾರು ಮೂರು ದಶಕಗಳ ಕಾಲ ೧೭೬೦-೧೭೯೧ರ ವರೆಗೆ ಮೈಸೂರು ಸುಲ್ತಾನರ ಆಳ್ವಿಕೆಯಲ್ಲಿ ಬೆಂಗಳೂರು ಮುಖ್ಯ ಆಯುಧ ತಯಾರಿಕ ಘಟಕಗಳು ಅಲ್ಲಿ ನೆಲೆಗೊಂಡಿದ್ದವು. ಚಿಕ್ಕ ದೇವರಾಜರ ಆಳ್ವಿಕೆಯಲ್ಲಿ ಶಸ್ತ್ರಾಸ್ತ್ರ ತಯಾರಿಕ ಘಟಕಗಳು ಅಲ್ಲಿ ನೆಲೆಗೊಂಡಿದ್ದವು. ಆದರೆ ೧೮ನೇ ಶತಮಾನದ ಪೂರ್ವಾರ್ಧ ಬೆಂಗಳೂರನ್ನು ಯುದ್ಧ ಸಾಮಾಗ್ರಿಗಳ ತಯಾರಿಕ ಘಟಕಗಳ 'ತಾರಮಂಡಲ'ವೆಂಬ ಬೃಹತ್ ರಕ್ಷಣಾ ವಸ್ತುವಿನ ಉತ್ಪಾದನಾ ಘಟಕ ನೆಲೆಗೊಂಡಿತು. ಕಬ್ಬಿಣ ಮತ್ತು ಮಿಶ್ರ ಲೋಹಗಳಿಂದ ಅಲ್ಲಿ ಫಿರಂಗಿಗಳನ್ನು ಮದ್ದುಗುಂಡು, ಮತ್ತು ಕತ್ತಿಗಳನ್ನು ಬೃಹತ್ ಪಮಾಣದಲ್ಲಿ ಉತ್ಪಾದಿಸುತ್ತಿದ್ದರು. ಯುದ್ದನಿರತ ಮೈಸೂರು ಮತ್ತು ಭಾರತದೆಲ್ಲೆಡೆ ಈ ವಸ್ತುಗಳು ಅನಿವಾರ್ಯವಾಗಿ ಬೇಕಾಗಿದ್ದವು. ಹಾಗೆಯೇ ಬೆಂಗಳೂರು ಭರ್ಜರಿ ಸೈನ್ಯಕ್ಕೂ ವಾಸಸ್ಥಾನವಾಗಿತ್ತು

ಇದರೊಂದಿಗೆ ಬೆಂಗಳೂರು ಒಂದು ಮಿಲಿಟರಿ ತಾಣವಾಗಿ, ವಿವಿಧ ಕಸುಬು ಉತ್ಪಾದನೆಯಲ್ಲಿ ತೊಡಗಿದ ಜನರಿಂದ ಗಿಜಿಗಿಡುತ್ತಿತ್ತು.[೨೨]

ಮೈಸೂರು ಸುಲ್ತಾನರು ಈ ನಗರವನ್ನು ಯುದ್ಧಕ್ಕೆ ಯಾವ ಬಗೆಯಾಗಿ ಸಿದ್ಧತೆ ಮಾಡಿಕೊಳ್ಳುತ್ತಿದ್ದರೆಂಬುದನ್ನು ಸಮಕಾಲೀನ ಬ್ರಿಟಿಷ್ ಬರಹಗಾರರು ನೀಡಿರುವ ವಿವರಣೆಗಳಿಂದ ತಿಳಿಯಬಹುದಾಗಿದೆ. ಎಲ್.ಬಿ. ಚೌರಿಂಗ್‌ರವರು ತಮ್ಮ 'ಹೈದರ್ ಮತ್ತು ಟಿಪ್ಪು ಸುಲ್ತಾನ್' ಎಂಬ ತಮ್ಮ ಗ್ರಂಥದಲ್ಲಿ ಹೈದರನು ಯುದ್ಧಕ್ಕೆ ಬೆಂಗಳೂರಿನಲ್ಲಿ ಹೇಗೆ ಸಿದ್ಧತೆ ಮಾಡಿಕೊಳ್ಳುತ್ತಿದ್ದನೆಂಬುದರ ವಿವರಣೆ ನೀಡಿದ್ದಾರೆ. 'ಎಂಬತ್ತು ಮೂರು ಸಾವಿರ ಮಂದಿ ಸೈನಿಕರು ಬೆಂಗಳೂರಿನಲ್ಲಿ ಸಮಾವೇಶಗೊಂಡಿದ್ದರು. ಎಲ್ಲಿ ನೋಡಿದರೂ ಇವರ ಜಯಕಾರ ಬಹುಶಃ ಹಿಂದೆ ಇಷ್ಟು ಪ್ರಮಾಣದಲ್ಲಿ ಸೈನ್ಯ ಸೇರಿತ್ತೋ ಇಲ್ಲವೋ ನಾಕಾಣೆ ಹೈದರನ ಸ್ವಯಂ ಸೇವಕ ಹಾಗೂ ಗೂಡಚಾರ ಪದ್ಧತಿ ಬಹಳ ಸೊಗಸಾಗಿದ್ದಿತು. ಮೂರನೇ ಮೈಸೂರು ಯುದ್ಧದ ಬಗೆಗಿನ ವರದಿಯಲ್ಲಿ ಮೆಕಂಝಿಯು ೧೭೯೨ರ ಬೆಂಗಳೂರಿನ ಬಗ್ಗೆ ದಾಖಲಿಸಿರುವುದು ಹೀಗೆ,

ವಿಶಾಲವಾಗಿ ನಿರ್ಮಾಣಗೊಂಡ ಅನೇಕ ರಸ್ತೆಗಳು ಇಲ್ಲಿದ್ದು, ಭಾರತದ ಕೆಲವೇ ಕೆಲವು ಪಟ್ಟಣಗಳಲ್ಲಿ ಮಾತ್ರ ಬೆಂಗಳೂರಿನಲ್ಲಿರುವಂಥ ಬೃಹತ್ ಮನೆಗಳನ್ನು ನೋಡಬಹುದು. ಯುದ್ಧಕ್ಕೆ ಮುನ್ನ ಹಲವರು ಬಿಳಿಯರ ದಾಳಿಗೆ ಹೆದರಿ ತಮ್ಮ ಸಂಪತ್ತಿನೊಂದಿಗೆ ನಗರವನ್ನು ತೊರೆದು ಹೋಗಿದ್ದರೂ ಬೃಹತ್ ಪ್ರಮಾಣದ ಹತ್ತಿ ಮತ್ತಿತ್ತರ ಕಚ್ಚಾವಸ್ತುಗಳು, ದವಸಧಾನ್ಯಗಳು, ನಗರದಲ್ಲೆಲ್ಲಾ ಚೆಲ್ಲಾ ಪಿಲ್ಲಿಯಾಗಿ ಬಿದ್ದಿರುವುದು ಕಂಡು ಬಂದಿತು. ವಾರಸುದಾರರಿಲ್ಲದ ಮನೆಗಳಲ್ಲಿ ಕೊಳ್ಳೆಹೊಡೆದ ಸಂಪತ್ತು ಆ ನಗರದ ಶ್ರೀಮಂತಿಕೆಯನ್ನು ಸೂಚಿಸುತ್ತದೆ. ಮತ್ತು ಜನತೆಯು ಸಂತೋಷದಿಂದ ಇದ್ದರೆಂದು ಹೇಳಲಿಕ್ಕೆ ಅಡ್ಡಿಯಿಲ್ಲ. ಮೆಕೆಂಝಿಯು ಈ ವಿವರಗಳನ್ನು ಕೊಟ್ಟಿದ್ದು ಬ್ರಿಟಿಷ್ ಸೈನ್ಯ ೧೭೯೨ರಲ್ಲಿ ಟಿಪ್ಪು ಸೈನ್ಯ ಹಿಮ್ಮೆಟ್ಟಿಸಿದ ಕಾಲದಲ್ಲಿ ಬಹುತೇಕ ಪಾಳುಬಿದ್ದ ಬೆಂಗಳೂರಿನ ಬಗ್ಗೆ ಅಂದರೆ ವಿನಾಶಕಾರಿ ಯುದ್ಧಕ್ಕೆ ಮುನ್ನ ಬೆಂಗಳೂರು ಮತ್ತು ಅದರ ಸಂಪತ್ತು ಹೇಗಿತ್ತೆಂದು ಊಹಿಸಿಕೊಳ್ಳಬಹುದು.[೨೪]

ಹುಸೇನ್ ಅಲಿ ಕಿರ್ಮಾನಿ ಮೂರನೇ ಆಂಗ್ಲೊ-ಮೈಸೂರು ಯುದ್ಧದಲ್ಲಿ ಬೆಂಗಳೂರಿನ ಮುತ್ತಿಗೆಯ ಪೂರ್ಣ ವಿವರ ನೀಡಿದ್ದಾರೆ. ಉತ್ತರದ ಕಡೆಯ ಬಾಗಿಲಿಂದ ಬ್ರಿಟಿಷ್ ಸೈನ್ಯ ಒಳನುಗಿತ್ತು. ಹೀಗಾಗಿ ಹಿಂದೆ ಹಾಗೂ ಮುಂದಿನಿಂದ ಬಂದ ಬ್ರಿಟಿಷ್ ಸೈನಿಕರನ್ನು ಎದುರಿಸಲು ಟಿಪ್ಪು ಸುಲ್ತಾನನ ಸೈನಿಕರಿಗೆ ಕಷ್ಟವಾಯಿತು. ಹೆಚ್ಚು ಕಷ್ಟವಿಲ್ಲದೆ ಲಾರ್ಡ್ ಕಾರ್ನ್‌ವಾಲೀಸನು ಬೆಂಗಳೂರು ಕೋಟೆಯನ್ನು ಮುತ್ತಿದನು. ಕಾರ್ನ್‌ವಾಲೀಸನು ಬೆಂಗಳೂರು ಮುತ್ತಿಗೆಯ ನಂತರ ಹೀಗೆ ವಿವರ ನೀಡಿದನು. "ಕ್ರಿಯಾಶೀಲನು ಮತ್ತು ಪ್ರಬಲನೂ ಆದ ಶತ್ರುವಿನೆದುರಿನಲ್ಲಿ ಮುತ್ತಿಗೆಯನ್ನು ಹಾಕಿದಾಗ ಸೈನ್ಯವು ತುಂಬಾ ಬಸವಳಿದು

[illegible]

ಸಂಕಷ್ಟಗಳನ್ನು ಅನುಭವಿಸಿತು. ಮೇಲಿನ ಅಭಾವವು ಅನೇಕ ಸಂದರ್ಭಗಳಲ್ಲಿ ಮುನ್ನುಗ್ಗುವುದನ್ನು ನಿಲ್ಲಿಸಿತು. ಆದರೆ ಈ ಸ್ಥಳವನ್ನು ಹಿಡಿದುಕೊಂಡು ಮೇಲೆ ಅಭಾವ ಪರಿಹಾರವಾಯಿತು."[೨೫]

ಬೆಂಗಳೂರು ದಕ್ಷಿಣ ಭಾಗ ಹೈದರಾಲಿ ಮತ್ತು ಟಿಪ್ಪು ಸುಲ್ತಾನ್‌ರ ಅವಧಿಯಲ್ಲಿ ಮಿಲಿಟರಿ ಕಾರ್ಯಚರಣೆಯ ಕೇಂದ್ರಸ್ಥಾನವಾಗಿತ್ತು. ಹೈದರಾಲಿ ಮತ್ತು ಟಿಪ್ಪುವಿನ ಪತನ ನಂತರ ಬ್ರಿಟಿಷರು ೧೮೦೦ರಲ್ಲಿ ವಶಪಡಿಸಿಕೊಂಡು ಇಲ್ಲಿ ಆಡಳಿತ ನಡೆಸಿ ನಂತರ ಪಶ್ಚಿಮ ಭಾಗದಲ್ಲಿ ಸೈನ್ಯ ಕಾರ್ಯಚರಣೆ ಕೇಂದ್ರವಾಗಿ ಬಳಸಿಕೊಂಡರು. ೧೮ನೇ ಶತಮಾನದ ವೇಳೆಗೆ ಬೆಂಗಳೂರು ಮತ್ತು ಅದರ ನಿಯಂತ್ರಣ ಬಹಳಷ್ಟು ಪ್ರಾಮುಖ್ಯತೆ ಪಡೆಯಿತು.

ಅಡಿ ಟಿಪ್ಪಣಿಗಳು

೧. ಷೇಕ್ ಅಲಿ, ಬಿ. (ಪ್ರ.ಸಂ), ಕರ್ನಾಟಕ ಚರಿತ್ರೆ ಸಂ-೫, ೧೯೯೭, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ. ೫೦೫

೨. ಷೇಕ್ ಅಲಿ, ಬಿ. (ಪ್ರ.ಸಂ), ಪೂರ್ವೋಕ್ತ, ೧೯೯೭, ಪುಟ. ೫೦೯

೩. ಚರಿತ್ರೆ ಅಧ್ಯಯನ, ಸಂ-೧, ಸಂ-೧, ೨೦೦೬, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ.೧೮೦-೧೮೧

೪. ಸುರೇಶ್ ಮೂನ, ಇದು ನಮ್ಮ ಬೆಂಗಳೂರು, ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ೨೦೦೯, ಬೆಂಗಳೂರು ಪುಟ.೧೦೬,೧೦೮.

೫. ಸುರೇಶ್ ಮೂನ, ಪೂರ್ವೋಕ್ತ, ೨೦೦೯, ಪುಟ-೧೦೭

೬. ಸುರೇಶ್ ಮೂನ, ಪೂರ್ವೋಕ್ತ, ೨೦೦೯, ಪುಟ-೧೧೦

೭. ಸುರೇಶ್ ಮೂನ, ಬೆಂಗಳೂರು ನಗರ ನಿರ್ಮಾಪಕರು, ಸಾಧನ ಪ್ರಕಾಶನ, ಬೆಂಗಳೂರು, ೨೦೦೨ ಪುಟ-೨೦

೮. ಹುತಾತ್ಮ ಟಿಪ್ಪು ಸುಲ್ತಾನ್, ಕರ್ನಾಟಕ ವಿಮೋಚನಾರಂಗ, ೨೦೦೩, ಬೆಂಗಳೂರು ಪುಟ.೩೬-೩೭

೯. ಇರ್ಫಾನ್ ಹಬೀಬ್, ರಿಜಿಸ್ಟೆನ್ಸ್ ಅಂಡ್ ಮಾರ್ಡನೈಜೇಷನ್ ಅಂಡರ್ ಹೈದರಾಲಿ ಅಂಡ್ ಟಿಪ್ಪು ಸುಲ್ತಾನ್, ತುಳಿಕ, ೧೯೯೯, ನ್ಯೂಡೆಲ್ಲಿ ಪು.೧೭೬

೧೦. ಷೇಕ್ ಅಲಿ.ಬಿ. (ಪ.ಸಂ) ಪೂರ್ವೋಕ್ತ, ೧೯೯೭, ಪು-೩೩೧

೧೧. ಸುಂದರ್‌ರಾವ್, ಬ.ನ. ವನವಿಹಾರಿ, ಬೆಂಗಳೂರು ಇತಿಹಾಸ, ವಸಂತ ಕಾವ್ಯ ಗ್ರಂಥ ಮೂಲಾ, ೧೯೮೫, ಬೆಂಗಳೂರು, ೨೧೮-೨೯೬

೧೨. ಮೂಹಿಬುಲ್ ಹಸನ್‌ಖಾನ್ (ಮೂಲ) ಟಿಪ್ಪುಸುಲ್ತಾನನ ಇತಿಹಾಸ ಸಮೇತಹಳ್ಳಿ ರಾಮರಾ, ಕನ್ನಡ ಅಧ್ಯಯನ ಸಂಸ್ಥೆ, ೧೯೮೮, ಪುಟ-೨೯೬

[illegible]

೧೩. ಸುಂದರ್‌ರಾವ್ ಬ.ನ. ವನವಿಹಾರಿ, ಪೂರ್ವೋಕ್ತ, ೧೯೮೫, ಪುಟ-೨೨೭

೧೪. ಮೂಹಿಬುಲ್‌ಹಸನ್‌ಖಾನ್, ಟಿಪ್ಪುಸುಲ್ತಾನನ ಇತಿಹಾಸ (ಅನು), ಸಮೇತನಹಳ್ಳಿ ರಾಮರಾಯ, ಪೂರ್ವೋಕ್ತ, ೧೯೮೮, ಪುಟ.೨೯೭

೧೫. ಷೇಕ್‌ಅಲಿ ಬಿ. (ಪ್ರ.ಸ) ಪೂರ್ವೋಕ್ತ, ೧೯೯೭, ಪುಟ.೩೩೨

೧೬. ಸುರೇಶ್ ಮೂನ, ಪೂರ್ವೋಕ್ತ, ೨೦೦೯, ಪುಟ.೧೪

೧೭. ಕೃಷ್ಣರಾವ್ ಎಂ.ವಿ., ಕರ್ನಾಟಕ ಚರಿತ್ರೆ, ರಾವ್ ಅಂಡ್ ಸನ್ಸ್ ಪ್ರಕಾಶನ, ೧೯೫೭, ಬೆಂಗಳೂರು, ಪು.೧೪೭

೧೮. ಸುಂದರ್‌ರಾವ್ ಬ.ನ. ವನವಿಹಾರಿ ಪೂರ್ವೋಕ್ತ, ೧೯೫೯, ಪುಟ.೧೭೨

೧೯. ಸುರೇನ್ ಮೂನ, ಪೂರ್ವೋಕ್ತ, ೨೦೦೯, ಪುಟ.೧೬

೨೦. ಚಂದ್ರಶೇಖರ್ ಎಸ್. ಆಧುನಿಕ ಕರ್ನಾಟಕದ ಆಂದೋಲನಗಳು, ೨೦೦೨, ನಮ್ಮ ಪ್ರಕಾಶನ, ತಿಪಟೂರು, ಪು.೧೦-೧೧

೨೧. ಸುಂದರ್‌ರಾವ್ ಬ.ನ. ವನವಿಹಾರಿ, ಪೂರ್ವೋಕ್ತ, ೧೯೮೫, ಪುಟ.೧೩೦-೧೩೨

೨೨. ಚಂದ್ರಶೇಖರ್ ಎಸ್., ಪೂರ್ವೋಕ್ತ, ೨೦೦೨, ಪುಟ.೭

೨೩. ಸುರೇಶ್ ಮೂನ, ಪೂರ್ವೋಕ್ತ, ೨೦೦೯, ಪುಟ.೧೪

೨೪. ಮೊಹಿಬುಲ್‌ಹಸನ್‌ಖಾನ್, (ಅನು.) ಸಮೇತಹಳ್ಳಿ ರಾಮರಾಯ, ಪೂರ್ವೋಕ್ತ, ೧೯೮೮, ಪುಟ.೩೦೦

೨೫. ಸುರೇಶ್ ಮೂನ, ಪೂರ್ವೋಕ್ತ, ೨೦೦೯, ಪುಟ.೧೪

* * *

ಅಧ್ಯಾಯ - ನಾಲ್ಕು

ಮೈಸೂರು ಸುಲ್ತಾನರ ಆಳ್ವಿಕೆಯಲ್ಲಿ ಆರ್ಥಿಕ ಕೇಂದ್ರವಾಗಿ ಬೆಂಗಳೂರು

೪.೧. ಕೃಷಿ ವ್ಯವಸ್ಥೆ

೪.೨. ಕೃಷಿ ವಿಸ್ತರಣೆ

೪.೩. ಕೈಗಾರಿಕೆಗಳು

೪.೪. ತೋಟಗಾರಿಕೆ

೪.೫. ನಗರ ವ್ಯವಸ್ಥೆ

೪.೬. ವ್ಯಾಪಾರ-ವಾಣಿಜ್ಯ

೪.೭. ವರ್ತಕ ಸಮುದಾಯಗಳು

೪.೮. ವ್ಯಾಪಾರ ನೀತಿ

ಅಧ್ಯಾಯ - ನಾಲ್ಕು

ಮೈಸೂರು ಸುಲ್ತಾನರ ಆಳ್ವಿಕೆಯಲ್ಲಿ ಆರ್ಥಿಕ ಕೇಂದ್ರವಾಗಿ ಬೆಂಗಳೂರು

ಕರ್ನಾಟಕವನ್ನಾಳಿದ ಇತರ ದೊರೆಗಳಂತೆ ಮೈಸೂರು ಸುಲ್ತಾನರು ಊಳಿಗಮಾನ್ಯ ಶಕ್ತಿಗಳ ಪ್ರತಿನಿಧಿಗಳಾಗಿರಲಿಲ್ಲ. ಅವರು ಊಳಿಗಮಾನ್ಯತೆಯೊಂದಿಗೆ ಸಂಘರ್ಷಿಸುತ್ತಾ ಉದಯಿಸಿ ಬರುತ್ತಿದ್ದ ಹೊಸ ವ್ಯಾಪಾರೋದ್ಯಮಿ ವರ್ಗದ ಪ್ರತಿನಿಧಿಗಳಾಗಿದ್ದರು. ಆದ್ದರಿಂದಲೇ, ಮೈಸೂರು ಸುಲ್ತಾನರು ಬ್ರಿಟಿಷ್ ಆಕ್ರಮಣವನ್ನು ರಾಜಕೀಯವಾಗಿ ಮಾತ್ರವಲ್ಲದೇ ಆರ್ಥಿಕವಾಗಿಯೂ ಹಿಮ್ಮೆಟ್ಟಿಸಲು ಪ್ರಯತ್ನಿಸಿದರು. ವ್ಯಾಪಾರಿ ಬಂಡವಾಳಿಗರಾಗಿ ಭಾರತ ಪ್ರವೇಶಿಸಿದ ಬ್ರಿಟಿಷರು ಕರ್ನಾಟಕದಲ್ಲೂ ಒಟ್ಟಾರೆ ವ್ಯಾಪಾರಿ ಆರ್ಥಿಕತೆಯನ್ನು, ನಿಯಂತ್ರಿಸುವ ಉದ್ದೇಶವನ್ನು ಹೊಂದಿದ್ದರು. ಆದರೆ ಮೈಸೂರು ಸಂಸ್ಥಾನದ ಬೃಹತ್ ಮಾರುಕಟ್ಟೆಯನ್ನು ವಶಪಡಿಸಿಕೊಳ್ಳುವ ಬ್ರಿಟಿಷ್ ವಸಾಹತುಶಾಹಿ ಸಂಚುಗಳನ್ನು ವಿರೋಧಿಸುತ್ತಲೇ ಮೈಸೂರು ಸುಲ್ತಾನರು ಸ್ಥಳೀಯ ಮಾರುಕಟ್ಟೆ ಹಾಗೂ ವಾಣಿಜ್ಯೋದ್ಯಮವನ್ನು ಬೆಳೆಸಿದರು. ಬ್ರಿಟಿಷರ ಈ ಆರ್ಥಿಕ ಆಕ್ರಮಣದ ವಿರುದ್ಧ ಮೈಸೂರು ಸುಲ್ತಾನರು ಬ್ರಿಟಿಷ್ ವಾಣಿಜ್ಯ ಬಹಿಷ್ಕಾರ ಹಾಗೂ ಗೃಹ ಮಾರುಕಟ್ಟೆಯ ರಕ್ಷಣೆ ಎಂಬ ಸ್ವದೇಶಿ ವಿಧಾನಗಳನ್ನು ಬಳಸಿದರು. ಸಂಸ್ಥಾನದೊಳಗಡೆ ವ್ಯಾಪಾರ ಮತ್ತು ವಾಣಿಜ್ಯವು ವಿಸ್ತೃತಗೊಳ್ಳಲು ಎಲ್ಲಾ ಉತ್ತೇಜನಗಳನ್ನು ನೀಡಿದರು.

ನಗರೀಕರಣ ಪ್ರಕ್ರಿಯೆಯಲ್ಲಿ ಬಹು ಮುಖ್ಯವಾಗಿ ಕಂಡುಬರುವ ಅಂಶ ನಗರವಾಸಿಗಳ ಬದುಕು. ನಗರ ಸಮುದಾಯಗಳು ತಮ್ಮ ವಿವಿಧ ರೀತಿಯ ಕೆಲಸ ಕಾರ್ಯಗಳ ಮೂಲಕ ನಗರ ಕೇಂದ್ರಗಳ ವಿಸ್ತರಣೆಗೆ ಕಾರಣವಾದವು. ನಗರ ಅರ್ಥ ವ್ಯವಸ್ಥೆಯ ಕುರಿತು ಅಧ್ಯಯನ ನಡೆಸುವಾಗ ಈ ಸಮುದಾಯಗಳು ಮತ್ತು ಅವುಗಳ ದುಡಿಮೆ ಪ್ರಮುಖ ವಿಚಾರವಾಗಿ ಕಂಡುಬರುತ್ತದೆ. ನಗರ ವ್ಯವಸ್ಥೆಯ ರೂಪುಗೊಳ್ಳುವಿಕೆಯಲ್ಲಿ ನಗರ ಸಮುದಾಯಗಳು ಮತ್ತು ಅವುಗಳ ವ್ಯಾಪಾರ ಚಟುವಟಿಕೆಗಳು ನೇರವಾಗಿ ಭಾಗಿಯಾಗಿರುವವು. ನಗರ ಅರ್ಥ ವ್ಯವಸ್ಥೆಯು ಕೃಷಿ ಆರ್ಥಿಕತೆಗೆ ಪೂರಕವಾಗಿ ಕಾಣಿಸಿಕೊಂಡಿತು.

[illegible]

೪.೧. ಕೃಷಿ ವ್ಯವಸ್ಥೆ

ಬೆಂಗಳೂರಿನ ಅರ್ಥ ವ್ಯವಸ್ಥೆಯು ಕೃಷಿಯನ್ನು ಅವಲಂಬಿಸಿರುವುದರಿಂದ ಟಿಪ್ಪುವಿನ ಮುಖ್ಯ ಉದ್ದೇಶವೂ ಕೃಷಿ ಉತ್ಪನ್ನಗಳ ಅಭಿವೃದ್ಧಿಯಾಗಿತ್ತು. ಅನಾದಿ ಕಾಲದಿಂದಲೂ ರಾಜ್ಯದ ಸಾಂಪ್ರದಾಯಿಕವೂ, ಅತೀ ಮುಖ್ಯವೂ ಆದ ವರಮಾನ ಮೂಲ ಭೂ ಕಂದಾಯ. ಟಿಪ್ಪು ಜಾರಿಗೆ ತಂದ ಮುಖ್ಯ ಬದಲಾವಣೆಯೆಂದರೆ ಸರಕಾರಕ್ಕೂ ರೈತರಿಗೂ ಸಂಬಂಧವಿರುವಂತೆ ಮಾಡಿದ್ದು, ರಾಜ್ಯಾದಯದ ಬಹು ಭಾಗವನ್ನು ನುಂಗಿಬಿಡುತ್ತಿದ್ದ ಮಧ್ಯವರ್ತಿಗಳ ಹಾವಳಿಯನ್ನು ತಡೆದದ್ದು. ಪರಂಪರೆಯಿಂದಲೂ ಅನೇಕ ಜಮೀನುದಾರರು ಮತ್ತು ಪಾಳೆಯಗಾರರು ಮೈಸೂರಿನ ಭೂ ಪ್ರದೇಶಗಳ ಮೇಲೆ ನಿಯಂತ್ರಣ ವಿಟ್ಟುಕೊಂಡು ನೇರವಾಗಿ ತಮ್ಮ ಅಧಿಕಾರವನ್ನು ಚಲಾಯಿಸುತ್ತಿದ್ದರು. ಪಾಳೆಯಗಾರರಿಗೂ ಮೈಸೂರಿನ ಸುಲ್ತಾನರಿಗೂ ಇರಬೇಕಾದ ಸಂಬಂಧಗಳ ಕುರಿತು ಯಾವುದೇ ಕಾನೂನು ಕಟ್ಟಳೆಗಳಿರಲಿಲ್ಲ. ಪಾಳೆಯಗಾರರು ಒಂದು ಸಾಮಾನ್ಯ ಮೊತ್ತವನ್ನು ರಾಜ್ಯದ ಬೊಕ್ಕಸಕ್ಕೆ ಕಾಣಿಕೆಯಾಗಿ ಸಲ್ಲಿಸುತ್ತಿದ್ದರು. ಆದರೆ ರೈತರಿಂದ ಅಪಾರ ಮೊತ್ತದ ಹಣವನ್ನು ವಸೂಲಿ ಮಾಡುತ್ತಿದ್ದರು. ಅಗತ್ಯ ಬಂದಾಗ ಅವರು ಕೇಂದ್ರಕ್ಕೆ ಸೈನಿಕರಾಗಿಯೂ ಸೇವೆ ಸಲ್ಲಿಸಬೇಕಾಗಿದ್ದಿತು. ಇದನ್ನು ನೆಪವಾಗಿಟ್ಟುಕೊಂಡು ರೈತರಿಂದ ವಸೂಲು ಮಾಡಿದ ಹಣದ ಬಹುಭಾಗವನ್ನು ತಾವೇ ಉಳಿಸಿಕೊಳ್ಳುತ್ತಿದ್ದರು.

ಅಲ್ಲದೆ ತಮಗೆ ಸೇರಿದ ಪ್ರದೇಶಗಳಲ್ಲಿ ಕಾನೂನು ಸುವ್ಯವಸ್ಥೆಯನ್ನು ಪಾಲಿಸುವುದೂ ಇತರ ಪೌರ ಕರ್ತವ್ಯಗಳನ್ನು ನಿರ್ವಹಿಸುವುದೂ ಕೂಡ ಅವರ ಜವಾಬ್ದಾರಿಯಾಗಿದ್ದುದರಿಂದ ರಾಜ್ಯದ ಕೋಶಕ್ಕೆ ಅವರು ಅತ್ಯಲ್ಪ ಮೊತ್ತವನ್ನು ಸಲ್ಲಿಸುತ್ತಿದ್ದರು. ಒಟ್ಟಿನಲ್ಲಿ ಹೇಳುವುದಾದರೆ ಈ ಪಾಳೆಯಗಾರರು ರಾಜ್ಯದೊಳಗಿನ ರಾಜ್ಯವಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಅನೇಕ ಸಂದರ್ಭದಲ್ಲಿ ಅವರು ದುರಾಶಾಪೀಡಿತರಾಗಿ ದಂಗೆಯೇಳುತ್ತಿದ್ದರು. ಉದ್ದಟರಾಗಿ ರಾಜನ ಪ್ರಭುತ್ವವನ್ನೇ ಪ್ರತಿಭಟಿಸಿ ತಾವು ಸ್ವತಂತ್ರರೆಂದು ಸಾರುತ್ತಿದ್ದರು. ಪಾಳೆಯಗಾರರ ನಡುವೆಯೇ ಪದೇ ಪದೇ ಅಂತಃ ಕಲಹಗಳು ಸಂಭವಿಸಿ ಕಾನೂನು ಮತ್ತು ಸುವ್ಯವಸ್ಥೆ ಮುರಿದು ಬೀಳಲು ಕಾರಣವಾಗುತ್ತಿದ್ದವು. ಈ ಅಪಾಯಕಾರಿ ಪ್ರವೃತ್ತಿಯನ್ನು ಅಡಗಿಸಲು ಬಲಿಷ್ಠ ಅರಸನಾದ ಹೈದರ್ ಪ್ರಯತ್ನಿಸಿದನು. ಆದರೆ ಅವರನ್ನು ತನ್ನ ಅಂಕೆಗೆ ತೆಗೆದುಕೊಂಡಾದ ಮೇಲೆ ಅವರಲ್ಲಿ ಹಲವರನ್ನು ಮತ್ತೆ ಅದೇ ಪದವಿಯಲ್ಲಿ ಇರಿಸಿ ಅವರು ವಾರ್ಷಿಕವಾಗಿ ಕಪ್ಪಕಾಣಿಕೆ ಸಲ್ಲಿಸುವಂತೆ ಮಾಡುತ್ತಿದ್ದನು. ಯಾವುದೇ ಅಮೂಲಾಗ್ರ ಬದಲಾವಣೆಯನ್ನು ಜಾರಿಗೆ ತರಲು ಅವನು ಪ್ರಯತ್ನಿಸಿರಲಿಲ್ಲ. ಆಗಲೇ ಇದ್ದ ವ್ಯವಸ್ಥೆಯನ್ನು ಅನುಸರಿಸಿ, ನಿಯಮ ನಿಬಂಧನೆಗಳಲ್ಲಿ ಕನಿಷ್ಠ ಬದಲಾವಣೆಗಳನ್ನು ಮಾಡಿದನು.ಟಿಪ್ಪುವಿಗೆ ಈ ನಿಲುವು ಒಪ್ಪಿಗೆಯಾಗಲಿಲ್ಲ. ಅವನು ಮೂಲಭೂತವಾದ ಬದಲಾವಣೆಯನ್ನು ಮಾಡಿದನು. ಇಡೀ ಊಳಿಗಮಾನ್ಯ ವ್ಯವಸ್ಥೆಯ ಯಂತ್ರವನ್ನು ವಿವರವಾಗಿ ಪರೀಕ್ಷಿಸಿದನು. ತೆರಿಗೆಯನ್ನು ವಸೂಲು ಮಾಡುವ ಹಕ್ಕನ್ನು ಮತ್ತು ಕಾನೂನು ಸುವ್ಯವಸ್ಥೆಯನ್ನು ಕಾಪಾಡುವ ಹೊಣೆಗಾರಿಕೆಯನ್ನು ಪೌರ ಅಧಿಕಾರ ಚಲಾಯಿಸುವ ಹಕ್ಕನ್ನೂ ಪಾಳೆಯಗಾರರಿಂದ ಕಸಿದುಕೊಂಡು. ರಾಜ್ಯಾದ್ಯಂತ ನೂತನ ವ್ಯವಸ್ಥೆಯನ್ನು ಜಾರಿಗೆ ತಂದನು. ಇದರ ಪ್ರಕಾರ ಪಾಳೆಯಗಾರರಿಗೆ ಭೂ ಕಂದಾಯ ವಸೂಲಿ ಮಾಡುವ ಅಧಿಕಾರ ತಪ್ಪಿತು. ಅನೇಕ ಕಡೆ ಸರಕಾರವು ನೇರವಾಗಿ ರೈತರಿಂದ ಕಂದಾಯವನ್ನು ಸಂಗ್ರಹಿಸುವ

ವಿಧಾನ ಅಸ್ತಿತ್ವಕ್ಕೆ ಬಂದಿತು. ಕೆಲವು ಸಂದರ್ಭಗಳ ಮಟ್ಟಿಗೆ ಈ ಕಾರ್ಯವನ್ನು ಕೆಲವು ವ್ಯಕ್ತಿಗಳಿಗೆ ವಹಿಸಿತು. ಸರಕಾರದ ಅಧಿಕಾರಿಗಳೇ ವಿಶೇಷವಾಗಿ ಅಂತಹ ಕೆಲವಾರು ವ್ಯಕ್ತಿಗಳನ್ನು ಆರಿಸಿದ್ದರು.

ಇಡೀ ರಾಜ್ಯವನ್ನು ತಲಾ ೫೦೦೦ ಪಗೋಡ ವರಮಾನಗಳನ್ನು ಕೊಡುವ ಸಣ್ಣ ಘಟಕಗಳನ್ನಾಗಿ ವಿಂಗಡಿಸಲಾಗಿತ್ತು. ಕಂದಾಯಾಡಳಿತ ದೃಷ್ಟಿಯಿಂದ ಅಂತಹ ಘಟಕಗಳನ್ನು ತುಕಡಿ ಎಂದು ಕರೆಯಲಾಗುತ್ತಿತ್ತು. ಪ್ರತಿಯೊಂದು ತುಕಡಿಯೂ ಒಬ್ಬ ಅಮಲದಾರನ ಕೈಕೆಳಗಿತ್ತು. ಒಬ್ಬ ಶಿರಸ್ತೆದಾರ, ಮೂವರು ಗುಮಾಸ್ತರು, ಒಬ್ಬ ತರ್ಫ್‌ದಾರ, ಒಬ್ಬ ಸೆರಾಫ, ಒಬ್ಬ ಮುನಶಿ, ಒಬ್ಬ ಗೊಲ್ಲ, ಮತ್ತು ಆರು ಜನ ಸಹಾಯಕರು ಅಥವಾ ಸೇವಕರು ಪ್ರತಿ ತುಕಡಿಯಲ್ಲೂ ಇರುತ್ತಿದ್ದರು. ಇಪ್ಪತ್ತು ಅಥವಾ ಮೂವತ್ತು ತುಕಡಿಗಳಿಗೆ ಒಂದು ಅಸೆಫ್ ಕಚೇರಿಯನ್ನು ಸೂಕ್ತ ಸಿಬ್ಬಂದಿಯೊಂದಿಗೆ ಸ್ಥಾಪಿಸಲಾಯಿತು. ಆಧುನಿಕ ಪರಿಭಾಷೆಯಲ್ಲಿ ಇದು ಒಂದು ಜಿಲ್ಲೆಯಿದ್ದ ಹಾಗೆ. ಇವೆಲ್ಲದರ ಮೇಲೆ ಪ್ರದಾನ ಆಸೆಫ್ ಇರುತ್ತಿದ್ದನು ಇಡೀ ಕಂದಾಯ ಇಲಾಖೆಯನ್ನು ನಿಯಂತ್ರಿಸುತ್ತಿದ್ದವನು ಇವನೇ.[೨] ಫ್ರಾನಿಸ್ಸ್ ಬುಕಾನನ್ನರ ವರದಿಯಲ್ಲಿ ಬೆಂಗಳೂರಿನ ಕೃಷಿ ವ್ಯವಸ್ಥೆಗೆ ಸಂಬಂಧಪಟ್ಟಂತೆ ಹಲವು ವಿಚಾರಗಳು ತಿಳಿದು ಬರುತ್ತವೆ. ಆ ವಿಚಾರಗಳನ್ನೂ ಸ್ಥೂಲವಾಗಿ ಹೀಗೆ ಅವಲೋಕಿಸಬಹುದು.

ಬೆಂಗಳೂರು ಪ್ರಾಂತದಲ್ಲಿ ಬೆಳೆಯನ್ನು ಹಂಚುವ ರೀತಿ ಉಳಿದ ಪ್ರಾಂತ್ಯಗಳಲ್ಲಿದ್ದುದಕ್ಕಿಂತ ಬೇರೆ ರೀತಿಯಾಗಿತ್ತು. ಸರಾಸರಿ ಇಪ್ಪತ್ತು ಖಂಡುಗ ಭತ್ತ ಬೆಳೆದರೆ ಅದರಲ್ಲೂ ಅರ್ಧಭಾಗ ರೈತನಿಗೂ ಉಳಿದರ್ಧ ಸರ್ಕಾರಕ್ಕೂ ಸೇರುತ್ತಿತ್ತು. ಅಲ್ಲದೆ ಬೆಳೆದ ಬೆಳೆಯಲ್ಲಿ ದಾನಕ್ಕೆ ಈ ಕೆಳಗೆ ನಮೂದಿಸಿರುವ ಪ್ರಕಾರ ಹಂಚಿಕೆಯಾಗುತ್ತಿತ್ತು.

೧.	ದೇವಾಲಯದ ಅರ್ಚಕರಿಗೆ	೫ ಸೇರು
೨.	ಬ್ರಾಹ್ಮಣರು, ಜಂಗಮರು ಇತ್ಯಾದಿ	೫ ಸೇರು
೩.	ಪಂಚಾಂಗ ಹೇಳುವ ಜೋಯಿಸರಿಗೆ	೧ಸೇರು
೪.	ಊರಿನ ಬಡ ಬ್ರಾಹ್ಮಣರಿಗೆ	೧ ಸೇರು
೫.	ಕ್ಷೌರಿಕನಿಗೆ	೨ ಸೇರು
೬.	ಕುಂಬಾರನಿಗೆ	೨ ಸೇರು
೭.	ಬಡಗಿ ಮತ್ತು ಕಮ್ಮಾರರಿಗೆ ತಲಾ	೨ ಸೇರು
೮.	ಅಗಸನಿಗೆ	೨ ಸೇರು
೯.	ಅಳತೆಗಾರನಿಗೆ	೪ ಸೇರು
೧೦.	ಕಾವಲುಗಾರ ಅಥವಾ ತೆರುಗಾರ	೭ ಸೇರು
೧೧.	ಗ್ರಾಮದ ಗೌಡನಿಗೆ	೮ ಸೇರು
೧೨.	ಗ್ರಾಮದ ಶ್ಯಾನುಭೋಗರಿಗೆ	೧೦ ಸೇರು

[illegible]

೧೩. ತೋಟಿ ೧೦ ಸೇರು

೧೪. ತಳವಾರ ೧೦ ಸೇರು

ಅಳತೆಯೆಲ್ಲಾ ಮುಗಿದ ಮೇಲೆ ಧಾನ್ಯವನ್ನು ಮೂಟೆಗಳಿಗೆ ತುಂಬಿದ ಬಳಿಕ ನೆಲದಲ್ಲಿ ಉಳಿದಿದ್ದುದನ್ನೆಲ್ಲಾ ನೀರುಗಂಟಿಗೆ ಕೊಡಲಾಗುತ್ತಿತ್ತು. ಇದು ಸಾಮಾನ್ಯವಾಗಿ ಇಪ್ಪತ್ತು ಸೇರಿನಷ್ಟು ಇರುತ್ತಿತ್ತು. ಈ ಪದ್ಧತಿ ಹೈದರನ ಕಾಲದಲ್ಲಿ ಸ್ವಲ್ಪ ಬದಲಾಗಿದ್ದು, ಆಗ ಜಮೀನುದಾರನಿಗೆ ಉತ್ಪತ್ತಿಯಲ್ಲಿ ಶೇ. ಹತ್ತರಷ್ಟು ಕೊಡಬೇಕಾಗಿತ್ತು.

ಖುಷ್ಕಿ ಬೆಳೆಯಾದರೆ (ಉದಾ-ರಾಗಿ) ರೈತನು ಈ ಕೆಳಕಂಡಂತೆ ಹಂಚಬೇಕಾಗಿತ್ತು.

೧. ಕ್ಷೌರಿನಿಗೆ ೩೦ ಸೇರು

೨. ಕುಂಬಾರನಿರಿಗೆ ೩೦ ಸೇರು

೩. ಕಮ್ಮಾರನಿಗೆ ೨೦ ಸೇರು

ಕಮ್ಮಾರನು ನೇಗಿಲಿನ ಗುಳಗಳನ್ನು, ಬಡಗಿಯು ನೇಗಿಲನ್ನು ರೈತರಿಗೆ ಮಾಡಿ ಕೊಡಬೇಕಾಗಿತ್ತು.

ಹೆಚ್ಚು ಬೆಳೆ ಬೆಳೆಯುವ ರೈತರು ಈ ಕೆಳಗೆ ಕಂಡಂತೆ ಹಂಚಬೇಕಾಗಿತ್ತು

೧. ದೇವಾಲಯಗಳಿಗೆ ೧೦ ಸೇರು

೨. ಸನ್ಯಾಸಿ ಅಥವಾ ಯೋಗಿಗೆ ೨೦ ಸೇರು

೩. ಗ್ರಾಮದ ಬ್ರಾಹ್ಮಣನಿಗೆ ೧೦ ಸೇರು

೪. ಜೋಯಿಸರಿಗೆ ೧೦ ಸೇರು

೫. ಶ್ಯಾನುಭೋಗರಿಗೆ ೨೦ ಸೇರು

೬. ಕಾವಲುಗಾರನಿಗೆ ೧೦ ಸೇರು

ಉಳಿದ ಧಾನ್ಯಗಳಿಂದ (ತೊಗರಿ, ಅವರೆ ಇತ್ಯಾದಿ ಬೆಳೆಗಳಾದರೆ) ಮೇಲ್ಕಂಡ ಅಳತೆಗಳ ಅರ್ಧದಷ್ಟು ಕೊಡಬೇಕಾಗಿತ್ತು.

ಆಗಿನ ಕಾಲಕ್ಕೆ ಈ ಪ್ರದೇಶ ಬೆಂಗಳೂರು ಮತ್ತು ಬೆಂಗಳೂರು ಪ್ರಾಂತ ಎಂದು ವಿಭಾಗ ಹೊಂದಿತ್ತು. ಎರಡೂ ಪ್ರಾಂತಗಳಿಗೂ ತೂಕ ಅಳತೆಗಳ ಲೆಕ್ಕಾಚಾರದಲ್ಲಿ ಬಹಳ ವ್ಯತ್ಯಾಸವಿತ್ತು. ರೈತರು ಸ್ವಂತ ಸಾಗುವಳಿ ಮಾಡುತ್ತಿದ್ದರು. ಅಪರೂಪಕ್ಕೆ ಕೂಲಿ ಜನರಿಂದ ವ್ಯವಸಾಯ ಮಾಡುತ್ತಿದ್ದುದೂ ಉಂಟು.[೩]

ಟಿಪ್ಪುವಿನ ಆಜ್ಞೆಯೊಂದರಲ್ಲಿ ಮಳೆ ಬೆಳೆ ಚೆನ್ನಾಗಿ ಆಗಿಲ್ಲದ ಕಾಲದಲ್ಲಿ ಕಂದಾಯ ವಸೂಲಿ ಮಾಡಬಾರದೆಂದು ಆಜ್ಞೆ ಮಾಡಿರುವುದು ಕಂಡುಬರುತ್ತದೆ. ಇಂಥ ದೃಷ್ಟಿಕೋನವನ್ನಿಟ್ಟುಕೊಂಡು ಹೊರಡಿಸಿದ ಒಂದು ಆಜ್ಞೆಯು ಅವನು ರೈತರ ಕ್ಷೇಮದ ಬಗ್ಗೆ ತಳೆದಿರುವ ನೀತಿಯನ್ನು ತಿಳಿಸುತ್ತದೆ. ಅದೇನೆಂದರೆ ರಾಜ್ಯದ ಖಜಾನೆಗೆ ಭೂ ಕಂದಾಯವೇ ಮೂಲ ಸಂಪತ್ತು ಆಗಿರುವುದರಿಂದ ರೈತರಿಂದ ನಿರ್ದಿಷ್ಟ ಸಮಯಕ್ಕೆ ಸರಿಯಾಗಿ ವಸೂಲಿ ಮಾಡುವುದು ಮುಖ್ಯ. ಆದರೆ ಅವರು ಬಿಕ್ಕಟ್ಟಿನಲ್ಲಿರುವಾಗ ವಸೂಲಿ ಮಾಡಿದರೆ ರಾಜ್ಯದಲ್ಲಿ ಸರಕಾರದ

ನಿಯಮಗಳನ್ನು ಪಾಲಿಸುವ ರೈತರು ತಮ್ಮ ಜಾನುವಾರುಗಳನ್ನು ಮಾರಾಟ ಮಾಡಿ ಕಂದಾಯವನ್ನು ಸಲ್ಲಿಸುವ ಪರಿಸ್ಥಿತಿ ಉದ್ಭವವಾಗುತ್ತದೆ. ಹಾಗಾದಾಗ ರಾಜ್ಯ ಆರ್ಥಿಕ ಮುಗ್ಗಟ್ಟು ಎದುರಿಸಬೇಕಾಗುತ್ತದೆ. ಅಂಥ ಅಕಾಲ ವಸೂಲಿಯನ್ನು ಟಿಪ್ಪೂ ನಿಲ್ಲಿಸಿರುವುದಲ್ಲದೆ, ಆದಾಯವಿಲ್ಲದ ರೈತ ವರ್ಗಕ್ಕೆ ಜಾನುವಾರು ಮತ್ತು ಧಾನ್ಯಗಳನ್ನು ಸಾಲವಾಗಿ (ತಕ್ಕಾವಿಸಾಲ) ನೀಡಿ ಅವರನ್ನು ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಪ್ರೋತ್ಸಾಹಿಸಿದನು.

ಹಳೆಯ ಕಾಲುವೆಗಳನ್ನು ಆಣೆಕಟ್ಟುಗಳನ್ನು ದುರಸ್ತಿಮಾಡಿದುದಲ್ಲದೆ, ಕೆಲವು ಹೊಸದನ್ನು ಕಟ್ಟಿಸಿದನು. ಹಾಗೆಯೇ ನದಿಗಳ ನೀರನ್ನು ಸಂಗ್ರಹಿಸಲು ಮಾಡಿರುವ ಹಳೆ ಆಣೆಕಟ್ಟುಗಳನ್ನು ದುರಸ್ತಿ ಮಾಡಿಸಿದನು. ಹೊಸದವುಗಳನ್ನು ಕಟ್ಟಿಸಿದನು. ಗ್ರಾಮದ ಮುಖ್ಯಸ್ಥರಾದ ಪಟೇಲರ, ಶ್ಯಾನುಭೋಗರು ರೈತರಿಗೆ ಕಿರುಕುಳ ಕೊಡುವುದನ್ನು ತಡೆಗಟ್ಟಿದನು ಮತ್ತು ಅಂಥವರನ್ನು ಶಿಕ್ಷೆಗೆ ಗುರಿಪಡಿಸಿದನು. ಈ ಎಲ್ಲಾ ರೀತಿ ರಿವಾಜುಗಳು ಹೊಸತೇನು ಆಗಿರಲಿಲ್ಲ. ಬದಲಾಗಿ ಪೂರ್ವಕಾಲದಿಂದಲೂ ಚಾಲನೆಯಲ್ಲಿ ಇದ್ದವುಗಳಾಗಿದ್ದು ಟಿಪ್ಪೂ ಯಥಾವತ್ತಾಗಿ ಮುಂದುವರೆಸಿಕೊಂಡು ಹೋದನು.

ಶ್ರೀರಂಗಪಟ್ಟಣದಿಂದ ಒಂಬತ್ತು ಕಿ.ಮೀ. ದೂರದಲ್ಲಿ ಕಾವೇರಿ ನದಿಗೆ ಕೃಷ್ಣರಾಜ ಸಾಗರ ಆಣೆಕಟ್ಟನ್ನು ಕಟ್ಟಲಾಗಿದೆ. ಈ ಸ್ಥಳದಲ್ಲಿ ೧೯೧೧ರಲ್ಲಿ ಉತ್ಖನನ ಆರಂಭವಾದಾಗ ಮಣ್ಣಿನಡಿಯಿಂದ ಒಂದು ಶಿಲಾ ಚಪ್ಪಡಿ ದೊರೆತಿದ್ದು ಅದು ೧೭೯೪ರ ಜೂನ್ ೧೨ನೇ ದಿನಾಂಕದಂದು ಬರೆಸಿರುವುದು ತಿಳಿಸುತ್ತದೆ. ಈ ಶಿಲಾ ಶಾಸನವು ಎರಡು ಪ್ರಮುಖ ವಿಷಯಗಳನ್ನು ಬೆಳಕಿಗೆ ತರುತ್ತದೆ. ಇದೇ ಸ್ಥಳದಲ್ಲಿ ಟಿಪ್ಪು ಸುಲ್ತಾನನು ಒಂದು ಹೊಸ ಆಣೆಕಟ್ಟಿಗೆ ಅಡಿಪಾಯ ಹಾಕಿದ್ದನು.

೨. ಈ ನೀರಾವರಿಯನ್ನು ಉಪಯೋಗಿಸಿ ಹೊಸ ಬಯಲು ಪ್ರದೇಶಗಳಲ್ಲಿ ಕೃಷಿಯನ್ನು ಆರಂಭಿಸುವ ರೈತರಿಗೆ ಸರಕಾರ ಕಂದಾಯದಲ್ಲಿ ಅರ್ಧ ಭಾಗವನ್ನು ಮನ್ನಾ ಮಾಡುತ್ತದೆ ಎಂದೂ ಘೋಷಿಸಿರುವ ವಿಷಯವನ್ನು ಈ ಕಲ್ಲಿನ ಬರಹ ತಿಳಿಸುತ್ತದೆ. ಆದರೆ, ಇದಾದ ಒಂದೇ ಒಂದು ವರ್ಷದಲ್ಲಿ ೧೭೯೯ಲ್ಲಿ ಟಿಪ್ಪು ಮರಣವಾಗಿರುವುದರಿಂದ, ನಂತರ ಬಂದ ಬ್ರಿಟಿಷರ ಹೊಸ ಅಧಿಪತ್ಯ ಇದನ್ನು ಮೂಲೆ ಪಾಡು ಮಾಡಿತು. ಹಾಗಾಗಿ ಟಿಪ್ಪು ಕನಸು ನನಸಾಗಲಿಲ್ಲ. ಇಷ್ಟಾಗ್ಯೂ, ಟಿಪ್ಪುವಿನ ದೂರಾಲೋಚನೆಯನ್ನು ಪ್ರಶಂಸಿಸಲೇಬೇಕು. ಏಕೆಂದರೆ ನೂರು ವರ್ಷಗಳ ನಂತರ ಅದೇ ಸ್ಥಳದಲ್ಲಿ ಇಂಜಿನಿಯರ್‌ಗಳು ಹೊಸ ಆಣೆಕಟ್ಟನ್ನು ಕಟ್ಟಲು ಸ್ಥಳವನ್ನು ಗುರುತಿಸಿದರು."

೪.೨. ಕೃಷಿ ವಿಸ್ತರಣೆ

ರಾಜ್ಯದಲ್ಲಿ ಬೀಳು ಬಿದ್ದಿದ ಸಾವಿರಾರು ಎಕರೆ ಭೂಮಿಯು ಟಿಪ್ಪುವಿನ ಆಡಳಿತದಿಂದಾಗಿ ಕೃಷಿ ಭೂಮಿಯಾಗಿ ಪರಿವರ್ತನೆ ಹೊಂದಿತು. ನಿಕಿಲೇಶ್ ಗುಹಾ ಎಂಬುವವರು ತಿಳಿಸಿರುವಂತೆ ''ಟಿಪ್ಪು ತನ್ನ ಸಾಮ್ರಾಜ್ಯದಲ್ಲಿ ಕೃಷಿಯ ವಿಸ್ತರಣೆಯ ಬಗ್ಗೆಯೂ ಹಲವಾರು ಕ್ರಮಗಳನ್ನು ಕೈಗೊಂಡ. ಹಲವು ವರ್ಷಗಳಿಂದ ಬೀಳು ಬಿದ್ದಿದ ಭೂಮಿಯನ್ನು ರೈತರಿಗೆ ಕೂಲಿಯ ಆಧಾರದಲ್ಲಿ ಊಳಲು ನೀಡಲಾಗಿತ್ತು. ಮೊದಲ ವರ್ಷದಲ್ಲಿ ಅದರ ಮೇಲೆ ಯಾವುದೇ ತೆರಿಗೆಯನ್ನು ವಿಧಿಸುತ್ತಿರಲಿಲ್ಲ. ಆದೇ ರೀತಿ ಬೆಟ್ಟ-ಗುಡ್ಡಗಳ ಜಮೀನನ್ನು ರೈತರಿಗೆ ಹಂಚಿ ತೆರಿಗೆ

ರಹಿತವಾಗಿ ಉಳುಮೆಗೆ ಅವಕಾಶ ನೀಡಿ ಉತ್ತೇಜಿಸಲಾಗುತ್ತಿತ್ತು. ಒಂದು ಅಂದಾಜಿನಂತೆ ಹೈದರಾಲಿಯೊಬ್ಬನೇ ಯುದ್ಧದ ನಂತರ ಮದ್ರಾಸಿನ ಪ್ರಾಂತ್ಯಗಳಿಂದ ೬೦,೦೦೦ ಕುಟುಂಬಗಳನ್ನು ಈ ಹೊಸ ವಿಸ್ತರಣಾ ಭೂಮಿಯಲ್ಲಿ ನೆಲೆಗೊಳಿಸಿ ಕೃಷಿ ವಿಸ್ತರಣೆಗೆ ಕಾರಣನಾಗಿದ್ದ.[೫]

ಇದಲ್ಲದೆ ಉದ್ಯಮ ಶೀಲ ಟಿಪ್ಪು ಪ್ರಭುತ್ವಗಳ ಯುದ್ಧದ ನಡುವೆಯೂ ಕೈಗೊಂಡ ಹಲವಾರು ಕ್ರಮಗಳು ಕರ್ನಾಟಕಕ್ಕೆ ಆಧುನಿಕ ಯುಗದ ಲಕ್ಷಣಗಳನ್ನು ನೀಡಿ ಆರ್ಥಿಕತೆಗೆ ಬಂಡವಾಳಶಾಹಿ ಸ್ವರೂಪವನ್ನು ನೀಡಲು ಪ್ರಾರಂಭಿಸಿದವು.

ಟಿಪ್ಪು ಕೃಷಿ ಉತ್ಪನ್ನಗಳ ತಯಾರಿಕೆಗೂ ಹೆಚ್ಚು ಪ್ರೋತ್ಸಾಹ ನೀಡಿದನು. ಟಿಪ್ಪು ರೇಷ್ಮೆ ಕೃಷಿ ಆರಂಭಿಸಿದನು. ಇದು ಒಂದು ಲಾಭದಾಯಕ ಕೈಗಾರಿಕೆಯಾಗಿ ಯಶಸ್ವಿಯಾಯಿತು. ರೇಷ್ಮೆ ಹುಳುವಿಗೆ ಮೇವಿಗಾಗಿ ಬೇಕಾಗಿರುವ ಹಿಪ್ಪೇನೇರಳೆ ಗಿಡಗಳ ಕೃಷಿಯನ್ನು ಆರಂಭಿಸಿ, ಅದನ್ನು ನಿರ್ದಿಷ್ಟವಾದ ಭೂ ಮಾಲಿಕರಿಗೆ ಅಥವಾ ತಯಾರಿಕೆದಾರರುಗಳಿಗೆ ಮೀಸಲು ನೀಡಿದ್ದನು ರೇಷ್ಮೆ ಹುಳುಗಳ ಕೃಷಿಗೆ ಸುಮಾರು ೨೧ ಕಾರ್ಖಾನೆಗಳನ್ನು ಸ್ಥಾಪಿಸಿದನು. ಈ ೨೧ ಕಾರ್ಖಾನೆಗಳಲ್ಲಿ ಒಂದು ಬೆಂಗಳೂರುನಲ್ಲಿತ್ತು. ರೇಷ್ಮೆ ಹುಳುಗಳನ್ನು ಮಾಸಿಕವಾಗಿ ಬೆಳೆಸಿ, ಅದನ್ನು ಮಾರಾಟ ಮಾಡಲಾಗುತ್ತಿತ್ತು. ಇದರಿಂದ ಬಂದ ಲಾಭ ಖಜಾನೆಗೆ ಹೋಗುತ್ತಿತ್ತು.[೬]

ಟಿಪ್ಪು ರೇಷ್ಮೆ ಉತ್ಪಾದನೆ ಮಾಡುವ ವಿಧಿ ವಿಧಾನಗಳನ್ನು ಕಲಿತುಕೊಂಡು ಬರಲು ಇಲ್ಲಿಂದ ಅನೇಕರನ್ನು ಚೀನಾಕ್ಕೆ ಕಳುಹಿಸಿದ್ದನು. ಟಿಪ್ಪುವಿನ ಅಂತ್ಯ ಕಾಲದ ಸಮಯದಲ್ಲಿ ಬೆಂಗಳೂರಿನಲ್ಲಿ ಸು. ೫೦೦೦ ಕೈ ಮಗ್ಗಗಳಿದ್ದವು. ರೇಷ್ಮೆ ತಯಾರಿಕೆಗೆ ಒಂದು ಉಗಿಯ ಕಾರ್ಖಾನೆ ಕೆಂಗೇರಿಯಲ್ಲಿತ್ತು. ಕಾರನ್‌ವಾಲೀಸನ ಸೈನ್ಯಕ್ಕೆ ಆಸರೆ ಸಿಗಬಾರದೆಂದು ಟಿಪ್ಪು ಕೆಂಗೇರಿಯನ್ನು ಹಾಳುಗೆಡವಿದಾಗ ರೇಷ್ಮೆ ಉದ್ದಿಮೆಗೂ ಪೆಟ್ಟು ಬಿದ್ದಿತು.[೭]

೪.೩. ಕೈಗಾರಿಕೆಗಳು

೧೮ನೇ ಶತಮಾನದ ಉತ್ತರಾರ್ಧವು ಬೆಂಗಳೂರಿನ ದಕ್ಷಿಣದಲ್ಲಿ ಪ್ರಮುಖವಾದ ಕೈಗಾರಿಕೆಗಳ ತವರಾಯಿತು. ಹೈದರನು ಅನೇಕ ಫ್ರೆಂಚ್ ಕುಶಲಕರ್ಮಿಗಳನ್ನು ಪಾಂಡಿಚೆರಿಯಿಂದ ಕರೆಸಿ, ಅವರನ್ನು ತನ್ನ ಸೇವೆಯಲ್ಲಿರಿಸಿಕೊಂಡು, ಕಬ್ಬಿಣ ಮತ್ತು ಕಂಚಿನ ಕೋವಿಗಳು, ಕತ್ತಿ ಗುರಾಣಿಗಳು ಮುಂತಾದ ಶಸ್ತ್ರಾಸ್ತ್ರಗಳನ್ನು ತಯಾರಿಸಿಕೊಳ್ಳುತ್ತಿದ್ದ. ಇವುಗಳನ್ನು ತಯಾರಿಸುವ ಮತ್ತು ಶೇಖರಿಸಿರುವ ಶಸ್ತ್ರಾಗಾರ ಪೇಟೆಯ ತಾರಾಮಂಡಲದಲ್ಲಿತ್ತು. ಕೈಗಾರಿಕಾ ಕ್ಷೇತ್ರದಲ್ಲಿ ಟಿಪ್ಪುವಿನ ಹಲವಾರು ಪ್ರಯೋಗಗಳನ್ನು ಮಾಡಿದನು. ಕೃಷಿಯಾಧಾರಿತ ಕೈಗಾರಿಕೆಗಳೂ ಆರಂಭಗೊಂಡವು. ತೋಟವು ಮೂಲವಸ್ತುವನ್ನು ಒದಗಿಸಿದರೆ, ಕೈಗಾರಿಕೆಯು ಅದನ್ನು ಮಾರಾಟದ ವಸ್ತುವಾಗಿ ಸಿದ್ಧಪಡಿಸುತ್ತಿರುತ್ತದೆ. ಈ ಎರಡು ಹಂತಗಳ ನಡುವಣ ಪ್ರಕ್ರಿಯೆಯು ಜನರಿಗೆ ಲಾಭದಾಯಕ ಉದ್ಯೋಗವನ್ನು ಒದಗಿಸುವುದು ಮಾತ್ರವಲ್ಲದೆ ಸರಕಾರದ ಸಂಪತ್ತನ್ನು ಹೆಚ್ಚಿಸುತ್ತದೆ. ವಾಸ್ತವವಾಗಿ ಉತ್ಪಾದಕ ಸಂಪತ್ತಿನ ಎರಡು ನಿಜವಾದ ಮೂಲಗಳೆಂದರೆ ಕೃಷಿ ಭೂಮಿ ಮತ್ತು ಕಾರ್ಖಾನೆ.[೮]

ಗಿರಣಿ ಮತ್ತು ತತ್ಸಂಬಂಧಿ ಕೈಗಾರಿಕೆಗಳು ಬೆಂಗಳೂರಿನ ಬಹುಪಾಲು ಜನರಿಗೆ ಉದ್ಯೋಗವನ್ನು ಕಲ್ಪಿಸಿದ್ದವು. ೧೮೦೦ರಲ್ಲಿ ಐದು ಸಾವಿರಕ್ಕೂ ಹೆಚ್ಚು ಕೈ ಮಗ್ಗಗಳು ನಗರದಲ್ಲಿ ಇದ್ದುವೆಂದರೆ ಬಟ್ಟೆ ತಯಾರಿಕೆ ಎಷ್ಟು

ಮುಖ್ಯ ಕಸುಬಾಗಿತ್ತೆನ್ನುವುದು ಮನದಟ್ಟಾಗುತ್ತದೆ. ದಿನವೊಂದಕ್ಕೆ ೧೮೦೦ ಎತ್ತಿನ ಬಂಡಿಗಳು ಹಿಡಿಸುವಷ್ಟು ಹತ್ತಿ ಬೆಂಗಳೂರಿನ ಮಗ್ಗಗಳಲ್ಲಿ ಬಳಕೆಯಾಗಿತ್ತು. ದಕ್ಷಿಣದ ಆಳುವ ವರ್ಗಗಳ ಬಟ್ಟೆಯ ಬೇಡಿಕೆಗಳನ್ನು ಬೆಂಗಳೂರು ಪೂರೈಸುತ್ತಿತ್ತು. ಪರ್ಷಿಯಾ, ಮಸ್ಕತ್ ಮುಂತಾದ ವಿದೇಶಗಳಿಂದಲೂ ನಗರದಲ್ಲಿ ತಯಾರಾದ ಬಟ್ಟೆಗೆ ಅಪಾರ ಬೇಡಿಕೆಯಿತ್ತು. ವಿವಿಧ ಜಾತಿಯ ಜನ ವಿವಿಧ ರೀತಿಯ ವಸ್ತುಗಳ ನೇಯ್ಗೆಯಲ್ಲಿ ತೊಡಗಿದ್ದು ಒಂದೊಂದು ಜಾತಿಯವರು ಒಂದೊಂದು ರೀತಿಯ ನೇಯ್ಗೆಯಲ್ಲಿ ಪರಿಣತಿ ಪಡೆದಿದ್ದರು. ಹಾಗೂ ಆ ಕಸುಬಿನ ರಹಸ್ಯ ಅವರಿಗೆ ಮಾತ್ರ ತಿಳಿದಿರುತ್ತಿತ್ತು.[೯]

ಬೃಹತ್ ಮಾರುಕಟ್ಟೆಯಿಂದ ಜವಳಿ ಉದ್ಯಮಗಳು ವಿಸ್ತೃತವಾಗಿ ಅಭಿವೃದ್ಧಿಯಾದವು. ಬೆಂಜಮಿನ್ ಹೈನ್ ರವರು ದಾಖಲಿಸಿರುವಂತೆ, ''೧೮ನೇ ಶತಮಾನದ ವೇಳೆಗೆ ಬೆಂಗಳೂರಿನಲ್ಲಿ ೫೦೦೦ ನೇಯ್ಗೆ ಕೇಂದ್ರಗಳಿದ್ದವು. ೧೮೦೩-೧೮೦೪ರ ವೇಳೆಗೆ ಮೈಸೂರು ಸಂಸ್ಥಾನದಲ್ಲಿ ೧೦,೧೮೦ ಹತ್ತಿ ನೇಕಾರರ ಕುಟುಂಬಗಳಿದ್ದವು. ೩೧೮ ರೇಷ್ಮೆ ಉತ್ಪಾದನಾ ಕುಟುಂಬಗಳು ಹಾಗೂ ೧೯೮೨ ಕುಟುಂಬಗಳು ತಾಮ್ರ ಬೆಳ್ಳಿ ಮತ್ತು ಚಿನ್ನ ಚಿನಿವಾರದ ಕೆಲಸಗಳಲ್ಲಿ ತೊಡಗಿದ್ದು ಒಟ್ಟಾರೆ ೮೫೫ ಕಬ್ಬಿಣ ಕುಲುಮೆಗಳಿದ್ದವು. ಇದಲ್ಲದೆ ೪೯೧ ತೈಲ ಉತ್ಪಾದನಾ ಕೇಂದ್ರಗಳಿದ್ದವು. (ಹುತಾತ್ಮ ಟಿಪ್ಪು ಸುಲ್ತಾನ್, ೨೦೦೩: ೩.೨)

ಹೀಗೆ ಕೈಗಾರಿಕೆಯ ದೃಷ್ಟಿಯಿಂದ ಹೆಚ್ಚು ವಿಸ್ತೃತವಾದುದು ಜವಳಿ ವಲಯವಾಗಿದ್ದರೆ. ಕಂಬಳಿ, ಕಬ್ಬಿಣ, ಸಕ್ಕರೆ, ಮತ್ತು ಬೆಲ್ಲ ಹಾಗೂ ಎಣ್ಣೆ ಉತ್ಪಾದನೆಗಳು ನಂತರದ ಸ್ಥಾನಗಳನ್ನು ಪಡೆದುಕೊಂಡಿದ್ದವು. ಈ ಐದು ಬಗೆಯ ಕೈಗಾರಿಕೆಗಳು ಉತ್ಪಾದನೆಯ ಪ್ರಮಾಣದಲ್ಲೂ, ಅದರಲ್ಲಿ ಒಳಗೊಂಡಿದ್ದ ಕಾರ್ಮಿಕರ ಸಂಖ್ಯೆಯಲ್ಲೂ ಆ ಕಾಲದ ಪ್ರಧಾನ ಉದ್ಯಮಗಳಾಗಿದ್ದವು. ಸಾಕಿಯವರು ವಿವರಿಸಿರುವಂತೆ ''ಈ ಉದ್ಯಮಗಳು ಪ್ರಮಾಣದಲ್ಲಾಗಲೀ, ಉತ್ಪನ್ನದ ಗುಣಮಟ್ಟದಲ್ಲಾಗಲೀ ಯಾವ ಯುರೋಪಿಯನ್ ದೇಶಗಳಿಗೂ ಸರಿಸಾಟಿಯಾಗಿದ್ದವು. ಆದ್ದರಿಂದಲೇ ಆ ಕಾಲದ ಯುರೋಪಿಗೆ ಹೋಲಿಸಿದರೆ ಭೌತಿಕ, ಬೌದ್ಧಿಕ ಹಾಗೂ ಐತಿಹಾಸಿಕ ಅಭಿವೃದ್ಧಿಯ ಗತಿಯಲ್ಲಿ ಭಾರತವು ತುಂಬಾ ಹಿಂದೆ ಉಳಿದಿತ್ತೆಂಬ ವಸಾಹತುಶಾಹಿಗಳು ಹಾಗೂ ಅವರ ಗುಲಾಮ ಬುದ್ಧಿಜೀವಿಗಳ ಮಾತುಗಳಲ್ಲಿ ಎಳ್ಳಷ್ಟು ಹುರಿಳಿರಲಿಲ್ಲವೆಂಬುದು ತಿಳಿಯುತ್ತದೆ.''[೧೦]

ಟಿಪ್ಪುವಿನ ಪ್ರಭುತ್ವ ಬಂಡವಾಳ ಹೂಡಿಕೆ ಮಾಡುತ್ತಾ ಉತ್ಪಾದನಾ ಸಾಧನಗಳನ್ನು ಅಭಿವೃದ್ಧಿಪಡಿಸುವ ಪ್ರಗತಿಪರ ಬಂಡವಾಳಶಾಹಿ ಪಾತ್ರವಹಿಸಿತು. ಮೈಸೂರಿನ ಪ್ರಾಂತದ ಕೈಗಾರಿಕಾ ಚಟುವಟಿಕೆಗಳು, ಆರ್ಥಿಕ ಅಭಿವೃದ್ಧಿ, ವ್ಯಾಪಾರ ವಹಿವಾಟು ಮತ್ತು ಸೈನಿಕ ಚಟುವಟಿಕೆಗಳನ್ನು ಗಮನಿಸಿದಾಗ ಟಿಪ್ಪುವಿಗೆ ಐರೋಪ್ಯ ರಾಷ್ಟ್ರಗಳ ಅಭಿವೃದ್ಧಿಗೆ ಆಧುನಿಕ ತಂತ್ರಜ್ಞಾನವು ಒಂದು ಮುಖ್ಯ ವಾಹಿನಿಯಾಗಿತ್ತು ಎಂಬುದರ ಅರಿವಿತ್ತು. ಐರೋಪ್ಯರಾಷ್ಟ್ರಗಳ ಪ್ರಾಬಲ್ಯಕ್ಕೆ ಮುಖ್ಯವಾಗಿ ಆ ದೇಶಗಳಲ್ಲಿ ಉಗಮವಾಗಿರುವ ಹಣಕಾಸು ಮತ್ತು ವಾಣಿಜ್ಯ ಸಂಸ್ಥೆಗಳು, ವ್ಯಾಪಾರಿ ಕಂಪನಿಗಳು ಮತ್ತು ಏಕಸ್ವಾಮಿತ ಸಂಘಟನೆಗಳು ಮತ್ತು ಪ್ರಬುದ್ಧ ಸಾಮಾಜಿಕ ವ್ಯವಸ್ಥೆಗಳು ಕಾರಣವಾಗಿದ್ದವು. ಅತ್ಯಾಧುನಿಕ ನೌಕೆಗಳ ಮತ್ತು ಹಡಗುಗಳ ನಿರ್ಮಾಣದಿಂದಾಗಿ ಜಲ ಸಂಪರ್ಕವನ್ನು ಆ ರಾಷ್ಟ್ರಗಳು ಸುಗಮಗೊಳಿಸಿದವು. ಇದು ಏಷ್ಯಾ, ಆಫ್ರಿಕಾ ಮತ್ತು ಲ್ಯಾಟಿನ್ ಅಮೆರಿಕಾದಂತಹ ದೂರದ

ದೇಶಗಳಿಗಳೊಂದಿಗೆ ವ್ಯಾಪಾರ ಸಂಪರ್ಕ ಬೆಳೆಸಲು ಸಹಕಾರಿಯಾದವು ಮತ್ತು ಸಂಪನ್ಮೂಲಗಳನ್ನು ಒಗ್ಗೂಡಿಸಲು ಸಾಧ್ಯವಾಯಿತು. ಈ ಬೆಳವಣಿಗೆಗೆ ಮುಖ್ಯ ಕಾರಣ ಆ ದೇಶಗಳ ರಾಜ್ಯ ಸಹಾಯ ಮತ್ತು ಪ್ರೋತ್ಸಾಹ ನೀಡಿ ಯೂರೋಪ್ ಮಾದರಿಯ ಆಧುನೀಕರಣಕ್ಕೆ ಚಾಲನೆ ನೀಡಿದನು. ಕೃಷಿ ಉತ್ಪನ್ನಗಳ ಅಭಿವೃದ್ಧಿ, ಸಂಪನ್ಮೂಲಗಳ ಕ್ರೊಢೀಕರಣ, ನೌಕೆ ಮತ್ತು ಹಡಗು ನಿರ್ಮಾಣ, ಸಿದ್ಧ ವಸ್ತುಗಳ ಉತ್ಪಾದನೆಗಳಿಗೆ ಆದ್ಯತೆ ನೀಡಿದನು.[೧೧]

ಟಿಪ್ಪೂ ಸುಲ್ತಾನನು ಅವನ ತಂದೆ ಹೈದರಾಲಿಗಿಂತಲೂ ಒಂದು ಹೆಜ್ಜೆ ಮುಂದೆ ಹೋಗಿ ಆಧುನಿಕ ತಾಂತ್ರಿಕ ಕಾರ್ಯ ವಿಧಾನಗಳನ್ನು ಶಸ್ತ್ರಾಸ್ತ್ರ ತಯಾರಿಕೆಯಲ್ಲಿ ಬಳಸಿಕೊಂಡಿದ್ದನು. ಈತನು ತನ್ನ ರಾಯಭಾರಿಗಳನ್ನು ವಿಶ್ವದ ವಿವಿಧೆಡೆಗಳಿಗೆ ಕಳುಹಿಸಿದರೂ ಆಯಾ ದೇಶಗಳಲ್ಲಿ ಅಭಿವೃದ್ಧಿ ಹೊಂದಿದ್ದ ತಂತ್ರಜ್ಞಾನವನ್ನು ಆಮದು ಮಾಡಿಕೊಳ್ಳುವ ವ್ಯವಸ್ಥೆಯಿತ್ತು. ಉದಾಹರಣೆಗೆ ಫ್ರಾನ್ಸ್ ಸೇನಾ ಸಹಾಯಕ್ಕೆಂದು ಕಳಿಸಿದ್ದ ರಾಯಭಾರಿಗಳು ತಮ್ಮೊಡನೆ ಫ್ರಾನ್ಸಿನ ಉತ್ತಮ ವೈದ್ಯ, ಶಸ್ತ್ರ ಚಿಕಿತ್ಸಕ, ಬಡಗಿ, ಕಮ್ಮಾರ, ಕೈಗಡಿಯಾರ ತಯಾರಿಕೆಯ, ಬಣ್ಣ ತಯಾರಿಕೆ ಹಾಗೂ ತೋಟಗಾರಿಕಾ ತಜ್ಞರನ್ನು ಮೈಸೂರಿಗೆ ಕರೆತಂದನು. ಅದೇ ರೀತಿ ೧೭೯೭ರಲ್ಲಿ ಫ್ರಾನ್ಸಿಗೆ ಕಳುಹಿಸಿದ ೨ನೇ ರಾಯಭಾರದಲ್ಲಿ ತಮ್ಮೊಡನೆ ೧೦ ಮದ್ದುಗುಂಡು ತಜ್ಞರು, ೧೦ ಪಿಂಗಾಣಿ ಸಾಮನು ತಯಾರಕರು, ೧೦ ಗಾಜು ಮತ್ತು ಕನ್ನಡಿ ತಯಾರಕರು ೧೦ ನೀರು ಮೇಲೆತ್ತುವ ಯಂತ್ರ ತಯಾರಕರು ಹಾಗೂ ಇತರರನ್ನು ಕರೆತರುವಂತೆ ಆದೇಶ ನೀಡಿದ್ದನು.

ಟಿಪ್ಪು ಅಂದು ಚಾಲ್ತಿಯಲ್ಲಿದ್ದ ಕೈ ಕೆಲಸದ ಉತ್ಪಾದನಾ ಕ್ರಮಗಳಿಗೆ ಗುಣಾತ್ಮಕ ಬದಲಾವಣೆಗಳನ್ನು ತಂದು ಕೈಗಾರಿಕೀಕರಣಗೊಂಡ ಅಂದಿನ ಯುರೋಪಿನ ಸರಿ ಸಮವಾದ ಆಧುನಿಕ ಯಂತ್ರಾದಾರಿತ ಕಾರ್ಖಾನೆ ಪದ್ಧತಿಯನ್ನು ಅಸ್ಥಿತ್ವಕ್ಕೆ ತಂದನು. ಇದರೊಂದಿಗೆ ಟಿಪ್ಪು ಬ್ರಿಟಿಷ್ ವಸಾಹತುಶಾಹಿಯೊಡನೆ ನಡೆಸಿದ ಯುದ್ಧಗಳೂ ಹಾಗೂ ಬ್ರಿಟಿಷರನ್ನು ಭಾರತದಿಂದಲೇ ಒದ್ದೋಡಿಸಬೇಕೆಂಬ ದೇಶ ಪ್ರೇಮಿ ಆಕಾಂಕ್ಷೆಗಳು ಯುದ್ಧ ಕೈಗಾರಿಕೆಗೆ ಬೃಹತ್ ಚಾಲನೆ ನೀಡಲು ಕಾರಣವಾದವು. ೧೭೮೯ರ ವೇಳೆಗೆ ಟಿಪ್ಪುವಿನ ಬಳಿ ಆರು ಲಕ್ಷ ಬಂದೂಕುಗಳು, ೨೨೦೦ ಫಿರಂಗಿಗಳಿದ್ದವು. ಬೈಂದೂರಿನ ಬಳಿ ಇದ್ದ ಶಸ್ತ್ರಾಸ್ತ್ರ ಕಾರ್ಖಾನೆಯಲ್ಲಿ ವಾರ್ಷಿಕ ೨೦,೦೦೦ ಬಂದೂಕುಗಳು ತಯಾರಿಕೆಯಾಗುತ್ತಿತ್ತು. ದಿನಕ್ಕೆ ೫೫ ಬಂದೂಕುಗಳು ಬೆಂಗಳೂರು ಹಾಗೂ ಶ್ರೀರಂಗಪಟ್ಟಣದಲ್ಲಿ ಸ್ಥಾಪಿಸಲಾಗಿದ್ದ ತಾರಾಮಂಡಲವೆಂಬ ಕೈಗಾರಿಕಾ ಸಮುಚ್ಚಯಗಳಲ್ಲಿ ತಯಾರಾಗುತ್ತಿದ್ದವು.[೧೨]

೪.೪. ತೋಟಗಾರಿಕೆ

ಹೈದರಾಲಿ ಮತ್ತು ಟಿಪ್ಪು ಸುಲ್ತಾನ್ ಇಬ್ಬರು ತೋಟಗಾರಿಕೆಯಲ್ಲಿ ಹೆಚ್ಚಿನ ಒಲವನ್ನು ಹೊಂದಿದ್ದರು. ಬೆಂಗಳೂರನ್ನು ತನ್ನ ವಶಕ್ಕೆ ಪಡೆಯುತ್ತಿದ್ದಂತೆಯೇ ಹೈದರ್ ಕೋಟೆಯ ಪೂರ್ವ ಭಾಗಕ್ಕೆ ಸುಮಾರು ೩೪ ರಿಂದ ೪೦ ಎಕರೆ ಭೂಮಿಯನ್ನು ನಿಗದಿ ಪಡಿಸಿ ಅಲ್ಲಿ ರಾಜ್ಯೋದ್ಯಾನವನ್ನು ನಿರ್ಮಿಸಲು ಪ್ರಾರಂಭಿಸಿದನು. ಈತನಿಗೆ ತೋಟವನ್ನು ಬೆಳೆಸುವುದರಲ್ಲಿ ಮೊಘಲರ ಅಭಿರುಚಿಯಿತ್ತು. ಹೀಗಾಗಿ ಶ್ರೀರಂಗಪಟ್ಟಣ, ಮಳವಳ್ಳಿ ಹಾಗೂ ಬೆಂಗಳೂರಿನಲ್ಲಿ ಉದ್ಯಾವನಗಳನ್ನು ನಿರ್ಮಿಸಿದನು. ಈ ವೇಳೆಗಾಗಲೇ ಮೊಘಲರ ಪ್ರತಿನಿಧಿಯಾಗಿ

ಸಿರಾದಲ್ಲಿದ್ದ ದಿಲ್‌ವಾರ್‌ಖಾನ್ ಎಂಬಾತನು ಅಲ್ಲಿ ನಿರ್ಮಿಸಿದ್ದ ಖಾನ್‌ಬಾಗ್ ಮತ್ತು ಬಿದನೂರಿನಲ್ಲಿ ರಾಣಿಯ ಸುಂದರ ಉದ್ಯಾನಗಳಿದ್ದವು. ಹೈದರ್ ಸಿರಾದ ಉದ್ಯಾನವನದ ಮಾದರಿಯಲ್ಲೇ ಇಲ್ಲಿನ ತೋಟವನ್ನು ನಿರ್ಮಿಸಿದನು. ಅದಕ್ಕಾಗಿ ದೆಹಲಿ, ಮುಲ್ತಾನ್, ಲಾಹೋರ್ ಮತ್ತು ಆರ್ಕಾಟ್‌ಗಳಿಗೆ ತನ್ನವರನ್ನು ಕಳುಹಿಸಿ ಅತ್ಯಂತ ಉತ್ತಮ ಹಾಗೂ ಸುಂದರವಾದ ಸಸ್ಯಗಳನ್ನು ಆಮದು ಮಾಡಿಕೊಂಡನು. ನಂತರದ ಕಾಲದಲ್ಲಿ ಟಿಪ್ಪು ಸುಲ್ತಾನ್ ಉದ್ಯಾನವನ್ನು ಮತ್ತಷ್ಟು ವಿಸ್ತರಿಸಿ ಅಭಿವೃದ್ಧಿ ಪಡಿಸಿದನು. ಕಾಬೂಲ್, ಪರ್ಷಿಯಾ, ಮಾರಿಷಸ್, ಟರ್ಕಿ, ಆಫ್ರಿಕಾ ಮುಂತಾದ ಪ್ರದೇಶಗಳಿಗೆ ರಾಯಭಾರಿಗಳನ್ನು ಕಳುಹಿಸಿ ಅಲ್ಲಿನ ಅಪರೂಪದ ಹಾಗೂ ಸುಂದರ ಸಸ್ಯಗಳನ್ನು ತರಿಸಿ ನೆಡೆಸಿದನು.[೧೩]

ಬೆಂಗಳೂರಿನ ಅರಮನೆಯ ಬಗ್ಗೆ ತಿಳಿಸಿರುವ ಫ್ರಾನ್ಸಿಸ್ ಬುಕಾನನ್ ಲಾಲ್‌ಬಾಗಿನ ಬಗ್ಗೆಯೂ ತಾನು ಕಂಡಿದ್ದನ್ನು ದಾಖಲಿಸಿದ್ದಾನೆ. ಹೈದರನು ತೋಟಕ್ಕೆ ಪಕ್ಕದ ಕೆರೆಯ ನೀರನ್ನು ಬಳಸಿದರೆ ಟಿಪ್ಪೂ ಇದಕ್ಕಾಗಿ ಮೂರು ಬಾವಿಗಳನ್ನು ನಿರ್ಮಿಸಿದನು. ಬುಕಾನನ್ ಈ ತೋಟವನ್ನು ಸಂದರ್ಶಿಸಿದ್ದಾಗಿ ಹೇಳಿದ್ದು, ಅದು ವಿಶಾಲವಾಗಿದೆ ಮತ್ತು ಓಡಾಡಲು ಮಾಡಿದ ದಾರಿಗಳಿಂದ ಪ್ರತ್ಯೇಕವಾಗಿರುವ ತೋಟದ ನಿವೇಶನಗಳನ್ನು ಹೊಂದಿದ್ದು, ಅವುಗಳಲ್ಲಿ ಹಣ್ಣಿನ ಮರಗಳೂ ಚಟ್ಟಿ (ಕುಂಡ) ಹಾಕಿ ಬೆಳೆಸಿದ ಔಷದದ ಗಿಡಗಳು ಇವೆ. ಒಂದೊಂದು ತೋಟದ ನಿವೇಶನಗಳಲ್ಲಿ ಗುಲಾಬಿ ಇದ್ದರೆ ಇನ್ನೊಂದರಲ್ಲಿ ದಾಳಿಂಬೆ ಬೆಳೆದಿದ್ದಾರೆ. ತಾನು ಬಂದಾಗ ಈ ತೋಟ ನೀರಿನ ಕೊರತೆಯಿಂದ ಬಳಲುತ್ತಿದ್ದರೂ ಟಿಪ್ಪೂವಿನ ಕಾಲದಲ್ಲಿ 'ಕಪಿಲಿ'ಯನ್ನು (ಚರ್ಮದ ಚೀಲ ಉಳ್ಳದ್ದು) ಬಳಸಿ ಬಾವಿಯಿಂದ ನೀರು ಹಾಕುತ್ತಿದ್ದರೆಂದು ತಿಳಿಸಿದ್ದು, ಇದು ಯೇತ (ಯಾತಂ) ಕ್ಕಿಂತ ಹೆಚ್ಚು ಉಪಯುಕ್ತ ಸಾಧನವೆಂದು ಹೇಳಿರುವುದು ಕಂಡುಬರುತ್ತದೆ.[೧೪]

ಲಾಲ್‌ಬಾಗ್ ಇದರ ಮೂಲ ಹೆಸರಾಗಿರಲಿಲ್ಲ. ೧೮೫೬ರ ವರೆಗೆ ಇದಕ್ಕೆ ಈ ಹೆಸರಿದ್ದ ಬಗ್ಗೆ ದಾಖಲೆಗಳಿಲ್ಲ. ಮೊದಲು ಇದನ್ನು ''ಮಾವಿನ ತೋಪು ಮತ್ತು ಸೈಪ್ರೆಸ್ ಗಾರ್ಡನ್'' ಎಂದೂ ಕರೆಯುತ್ತಿದ್ದರು. ಶ್ರೀರಂಗಪಟ್ಟಣದಲ್ಲಿದ್ದ ಉದ್ಯಾನವನ್ನು ನೋಡಿದ ಜನ ಇದನ್ನು ಅದೆ ಹೆಸರಿನಿಂದ ಕರೆಯಲಾರಂಭಿಸಿದರು. ಆ ಉದ್ಯಾನವು ಹೈದರಾಲಿ ಕಾಲದಲ್ಲಿ ಮಾವು, ಬಾಳೆ, ದಾಳಿಂಬೆಗಳನ್ನು ಇಲ್ಲಿ ಬೆಳೆಯುತ್ತಿದ್ದರು. ಟಿಪ್ಪು ಕಾಲದಲ್ಲಿ ಸೈಪ್ರೆಸ್, ದ್ರಾಕ್ಷಿ, ಸೀಬೆ, ಸ್ಟ್ರಾಬೆರಿ, ಮೊದಲಾದವುಗಳನ್ನು ಬೆಳೆಯಲಾರಂಭಿಸಿದನು. ಆದರೆ ಇದರೊಳಗೆ ಸಾರ್ವಜನಿಕರಿಗೆ ಪ್ರವೇಶವಿರಲಿಲ್ಲ. ಬೆಂಗಳೂರಿನಲ್ಲಿರುವ ಲಾಲ್‌ಬಾಗ್ ಸಸ್ಯತೋಟವನ್ನು ಅಪರೂಪದ ಸಸ್ಯತಳಿಗಳನ್ನು ಸಂರಕ್ಷಿಸಲೆಂದೇ ಟಿಪ್ಪು ಪ್ರಾರಂಭಿಸಿದ. ಪ್ರಾಕ್ಸಿ ಫರ್ನಾಂಡಿಸ್ ಎಂಬುವವರು ಬರೆದಿರುವಂತೆ ''ಲಾಲ್‌ಬಾಗ್ ಸಸ್ಯ ಉದ್ಯಾನವು ಕೇವಲ ಮನೋಲ್ಲಾಸಕ್ಕಾಗಿ ನಿರ್ಮಿಸಿದ ತೋಟವಾಗಿರಲಿಲ್ಲ. ವಿಶ್ವದ ಬೇರೆ ಬೇರೆ ಕಡೆಗಳಿಂದ ತರಿಸಲಾಗಿದ್ದ ಅಪರೂಪದ ಸಸ್ಯ ತಳಿಗಳನ್ನೆಲ್ಲಾ ಇಲ್ಲಿ ಸಂರಕ್ಷಣೆ ಮಾಡಲಾಗಿತ್ತು. ಇಂಗ್ಲೇಡಿನ ಓಕ್‌ಮರ, ದಕ್ಷಿಣ ಆಫ್ರಿಕಾದ ಪೈನ್ ಮರ, ಮೆಕ್ಸಿಕೋದ ಅವೋಕಾಡೊ, ಮಾವು, ಕಿತ್ತಳೆ, ಹಿಪ್ಪುನೇರಳೆ, ಸೀಬೆಗಿಡಗಳು ಹಾಗೂ ಹತ್ತಿ ಮತ್ತು ನೀಲಿ ಬೆಳೆಯ ಪ್ರಾಯೋಗಿಕ ಕ್ಷೇತ್ರಗಳು ಲಾಲ್‌ಬಾಗ್‌ನಲ್ಲಿತ್ತು.''[೧೫]

೪.೫. ನಗರ ವ್ಯವಸ್ಥೆ

ಹದಿನಾರನೆಯ ಶತಮಾನದ ಪೂರ್ವಾರ್ಧದಲ್ಲಿ ರಚಿಸಿರುವ ಬೆಂಗಳೂರು ನಗರದ ವಿಸ್ತಾರ ಹಾಗೂ ವಿನ್ಯಾಸವನ್ನು ಗುರುತಿಸುವುದು ಕಷ್ಟ ಸಾಧ್ಯವಾಗಿದ್ದು, ಇದಕ್ಕೆ ಕಾರಣ ನಗರದ ಸುತ್ತಲೂ ನಿರ್ಮಿಸಿದ ಕೋಟೆಯು ಸಂಪೂರ್ಣವಾಗಿ ನಾಶವಾಗಿದ್ದು, ಈಗ ಅದರ ಮೇಲೆ ಕಟ್ಟಡ ಅಥವಾ ರಸ್ತೆಗಳನ್ನು ನಿರ್ಮಿಸಲಾಗಿದೆ. ಆದರೆ ಕೋಟೆಯ ಒಂದು ದ್ವಾರ ಮಾತ್ರ ಈಗಿನ ಕೃಷ್ಣರಾಜೇಂದ್ರ ಮಾರುಕಟ್ಟೆಯಲ್ಲಿ ಉಳಿದುಕೊಂಡಿದ್ದು, ಈ ಒಂದು ಚಿಕ್ಕ ಅವಶೇಷದ ಆಧಾರದ ಮೇಲೆ ಬೆಂಗಳೂರು ಕೋಟೆ ಮತ್ತು ನಗರದ ರಚನೆಯ ವಿನ್ಯಾಸವನ್ನು ಗುರುತಿಸಬಹುದು. ಬ್ರಿಟಿಷರು ನಗರವನ್ನು ವಶಪಡಿಸಿಕೊಂಡ ನಂತರ ಬೆಂಗಳೂರು ನಗರ ತನ್ನ ಸುತ್ತಲಿನ ಇತರ ಗ್ರಾಮಗಳ ಪ್ರದೇಶದಲ್ಲಿ ವಿಸ್ತರಿಸಿತು. ಮೈಸೂರು ಸುಲ್ತಾನರ ಬೆಂಗಳೂರು ನಗರ ಮೂಲತಃ ಸೀಮಿತ ಪ್ರದೇಶವನ್ನು ಹೊಂದಿತ್ತು. ನಗರದ ಗಡಿಖೇಯಂತಿದ್ದ, ಕೋಟೆಯು ಸಂಪೂರ್ಣ ನಾಶವಾಗಿದೆ. ಆದರೆ ಕೆಲವು ಬ್ರಿಟಿಷ್ ಅಧಿಕಾರಿಗಳು ಕ್ರಿ.ಶ.೧೭೯೧-೯೨ರಲ್ಲಿ ಅಂದಿನ ಬೆಂಗಳೂರು ನಗರದ ರಚನೆಯ ವಿನ್ಯಾಸ, ವಿಸ್ತಾರಗೊಂಡ ನಗರ ಪ್ರದೇಶ ನಗರದ ಪ್ರಮುಖ ಭಾಗಗಳು, ಕಟ್ಟಡಗಳು ಇತ್ಯಾದಿಗಳನ್ನು ಗುರುತಿಸಿರುವರು. ಅಂದಿನ ಬೆಂಗಳೂರು ನಗರವು ಈಗಿನ ಮಹಾನಗರ ಪಾಲಿಕೆ ವೃತ್ತದ ಹಲಸೂರು ಪೋಲಿಸ್ ಠಾಣೆಯಿಂದ ಗೊಡ್‌ಶೆಡ್ ರಸ್ತೆಯವರೆಗೆ ಹಾಗೂ ಮೈಸೂರು ಬ್ಯಾಂಕ್ ವೃತ್ತದಿಂದ ಕೀಮ್ಸ್ ಆಸ್ಪತ್ರೆವರೆಗಿನ ಪ್ರದೇಶದಲ್ಲಿ ವಿಸ್ತರಿಸಿಕೊಂಡಿತ್ತು ಎಂಬ ಅಂಶವನ್ನು ದೊರೆತ ನಕ್ಷೆಯ ಆಧಾರದ ಮೇಲೆ ಗುರುತಿಸಬಹುದು. ಅರಮನೆ ಆವರಣದ ಉತ್ತರಕ್ಕೆ ನಾಗರಿಕರಾಗಿ ನಿರ್ಮಿಸಿದ ಪೇಟೆ ಎಂದು ಕರೆಯಲ್ಪಡುವ ಆಯತಾಕಾರದ ನಗರವಿದ್ದಿತು. ಈ ನಗರವನ್ನು ಮಣ್ಣಿನ ಕೋಟೆಗೋಡೆ ಮತ್ತು ಕಂದಕಗಳಿಂದ ಭದ್ರಪಡಿಸಲಾಗಿತ್ತು. ಪೇಟೆಯೆಂದು ಕರೆಯುತ್ತಿದ್ದ ಈ ನಗರವನ್ನು ಮುಖ್ಯ ಮತ್ತು ಅಡ್ಡ ರಸ್ತೆಗಳಿಂದ ವಿಭಜಿಸಲಾಗಿತ್ತು. ನಗರದ ರಕ್ಷಣೆಗೆ ನಿರ್ಮಿಸಿದ್ದ ಮಣ್ಣಿನ ಕೋಟೆ ಗೋಡೆಯ ಕಿರು ಎತ್ತರ ಹಾಗೂ ಗಾತ್ರದಲ್ಲಿ ದಪ್ಪವಾಗಿತ್ತೆಂದು ನಕ್ಷೆಯ ಆಧಾರದಿಂದ ಸ್ಪಷ್ಟವಾಗುತ್ತದೆ. ಈ ನಗರಕ್ಕೆ ಪ್ರವೇಶಿಸಲು ಅನೇಕ ದ್ವಾರಗಳಿದ್ದವು. ಆ ದ್ವಾರಗಳನ್ನು ಇಂದಿಗೂ ಗುರುತಿಸಬಹುದು. ಅವುಗಳೆಂದರೆ

ಹಲಸೂರು ದ್ವಾರ (ಪೂರ್ವ)

ಯಲಹಂಕ ದ್ವಾರ (ಉತ್ತರ)

ಕೆಂಗೇರಿ ದ್ವಾರ (ಪಶ್ಚಿಮ) ಈ ಮುಖ್ಯ ದ್ವಾರಗಳಲ್ಲದೆ 'ದಿಡ್ಡಿ' ಎಂದೂ ಕರೆಯಲ್ಪಡುವ ಕೆಲವು ಚಿಕ್ಕದ್ವಾರಗಳಿದ್ದವು. ಅರಮನೆ ಆವರಣದ ದೆಹಲಿ ದ್ವಾರವು ನಗರ ಮತ್ತು ಅರಮನೆ ಆವರಣ ಪ್ರದೇಶಗಳೆರಡಕ್ಕೂ ಪ್ರವೇಶಿಸಲು ಏಕೈಕ ದ್ವಾರವಾಗಿತ್ತು. ಆ ನಗರದ ಕೋಟೆಯ ಸುತ್ತಲೂ ಆಳವಾದ ಕಂದಕವಿತ್ತು. ಕಂದಕಕ್ಕೆ ಪಕ್ಕದ ಕೆರೆಗಳಿಂದ ನೀರಿನ ವ್ಯವಸ್ಥೆಮಾಡಲಾಗಿತ್ತು. ನಗರವು ವಿಶಾಲ ರಸ್ತೆಗಳಿಂದ ಕೂಡಿದ್ದು, ವಿವಿಧ ಸಮುದಾಯದವರಿಗೆ ಪ್ರತ್ಯೇಕ ವಿಭಾಗಗಳು ಇದ್ದವೆಂದು ತಿಳಿದುಬರುತ್ತದೆ.

೫.೬. ವ್ಯಾಪಾರ ವಾಣಿಜ್ಯ

ಕರ್ನಾಟಕವನ್ನಾಳಿದ ಇತರ ದೊರೆಗಳಂತೆ ಮೈಸೂರು ಸುಲ್ತಾನರು ಊಳಿಗಮಾನ್ಯ ಶಕ್ತಿಗಳ ಪ್ರತಿನಿಧಿಗಳಾಗಿರಲಿಲ್ಲ. ಅವರು ಊಳಿಗಮಾನ್ಯತೆಯೊಂದಿಗೆ ಸಂಘರ್ಷಿಸುತ್ತಾ ಉದಯಿಸಿ ಬರುತ್ತಿದ್ದ ಹೊಸ ವ್ಯಾಪಾರೋದ್ಯಮಿ ವರ್ಗದ ಪ್ರತಿನಿಧಿಗಳಾಗಿದ್ದರು. ಆದ್ದರಿಂದಲೇ, ಸುಲ್ತಾನರು ಬ್ರಿಟಿಷ್ ಆಕ್ರಮಣವನ್ನು ರಾಜಕೀಯವಾಗಿ ಮಾತ್ರವಲ್ಲದೆ ಆರ್ಥಿಕವಾಗಿ ಹಿಮ್ಮೆಟ್ಟಿಸಲು ಪ್ರಯತ್ನಿಸಿದರು. ವ್ಯಾಪಾರಿ ಬಂಡವಾಳಿಗರಾಗಿ ಭಾರತ ಪ್ರವೇಶಿಸಿದ ವಸಾಹತುಶಾಹಿಗಳು ಕರ್ನಾಟಕದಲ್ಲೂ ಒಟ್ಟಾರೆ ವ್ಯಾಪಾರಿ ಆರ್ಥಿಕತೆಯನ್ನು, ನಿಯಂತ್ರಿಸುವ ಉದ್ದೇಶವನ್ನು ಹೊಂದಿದ್ದರು. ಆದರೆ ಮೈಸೂರು ಸಂಸ್ಥಾನದ ಬೃಹತ್ ಮಾರುಕಟ್ಟೆಯನ್ನು ವಶಪಡಿಸಿಕೊಳ್ಳುವ ವಸಾಹತುಶಾಹಿ ಸಂಚುಗಳನ್ನು ವಿರೋಧಿಸುತ್ತಲೆ ಹೈದರ್-ಟಿಪ್ಪು ಸ್ಥಳೀಯ ಮಾರುಕಟ್ಟೆ ಹಾಗೂ ವಾಣಿಜ್ಯೋದ್ಯಮವನ್ನು ಬೆಳೆಸಿದರು. ಬ್ರಿಟಿಷರ ಈ ಆರ್ಥಿಕ ಆಕ್ರಮಣದ ವಿರುದ್ಧ ಟಿಪ್ಪು-ಹೈದರ್ ಬ್ರಿಟಿಷ್ ವಾಣಿಜ್ಯ ಬಹಿಷ್ಕಾರ ಹಾಗೂ ಗೃಹ ಮಾರುಕಟ್ಟೆಯ ರಕ್ಷಣೆ ಎಂಬ ಎರಡೂ "ಸ್ವದೇಶಿ" ವಿಧಾನಗಳನ್ನು ಬಳಸಿದರು. ಮತ್ತೊಂದೆಡೆಗೆ ಸಂಸ್ಥಾನದೊಳಗಡೆ ವ್ಯಾಪಾರ ಮತ್ತು ವಾಣಿಜ್ಯವು ವಿಸ್ತೃತಗೊಳ್ಳಲು ಎಲ್ಲಾ ಉತ್ತೇಜನಗಳನ್ನು ನೀಡಿದರು.

ಟಿಪ್ಪುವಿನ ವ್ಯಾಪಾರಿ ಹಡಗುಗಳು ಮಸ್ಕತ್ (ಓಮನ್)ಗೆ ನಿರಂತರವಾಗಿ ಪ್ರಯಾಣಿಸುತ್ತಿದ್ದು, ಅಲ್ಲಿ ವ್ಯಾಪಾರದ ಕೇಂದ್ರಗಳನ್ನು ೧೭೮೫ರ ಹಿಂದೆಯೇ ತೆರೆಯಲಾಗಿತ್ತು. ಇಂಥ ವ್ಯಾಪಾರ ಕೇಂದ್ರಗಳನ್ನು ಕಾನ್‌ಸ್ಟಾಂಟಿನೋಪಲ್‌ನಲ್ಲೂ ತೆರೆಯಲೂ ಒಂದು ನಿಯೋಗವನ್ನು ಟಿಪ್ಪು ಕಳುಹಿಸಿದನು. ನಾಲ್ಕು ಅಧಿಕಾರಿಗಳನ್ನೊಳಗೊಂಡ ಈ ನಿಯೋಗವು ಈ ದೇಶದೊಂದಿಗೆ ಅಂತರಾಷ್ಟ್ರೀಯ ರಾಜತಂತ್ರ ಮತ್ತು ವ್ಯಾಪಾರ ವ್ಯವಹಾರಗಳನ್ನು ಬೆಳೆಸುವ ಪ್ರಯತ್ನವನ್ನು ಮಾಡಿತ್ತು. ಮಾರ್ಚ್ ೨೦, ೧೭೮೬ ರಲ್ಲಿ ಈ ನಿಯೋಗವು ಮೂರು ಹಡಗುಗಳೊಂದಿಗೆ ಪ್ರಯಾಣ ಬೆಳೆಸಿತು. ಪಕರುಲ್ ಮರಕಿಬ್, ಪಾತ್-ಇಶಾಹಿ-ಮೆಯಿಜ್ ನಭಿಭಕ್ಷ್ ಮತ್ತು ಗಲ್ಲಿಯೋಟ್ (ಗುಂಟ್) ಸುರತೀ ಎಂಬ ಹೆಸರಿನ ಹಡಗುಗಳು ತಾದ್ರಿಯಿಂದ ಮಸ್ಕತ್‌ಗೆ ಹೊರಟಿದ್ದವು. ಈ ಹಡಗುಗಳಲ್ಲಿ ಕರಿಮೆಣಸು, ಗಂಧದ ಸಿದ್ಧ ವಸ್ತುಗಳು, ಎಳ್ಳು ಮತ್ತು ಬಟ್ಟೆಗಳನ್ನು ತುಂಬಿಸಿಕೊಂಡು ಮಸ್ಕತ್, ಇರಾನ್ ಮತ್ತು ಬಾಸ್ರ (ಇರಾಕ್) ಬಂದರು ಪಟ್ಟಣಗಳಲ್ಲಿ ಮಾರಾಟ ಮಾಡುವ ಉದ್ದೇಶದೊಂದಿಗೆ ವ್ಯಾಪಾರ ವಹಿವಾಟಿನಿಂದ ಲಾಭಗಳಿಸುವುದರ ಜೊತೆಗೆ ಬಾಸ್ರಾದಲ್ಲಿ ಖಾಯಂ ವ್ಯಾಪಾರಿ ಕೇಂದ್ರವನ್ನು ತೆರೆಯುವ ಗುರಿಯನ್ನು ಹೊಂದಿದ್ದನು. ಇದೇ ರೀತಿ ಆಟೋಮನ್ ಸಾಮ್ರಾಜ್ಯದ ಪ್ರಸಿದ್ಧ ಸ್ಥಳಗಳಲ್ಲಿ ವ್ಯಾಪಾರ ಕೆಂದ್ರಗಳ ಸ್ಥಾಪನೆಗೆ ಟಿಪ್ಪು ಪ್ರಯತ್ನಗಳನ್ನು ನಡೆಸಿದ್ದನು. ಈ ಎಲ್ಲಾ ವ್ಯಾಪಾರ ವಹಿವಾಟುಗಳನ್ನು ಯುರೋಪಿನ ಮಾದರಿಯ ಕಂಪನಿಗಳ ಮತ್ತು ಸಂಸ್ಥೆಗಳ ಸಹಯೋಗದೊಂದಿಗೆ ನಿರ್ವಹಿಸಲಾಗುತ್ತಿತ್ತು. ಟಿಪ್ಪು ಸರಕಾರ ಸಾಮ್ರಾಜ್ಯದ ವ್ಯಾಪಾರ ಚಟುವಟಿಕೆಗಳು ಕೇವಲ ಭಾರತೀಯ ಸಮುದ್ರಕ್ಕೆ ಸೀಮಿತವಾಗಿರದೆ ನೆರೆಯ ದೇಶಗಳೊಂದಿಗೆ ನಿಕಟವಾದ ವಾಣಿಜ್ಯ ಸಂಪರ್ಕಗಳನ್ನು ಬೆಳೆಸಿಕೊಂಡನು. ವಿದೇಶಿ ವರ್ತಕರನ್ನು ತನ್ನ ರಾಜ್ಯಕ್ಕೆ ಆಕರ್ಷಿಸುವುದರ ಅಗತ್ಯವನ್ನು ಅವನು ಅರಿತುಕೊಂಡನು. ಮೈಸೂರಿನ ಬಂದರುಗಳಲ್ಲಿ ಅವರು ವ್ಯಾಪಾರವನ್ನು ಪ್ರಾರಂಭಿಸಲು ಬೇಕಾದಷ್ಟು ಸೌಲಭ್ಯಗಳನ್ನು ಹಾಗೂ ರಿಯಾಯಿತಿಗಳನ್ನು ನೀಡಿದನು.

ಹೀಗೆ ರಫ್ತನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ವಿದೇಶಿ ವರ್ತಕರಿಗೆ ಎಲ್ಲಾ ಬಗೆಯ ಸೌಲಭ್ಯಗಳನ್ನು ರಿಯಾಯಿತಿಗಳನ್ನೂ ಒದಗಿಸುತ್ತಿದ್ದನು. ಅಗತ್ಯವಾಗಿದ್ದ ತೆರಿಗೆಗಳನ್ನು ಅವರು ಕೊಡಬೇಕಾಗಿರಲಿಲ್ಲ. ಅವರಿಗೆ ರಕ್ಷಣೆ ಹಾಗೂ ಭದ್ರತೆಯ ಭರವಸೆ ನೀಡಲಾಗಿತ್ತು. ಸುಲ್ತಾನನು ಇಷ್ಟೆಲ್ಲಾ ಮಾಡುತ್ತಿದ್ದುದಕ್ಕೆ ಎರಡು ಕಾರಣಗಳಿದ್ದವು. ಮೈಸೂರಿನ ವಸ್ತುಗಳಿಗೆ ಒಳ್ಳೆಯ ಬೇಡಿಕೆ ಇರುವ ಅವರ ದೇಶಗಳಲ್ಲಿ ತನ್ನ ಕಡೆಯ ವ್ಯಾಪಾರಿಗಳಿಗೆ ಅದೇ ಸೌಲಭ್ಯ ಸವಲತ್ತುಗಳನ್ನು ಕೊಡಬಹುದು ಎಂಬ ನಿರೀಕ್ಷೆ ಆ ಕಾರಣಗಳಲ್ಲಿ ಒಂದು. ವಸಾಹತುಗಾರರು ಮೈಸೂರು ರಾಜ್ಯದ ಈ ವ್ಯಾಪಾರವನ್ನು ಕಸಿದುಕೊಳ್ಳುವಂತೆ ಮಾಡಬಹುದು ಎನ್ನುವುದು ಎರಡನೆಯದು. ವಿದೇಶವೊಂದರಲ್ಲಿ ವಾಣಿಜ್ಯ ಕೇಂದ್ರವೊಂದನ್ನು ಸ್ಥಾಪಿಸುವುದಕ್ಕೆ ಮೊದಲು ಟಿಪ್ಪು ಅಂತಹ ವಾಣಿಜ್ಯ ಸಂಪರ್ಕಗಳನ್ನು ಬೆಳೆಸಿಕೊಳ್ಳಲು ಸಂಬಂಧಪಟ್ಟ ಅಧಿಕಾರಿಗಳಿಂದ ಅನುಮತಿ ಪಡೆಯುತ್ತಿದ್ದನು. ಅಂತಹ ವಾಣಿಜ್ಯ ಸಂಪರ್ಕಗಳ ವ್ಯಾಪ್ತಿಯನ್ನು ನಿರೂಪಿಸುವ ಒಂದು ಒಪ್ಪಂದವನ್ನು ಸಿದ್ಧಪಡಿಸಲಾಗುತ್ತಿತ್ತು. ಈ ವ್ಯವಹಾರವನ್ನು ನಿರ್ವಹಿಸಲು ವ್ಯಾಪಾರಿ ಪ್ರತಿನಿಧಿಗಳನ್ನು ನೇಮಿಸಲಾಗುತ್ತಿತ್ತು. ದೇಶದ ಹೊರಗೆ ಸ್ಥಾಪಿಸಿದ ವಾಣಿಜ್ಯ ಕೇಂದ್ರಗಳಲ್ಲಿ ಮಸ್ಕತ್‌ನಲ್ಲಿದ್ದವು ಬಹುಮುಖ್ಯವಾಗಿದ್ದವು. ಮಸ್ಕತ್‌ನಲ್ಲಿ ಎರಡು ವ್ಯಾಪಾರ ಕೋಠಿಗಳಿದ್ದುವು. ಅವೆರಡೂ ಐವತ್ತು ಮತ್ತು ಮೂವತ್ತೈದು ಚಷ್ಮಿಗಳ ಮಟ್ಟದವು. ಆ ಮಾರುಕಟ್ಟೆಯಲ್ಲಿ ಮಾರಾಟವಾಗುತ್ತಿದ್ದ ಮುಖ್ಯ ವಸ್ತುಗಳ ಸಂಖ್ಯೆಯನ್ನು ಆ ಪದವು ಸೂಚಿಸುತ್ತದೆ. ಐವತ್ತು "ಚಷ್ಮಿ" ಗಳೆಂದರೆ, ಮೈಸೂರಿನ ಬೇರೆ ಬೇರೆ ಐವತ್ತು ಸರಕುಗಳು ಅಲ್ಲಿ ಮಾರಾಟಕ್ಕಿವೆ ಎಂದು ಅರ್ಥ. ಟಿಪ್ಪು ಮಸ್ಕತ್ತಿನಲ್ಲಿ ಒಬ್ಬ ಖಾಯಂ ವಾಣಿಜ್ಯ ಕಮೀಷನರ್‌ನ್ನು ನೇಮಕ ಮಾಡಿದ್ದನು. ೧೭೮೫ರಲ್ಲಿ ಈ ಹುದ್ದೆಯಲ್ಲಿದ್ದವನು ಮೀರ್‌ಖಾಸಿಮ್. ರಾವ್ ಸೇಠ್ ಎನ್ನುವವನ ಮಗ ಮಯೋಸೇಠ್ ಎಂಬ ಹಿಂದೂ ವರ್ತಕನು ಕಲ್ಲಿಕೋಟೆಯಲ್ಲಿ ಒಂದು ವ್ಯಾಪಾರ ಸಂಸ್ಥೆಯನ್ನು ತೆರೆಯಲು ಅಪೇಕ್ಷೆಪಟ್ಟಾಗ ಟಿಪ್ಪು ಅದಕ್ಕೆ ಅನುಮತಿ ನೀಡಿದನು. ಮೈಸೂರಿನಿಂದ ಮಸ್ಕತ್ತಿಗೆ ರಫ್ತಾಗುತ್ತಿದ್ದ ಸರಕುಗಳಲ್ಲಿ ಮುಖ್ಯವಾದುದು ಅಕ್ಕಿ, ಆದರೆ ಟಿಪ್ಪುವಿನ ಅನುಮತಿ ಇಲ್ಲದೆ ಪೋರ್ಚುಗೀಸರಾಗಲಿ, ಡಚ್ಚರಾಗಲಿ, ಬ್ರಿಟಿಷರಾಗಲಿ ಯಾವುದೇ ಯೂರೋಪಿಯನ್ನರಿಗೆ ಅದನ್ನು ಮತ್ತೆ ಮಾರುವಂತಿಲ್ಲ ಎಂಬ ಷರತ್ತಿನ ಮೇಲೆ ಅಕ್ಕಿಯನ್ನು ಅಲ್ಲಿ ಮರಾಟ ಮಾಡಲಾಗುತ್ತಿದ್ದಿತು.

ಟಿಪ್ಪುವು ಹಾಕಿದ ಈ ನಿರ್ಬಂಧವು ಅವನ ವಾಣಿಜ್ಯ ನೀತಿಯು ವಾಣಿಜ್ಯವಾಗಿರದೇ ಅದರಲ್ಲಿ ರಾಜಕೀಯ ಪರಿಗಣನೆಗಳು ಬೆರೆತಿದ್ದುವು ಎಂಬುದನ್ನು ಸೂಚಿಸುತ್ತದೆ. ಅವನ ಮುಖ್ಯವಾದ ಗುರಿ ಬ್ರಿಟಿಷರಿಗೆ ರಾಜಕೀಯವಾಗಿಯೂ, ವ್ಯಾಪಾರದಲ್ಲೂ ಪೆಟ್ಟುಕೊಡುವುದು, ಕಂಪೆನಿಯು ವರ್ತಕರ ಕೈಯಲ್ಲಿದೆ, ಭಾರತದ ವಾಣಿಜ್ಯವು ಕೈ ತಪ್ಪಿ ಹೋಗುವುದರಿಂದ ಅವರ ಲಾಭಕ್ಕೆ ಭಾಗಶಃ ಆದರೂ ಹೊಡೆತ ಬೀಳುತ್ತದೆ. ಅದರಿಂದ ಅವರ ಪ್ರಭಾವವು ಕಡಿಮೆಯಾಗುತ್ತದೆ ಎಂಬುದಾಗಿ ತನ್ನ ರಾಜ್ಯದಲ್ಲಿ ಮಾತ್ರವಲ್ಲದೆ, ಮೈಸೂರಿನ ವಸ್ತುಗಳು ಎಲ್ಲೆಲ್ಲಿ ದೊರಕುತ್ತಿದ್ದುವೋ ಅಲ್ಲೆಲ್ಲಾ ಬ್ರಿಟಿಷರ ವಾಣಿಜ್ಯಕ್ಕೆ ನಿರ್ಬಂಧ ಉಂಟು ಮಾಡಲು ಬಯಸಿದನು.

ಸುಧಾರಣಾ ಕ್ರಮಗಳನ್ನು ಕೈಗೊಳ್ಳುವುದೆಂದರೆ ಟಿಪ್ಪುವಿಗೆ ಬಹಳ ಇಷ್ಟವಾಗಿತ್ತು ಅವಿಶ್ರಾಂತವಾದ ಸುಸಂಪನ್ನವಾದ ಅವನ ಮನಸ್ಸು ಪ್ರತಿ ಸಾರಿಯೂ ಏನಾದರೂ ಹೊಸದೊಂದನ್ನು ಆಲೋಚಿಸುತ್ತಿತ್ತು. ವ್ಯಾಪಾರ-

ವಾಣಿಜ್ಯ ವಿಭಾಗಕ್ಕೆ ಅವನು ಸಮಗ್ರವಾಗಿ ಕಾಯಕಲ್ಪ ಮಾಡಿದನು. ಅದರ ರಚನೆಯನ್ನು ಕೇಂದ್ರೀಕರಿಸಿದನು. ಸರಕಾರಿ ವ್ಯಾಪಾರ ವ್ಯವಸ್ಥೆಯ ಒಂದು ಮಾದರಿಯನ್ನು ವಿಕಾಸ ಪಡಿಸಿದನು.[೧೭]

ನಾಡಿನ ವಾಣಿಜ್ಯ ಚಟುವಟಿಕೆಗಳನ್ನು ಅಭಿವೃದ್ಧಿ ಪಡಿಸಲು ಟಿಪ್ಪು ಸರ್ಕಾರಿ ವಾಣಿಜ್ಯ ನಿಗಮವೊಂದನ್ನು ಸ್ಥಾಪಿಸಿದ. ಈ ನಿಗಮದಲ್ಲಿ ೫ ರೂಪಾಯಿಯಿಂದ ಇಂದ ೫೦೦೦ ತನಕ ಷೇರು ಮೌಲ್ಯವಿರುವ ಷೇರುಗಳನ್ನು ಜನರಿಗೆ ಬಿಡುಗಡೆ ಮಾಡಿ ಜನತೆಯೂ ವಾಣಿಜ್ಯ ಚಟುವಟಿಕೆಯಲ್ಲಿ ಭಾಗವಹಿಸುವಂತೆ ಮಾಡಲಾಯಿತು. ೫ರೂ ಇಂದ ೫೦೦ರೂ ರಷ್ಟು ಷೇರು ಬೆಲೆ ಹೊಂದಿದ ಷೇರುದಾರರಿಗೆ ವರ್ಷದ ಕೊನೆಯಲ್ಲಿ ಶೇ ೫೦ರಷ್ಟು ಲಾಭಾಂಶ ಕೊಡಲಾಗುತ್ತಿತ್ತು. ೫೦೦ರೂ ಇಂದ ೫.೦೦೦ರೂ ಷೇರುದಾರರಿಗೆ ಶೇ ೨೫ರಷ್ಟು ಮಾತ್ರ ೫.೦೦೦ ರೂಗೆ ಮೇಲ್ಪಟ್ಟು ಷೇರು ಹೊಂದಿರುವವರಿಗೆ ಕೇವಲ ೧೨ರಷ್ಟು ಲಾಭಾಂಶವನ್ನು ಕೊಡಲಾಗುತ್ತಿತ್ತು. ಸಾಕಿಯವರು ಮೇಕಿಂಗ್ ಹಿಸ್ಟರಿ ಪುಸ್ತಕದಲ್ಲಿ ವಿವರಿಸಿರುವಂತೆ "ಪ್ರತ್ಯೇಕವಾಗಿ ಹರಡಿ ಹೋಗಿದ್ದ ಖಾಸಗಿ ಬಂಡವಾಳವನ್ನು ಸರ್ಕಾರವೇ ಸಂಗ್ರಹಿಸಿ ವಾಣಿಜ್ಯ ಅಭಿವೃದ್ಧಿಗೆ ಕೊಟ್ಟಂತಾಯಿತಲ್ಲದೆ ಉದ್ಯಮಿಗಳು ಹಾಗೂ ಅಧಿಕಾರಿಗಳು ಎಲ್ಲಾ ಸರ್ಕಾರಿ ವಾಣಿಜ್ಯ ಚಟುವಟಿಕೆಯಲ್ಲಿ ಭಾಗವಹಿಸುವಂತೆ ಮಾಡಿತು. ಇದರಿಂದಾಗಿ ಪ್ರಭುತ್ವ ಹಾಗೂ ವ್ಯಾಪಾರಿ ಬಂಡವಾಳ ಮತ್ತಷ್ಟು ಹತ್ತಿರ ಬರುವಂತಾಯಿತು. ಇದರ ರಾಜಕೀಯ ಪರಿಣಾಮವಾಗಿ ಆ ವರ್ಗಗಳಲ್ಲಿ ಉದಯಿಸಿದ ದೇಶ ಪ್ರೇಮಿ ಮನೋಭಾವವನ್ನು ನಾವು ಕಡೆಗಣಿಸುವಂತಿಲ್ಲ".[೧೮]

೪.೭. ವ್ಯಾಪಾರ ನೀತಿ

೧೭೯೦-೯೨ರ ಮೈಸೂರು ಯುದ್ಧದಲ್ಲಿ ಟಿಪ್ಪು ಹೀನಾಯ ಸೋಲು ಕಂಡರೂ ಕೂಡ, ತನ್ನ ಸಾಮ್ರಾಜ್ಯದ ವ್ಯಾಪಾರ ಚಟುವಟಿಕೆ (ಆಂತರಿಕ ಮತ್ತು ಬಾಹ್ಯ)ಗಳ ಅಭಿವೃದ್ಧಿಯನ್ನು ಎಲ್ಲಿಯೂ ಕುಂಠಿತಗೊಳಿಸಲಿಲ್ಲ. ೧೭೯೩-೯೪ರಲ್ಲಿ ಟಿಪ್ಪುವಿನ "ವಾಣಿಜ್ಯ ಕಾಯಿದೆ" ಜಾರಿಗೆ ಬಂದಿತು. ಈ ಕಾಯಿದೆಯಂತೆ ವಾಣಿಜ್ಯ ಪ್ರೋತ್ಸಾಹಕ್ಕೆಂದೇ ಸರ್ಕಾರದಲ್ಲಿ "ಮುಲಿಕಾತ್ ತೂಜರ್" ಎಂಬ ಇಲಾಖೆಯನ್ನು ಪ್ರಾರಂಭಿಸಲಾಯಿತು. ಸಾಗರೋತ್ತರ ವ್ಯಾಪಾರವನ್ನು ಪ್ರೋತ್ಸಾಹಿಸಿ ೩೧ ನೌಕೆಗಳನ್ನು ಹಾಗೂ ೩,೨೦,೦೦೦ ಪಗೋಡಗಳನ್ನು ತೆಗೆದಿರಿಸಲಾಯಿತು. ಮತ್ತೊಂದೆಡೆಗೆ ವಾರದ ಸಂತೆಗಳನ್ನು ಜನಪ್ರಿಯಗೊಳಿಸಲಾಯಿತು. "ಮುಲಿಕಾತ್ ತೂಜರ್" ಸಂಸ್ಥೆಯ ಮೂಲ ಉದ್ದೇಶ ದೇಶದ ಹೊರಗೆ ಮತ್ತು ಒಳಗೆ ವ್ಯಾಪಾರ ಕೇಂದ್ರಗಳನ್ನು ಸ್ಥಾಪಿಸಿ ವಾಣಿಜ್ಯ ವಹಿವಾಟುಗಳಿಗೆ ಉತ್ತೇಜನ ನೀಡುವುದು ಹಾಗೂ ಅಧಿಕೃತವಾಗಿ ಈ ಎಲ್ಲಾ ಕೇಂದ್ರಗಳಲ್ಲಿ ವರ್ತಕ ಪ್ರತಿನಿಧಿಗಳನ್ನು ನೇಮಿಸುವುದು ಮತ್ತು ಲೆಕ್ಕ ಪತ್ರಗಳನ್ನು ಕಾಪಾಡುವುದು.

ಟಿಪ್ಪು ಸರಕಾರ ರಾಜ್ಯದಲ್ಲಿಯೇ ವಾಣಿಜ್ಯ ವಹಿವಾಟುಗಳ ವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಿರುವುದನ್ನು ೧೭೯೪ರ ಏಪ್ರಿಲ್ ೨ರಂದು ಹೊರಡಿಸಿದ ನಡವಳಿಕೆಗಳು ವಿವರಿಸುತ್ತವೆ. ಇದು ಮೇಲೆ ಪ್ರಸ್ತಾಪಿಸಿದ ವಾಣಿಜ್ಯ ಸಂಸ್ಥೆಯ ಕಾರ್ಯ ಸೂಚಿಯಾಗಿದೆ. ಈ ಅಧಿಕಾರಿಗಳು ನೌಕಾಯಾನಗಳನ್ನು ಮತ್ತು ವ್ಯಾಪಾರ ಕೇಂದ್ರವನ್ನು ನೋಡಿಕೊಳ್ಳಬೇಕಾಗಿತ್ತು. ಅವರು ಆನೆ, ಮತ್ತಿತ್ತರ ವಸ್ತುಗಳಾದ ರೇಷ್ಮೆ ಮತ್ತು ಹತ್ತಿಯ ಬಟ್ಟೆ, ಗಂಧದ ಮರ, ಮೆಣಸು, ಏಲಕ್ಕಿ, ಅಕ್ಕಿ, ಬಂಗಾರ ಹಾಗೂ ಬೆಳ್ಳಿಯ ರಫ್ತಿಗೆ ದೊರಕುವಂತೆ ನೋಡಿಕೊಳ್ಳುವುದು.

[illegible]

[illegible]

[illegible]

ಅವರು ಅಸಫರುಗಳ ಮುಖಾಂತರ ಕೊಂಡುಕೊಂಡು ಇತರೆ ಖಾಸಗಿ ವರ್ತಕರು ರಫ್ತಿಗೆ ಕೊಡುತ್ತಿದ್ದ ಸುಂಕವನ್ನು ಕೊಡಬೇಕಾಗಿದ್ದಿತು. ವಿದೇಶದ ವರ್ತಕರು ಮೈಸೂರಿನಲ್ಲಿ ನೆಲೆಸಲು ಉತ್ತೇಜನವನ್ನು ಅವರು ಕೊಡಬೇಕಾಗಿತ್ತು. ಸಮರ್ಥರೂ ಮತ್ತು ನಂಬಿಕಸ್ಥರೂ ಆದ ಗುಮಾಸ್ತರು ಮತ್ತು ಮುತ್ಸದ್ದಿಗಳನ್ನು ರಾಜ್ಯದ ಮತ್ತು ವಿದೇಶ ಕೇಂದ್ರಗಳಲ್ಲಿ ನಿಯಮಿಸಬೇಕಾಗಿದ್ದಿತು. ಗುಮಾಸ್ತರುಗಳು ಅನುಭವವುಳ್ಳವರಾಗಿದ್ದು, ಲೆಕ್ಕಗಳನ್ನು ಸರಿಯಾಗಿ ಇಡಬಲ್ಲವರಾಗಿ, ಮೋಸದಲ್ಲಿ ಭಾಗಿಯಾಗುವುದಿಲ್ಲವೆಂದು ಪ್ರಮಾಣ ಮಾಡಬೇಕಾಗದ್ದಿತು. ಯಾವುದೇ ಅಧಿಕಾರಿ ಅಪ್ರಾಮಾಣಿಕತನದಿಂದ ವರ್ತಿಸಿದಾಗ ಇತರರೆಲ್ಲರೂ ಕೂಡಿ ತಪ್ಪಿತಸ್ಥರಿಗೆ ಛೀಮಾರಿ ಹಾಕಿ, ಅವಮಾನಗೊಳಿಸಿ ಆತನನ್ನು ಬಯಲಿಗಿಟ್ಟು ನಂತರ ತಕ್ಕ ಶಿಕ್ಷೆಯನ್ನು ವಿಧಿಸಲೆಂದು ಸುಲ್ತಾನನಿಗೆ ವರದಿ ಮಾಡಬೇಕಾಗಿದ್ದಿತು. ಇಲಾಖೆಯು ವಿದೇಶಗಳಲ್ಲಿ ಆಯಾ ರಾಜರುಗಳ ಅನುಮತಿಯನ್ನು ಪಡೆದು ಅಲ್ಲಿ ಕೇಂದ್ರಗಳನ್ನು ತೆರೆಯಲು ನಿರ್ದೇಶಿಸಲಾಗಿತ್ತು.

ವಾಣಿಜ್ಯ ಸಂಸ್ಥೆಯ ಶ್ರಮ ಮತ್ತು ಸರಕಾರದ ಪ್ರೋತ್ಸಾಹದಿಂದ ಮೈಸೂರು ರಾಜ್ಯದಲ್ಲಿ ಸುಮಾರು ಮೂವತ್ತು ವ್ಯಾಪಾರಿ ಕೇಂದ್ರಗಳನ್ನು ಸ್ಥಾಪಿಸಲಾಗಿತ್ತು (ಶ್ರೀರಂಗಪಟ್ಟಣ, ಬೆಂಗಳೂರು ಮತ್ತು ಮಂಗಳೂರು ನಗರಗಳಲ್ಲಿ). ರಾಜ್ಯದ ಹೊರಗೆ ಹದಿನೇಳು ಕೇಂದ್ರಗಳನ್ನು ತೆರೆಯಲಾಗಿತ್ತು. ಮದ್ರಾಸ್, ಪಾಂಡಿಚೇರಿ, ಮಾಹೆ, ಪೂನಾ, ಕಚ್ಛ್, ಕರಾಚಿ, ಜೆಡ್ಡಾ, ಮಸ್ಕತ್ ಮುಖ್ಯವಾದವುಗಳು, ಜೆಡ್ಡ್‌ದಲ್ಲಿನ ಮುತ್ತುಗಳು ಮತ್ತಿತ್ತರ, ವಸ್ತುಗಳನ್ನು ಖರೀದಿಸಲು ಆರ್ಮಜ್‌ನಲ್ಲಿ ಒಂದು ಕೇಂದ್ರವನ್ನು ತೆರೆಯಲಾಯಿತು. ಬುಷೈರ್, ಇಡನ್ ಮತ್ತು ಮಸ್ಕತ್ ಕೇಂದ್ರಗಳ ಮುಖಾಂತರವಾಗಿ ಮೈಸೂರು ರಾಜ್ಯದ ರಫ್ತಿನ ಪದಾರ್ಥಗಳನ್ನು ಪರ್ಷಿಯಾ, ಕೊಲ್ಲಿಯಲ್ಲಿ ಮಾರಾಟ ಮಾಡಿ ಪರ್ಷಿಯಾ ಮತ್ತು ಕೊಲ್ಲಿಯಿಂದ ಮೈಸೂರಿಗೆ ಬರುವ ಆಮದು ಪದಾರ್ಥಗಳನ್ನು ತರಿಸಿಕೊಳ್ಳುತ್ತಿದ್ದರಿಂದ ಈ ಕೇಂದ್ರಗಳು ಮುಖ್ಯವಾಗಿದ್ದವು.

ಕೇಸರಿಯ ಬೀಜ, ರೇಷ್ಮೆಯ ಹುಳು, ಕುದುರೆ, ಪಿಸ್ತಕಾಯಿ, ಒಣದ್ರಾಕ್ಷಿ, ಕಲ್ಲುಪ್ಪು ಮುತ್ತು, ಗಂಧಕ, ತಾಮ್ರ, ಖರ್ಜೂರ, ಪಿಂಗಾಣಿಯ ವಸ್ತುಗಳು ಆಮದಾಗುತ್ತಿದ್ದವು. ಕುದುರೆಗಳು ಸೇನೆಗೆ ಮತ್ತು ಗಂಧಕ ಕೋವಿನ ಮದ್ದಿಗೆ ಅಗತ್ಯವಾಗಿದ್ದವು. ರೇಷ್ಮೆಯನ್ನು ಅಭಿವೃದ್ಧಿಪಡಿಸಲು ರೇಷ್ಮೆಯ ಹುಳು ಅವಶ್ಯಕವೆನ್ನಿಸಿತು. ರಫ್ತುಗಳಲ್ಲಿ ಅಕ್ಕಿಯು ಪ್ರಮುಖವಾದುದು. ಮಲಬಾರಿನ ತೇಗವನ್ನು ಪರ್ಷಿಯಾ, ಕೊಲ್ಲಿಯಲ್ಲಿ ನೌಕೆಗಳ ರಚನೆಗಾಗಿ ಉಪಯೋಗಿಸುತ್ತಿದ್ದರು. ರಫ್ತು ಮಾಡುವ ಬಹುತೇಕ ಬಟ್ಟೆಗಳು ಮೈಸೂರಿನಲ್ಲಿಯೇ ನೇಯ್ದವುಗಳು, ಮತ್ತೆ ಕೆಲವನ್ನು ಭಾರತದ ಬೇರೆ ಭಾಗಗಳಿಂದ ತರಿಸಿಕೊಳ್ಳಲಾಗಿದ್ದಿತು.

ಖಾಸಗಿ ಉದ್ಯಮಗಳಿಗೆ ಅನುಮತಿಯನ್ನು ಕೊಡುವಾಗ, ತನ್ನ ರಾಜ್ಯದ ಮುಖ್ಯ ವರ್ತಕನು ತಾನೇ ಆಗಿ ಬಂಗಾರದ ಅದಿರು, ಹೊಗೆಸೊಪ್ಪು, ಗಂಧಕ ಮರ, ಹೆಚ್ಚಿನ ಬೆಲೆಯುಳ್ಳ ಲೋಹ, ಆನೆ, ತೆಂಗಿನಕಾಯಿ, ಮತ್ತು ಕಪ್ಪು ಮೆಣಸುಗಳನ್ನೂ ರಾಜ್ಯದ ಸ್ವಾಮ್ಯವನ್ನಾಗಿ ಟಿಪ್ಪು ಘೋಷಿಸಿದ್ದನು.

೪.೮. ವರ್ತಕ ಸಮುದಾಯಗಳು

ಬೆಂಗಳೂರು ನಗರದ ಚರಿತ್ರೆಯ ಅಧ್ಯಯನಕ್ಕೆ 'ಫ್ರಾನ್ಸಿಸ್ ಬುಕಾನನ್‌ನ ವರದಿ' ಉಪಯುಕ್ತವಾಗಿ ಕಂಡುಬರುತ್ತದೆ. ಟಿಪ್ಪುವಿನ ಅವನತಿಯನಂತರ ಬ್ರಿಟಿಷರ ವಶವಾದ ಬೆಂಗಳೂರನ್ನು ಸಂದರ್ಶಿಸಿದ ಅವನು

ಮೈಸೂರು ರಾಜ್ಯ ಮತ್ತು ಉತ್ತರ ಕನ್ನಡ ಹಾಗೂ ಮಲಬಾರುಗಳನ್ನು ಸಂಚರಿಸಿ ಬ್ರಿಟಿಷರ ವಸಾಹತು ಶಾಹಿ ಉದ್ದೇಶಕ್ಕೆ ಬೇಕಾಗುವ ಪೂರ್ಣ ಮಾಹಿತಿಯನ್ನು ಒದಗಿಸಿದನು. ಅವನ ಮೂರು ಸಂಪುಟಗಳ ಕೃತಿಯ ಮೊದಲ ಸಂಪುಟದಲ್ಲಿ ಬೆಂಗಳೂರಿನ ಬಗ್ಗೆ ಮಾಹಿತಿ ಇದೆ. ''ಇಲ್ಲಿ 'ಪಟ್ಟೆಗಾರರು' ಶ್ರೇಷ್ಠ ರೇಷ್ಮೆ ನೇಯುತ್ತಿದ್ದು ಇದು ಗಟ್ಟಿಯಾದ ಉಡುಗೆ, ಪಟ್ಟೆಗಾರರು ರೇಷ್ಮೆ ಮತ್ತು ಬಟ್ಟೆಯ ನೇಯ್ಗೆಯಲ್ಲಿ ವಿವಿಧ ವಿನ್ಯಾಸಗಳನ್ನು (ಸೀರೆ, ಕಿರಿಗೆ, ಕುಪ್ಪಸದ ಬಟ್ಟೆಗಳಲ್ಲಿ) ಮಾಡಬಲ್ಲರು. ಬಿಳಿಯ ಸಾದಾ ಮುಸ್ಲಿನ್ ಅನ್ನೂ ಅವರು ನೇಯಬಲ್ಲರು. ರೇಷ್ಮೆ ಅಂಚಿನ ಹಸುರು ಮುಸ್ಲಿನ್ ಅನ್ನು ಅವರು ನೇಯಬಲ್ಲರು. ರೇಷ್ಮೆ ಅಂಚಿನ ಹಸುರು ಮುಸ್ಲಿನ್ ಅನ್ನೂ ಪಟ್ಟೆಗಾರರು ಮಾಡಬಲ್ಲರಾದರೂ ದೇವಾಂಗದವರಷ್ಟು ಚೆನ್ನಾಗಿ ಅಲ್ಲ. ತಮ್ಮ ರೇಷ್ಮೆ ನೂಲಿಗೆ ಪಟ್ಟೆಗಾರರು ತಾವೇ ಬಣ್ಣ ಹಾಕುತ್ತಾರೆ. ಮಬ್ಬಾದ ಕಿತ್ತಳೆ, ಅರಿಸಿನ ಬಣ್ಣಗಳನ್ನು ಹಾಕುವ ಪಟ್ಟೆಗಾರರು, ಅರಿಶಿನ ಬಣ್ಣ ಹಾಕಿದ ರೇಷ್ಮೆಯನ್ನು ನೀಲಗಾರರಿಗೆ ಕೊಟ್ಟು ಅದನ್ನು ಹಸುರು ಬಣ್ಣದ್ದಾಗಿ ಮಾಡಿಸಿಕೊಳ್ಳುತ್ತಾರೆ. ಒಣಗಿದಾಗ ಈ ಬಣ್ಣ ಸಾಕಷ್ಟು ಪಕ್ಕಾ ಆಗುತ್ತದೆ.''

''ನೀಲಗಾರರು ಎಲ್ಲಾ ಬಣ್ಣಗಳನ್ನು ಹಾಕುತ್ತಿದ್ದು ಅದರಲ್ಲಿ ನಸು ಅಥವಾ ಕಡುನೀಲಿ, ಆಕಾಶನೀಲಿ, ನೇರಳೆ ಬಣ್ಣಗಳು ಸೇರಿವೆ. ಕೆಂಪು ಮತ್ತು ಕಿತ್ತಳೆ ಬಣ್ಣದ ರೇಷ್ಮೆಗೆ ಬೇಡಿಕೆ ಹೆಚ್ಚು, ಪಟ್ಟೆಗಾರರಂತೆ ಅದೇ ವರ್ಗದ ಬಟ್ಟೆಯನ್ನು ಉತ್ಪಾದಿಸುವ ಕತ್ತೇರಿ (ಖತ್ರಿ) ಎಂಬ ಜನ ತಾವು ಕ್ಷತ್ರಿಯರೆಂದು ಕರೆದುಕೊಳ್ಳುತ್ತಾರೆ. ಶಯನಗಾರರು, ಕನ್ನಡ ದೇವಾಂಗ ಮತ್ತು ತೆಲಿಗದೇವಾರಿಗೆ ಬೇರೆ ವರ್ಗದ ನೇಕಾರರಾಗಿದ್ದು. ಇವರು ನೂಲನ್ನು ಪೇಟೆಯಲ್ಲಿ ಖರೀದಿಸುತ್ತಾರೆ. ಕೆಂಪು ನೂಲು ಆದವಾನಿ, ಬಳ್ಳಾರಿ ಮತ್ತು ಕೃಷ್ಣಾನದಿ ಪರಿಸರದಿಂದ ಬರುತ್ತದೆ. ನೀಲದ ಬೇರೆ ಬೇರೆ ಛಾಯೆಯ ಬಣ್ಣ ಹಾಕುವವರು ನೀಲಗಾರರು. ದೇವಾಂಗದವರು ಹತ್ತಿ ಬಟ್ಟೆಗೆ ದಾಳಿಂಬೆ ಹೂವಿನಂಥ ಕೆಂಪು ಬಣ್ಣ ಹಾಕುತ್ತಾರೆ. ದೇವಾಂಗದವರು ಕಡು ನೀಲಿ ಬಣ್ಣದ ಬಟ್ಟೆ ತಯಾರಿಸುತ್ತಿದ್ದು ಇದನ್ನು ಅವರು ಕಪ್ಪು ಅನ್ನುತ್ತಾರೆ. ಈ ನೇಕಾರರು ತಾವು ವ್ಯಾಪಾರಿಗಳಿಂದ ಮುಂಗಡ ಇಲ್ಲವೇ 'ಬ್ಯಾಂಕರ್ಸ್' (ಲೇವಾದೇವಿ) ರಿಂದ ಸಾಲ ಪಡೆಯುವುದಾಗಿ ಹೇಳುತ್ತಾರೆ. ಅವರು ತಮ್ಮ ಬಟ್ಟೆಗಳನ್ನು ಗ್ರಾಹಕರಿಗೆ ಇಲ್ಲವೇ ವ್ಯಾಪಾರಿಗಳಿಗೆ ನೇರ ಮಾರುತ್ತಾರೆ. ತಾವೇ ಪೇಟೆಗೆ ತರುವುದಿಲ್ಲ. ಇವರ್‍ಯಾರು ನೇಯ್ಗೆ ಬಿಟ್ಟು ಬೇರೆ ಉದ್ಯೋಗ ಮಾಡುವವರಲ್ಲ. ಮತ್ತು ಅವರಲ್ಲಿ ಅನೇಕರು ಶ್ರೀಮಂತರಾಗಿದ್ದಾರೆ. ಶಯನಗಾರರು ಅತ್ಯಂತ ಶ್ರೀಮಂತರು, ಸೇವಕರಿಗೆ ತಿಂಗಳಿಗೆ ೨೦ ಪಣ ಕೂಲಿ ಕೊಡುತ್ತಾರೆ.''

''ಮುಸಲ್ಮಾನರು, ಬಿಳಿಮಗ್ಗ ಎಂದು ಕರೆಯುವ ಒಂದು ಸಮುದಾಯದವರು ನಾನಾ ರೀತಿಯ ಬಿಳಿ ಮಸ್ಲಿನ್ ನೇಯುತ್ತಾರೆ. ಇವರಲ್ಲಿ ಶಯನಗಾರರು ಪದ್ಮಶಾಲೆ ಮತ್ತು ಸಮಯಶಾಲೆಯವರು ಸೇರಿದ್ದಾರೆ. ಪದ್ಮಶಾಲೆಯವರ ಕುಟುಂಬದ ಸದಸ್ಯರೆಲ್ಲಾ ಸೇರಿ ದುಡಿಯುತ್ತಾರೆ. ಆದರೆ ಸಮಯ ಶಾಲೆಯವರು ಹೆಚ್ಚಾಗಿ ನೌಕರರನ್ನು ಇಟ್ಟುಕೊಳ್ಳುತ್ತಾರೆ. ಈ ಎರಡು ವರ್ಗದ ಜನರು ಕೃಷಿಕರಿಗಿಂತ ಹೆಚ್ಚು ಅನೂಕೂಲವಂತರು. ಒಳ್ಳೆಯ ಕೆಲಸಗಾರ ನೌಕರರು ದಿನಕ್ಕೆ ಒಂದು ಪಣಗಳಿಸಬಹುದು. ಆದರೆ ಇವರು ಸದಾ ಒಡೆಯನ ಸಾಲದಲ್ಲಿ ಇರುತ್ತಾರೆ. ತೊಗಟರು ಒರಟಾದ ದಪ್ಪ-ಬಟ್ಟೆ ನೇಯುತ್ತಿದ್ದು, ಇದಕ್ಕೆ ಕೆಂಪು ಅಂಚು ಇರುತ್ತದೆ. ಎಲ್ಲಾ ಸಾಮಾನ್ಯ ಜನ ಉಡುವ (ಸೊಂಟಕ್ಕೆ ಸುತ್ತುವ) ಬಟ್ಟೆಯಿದು. ಇದೇ ಜನ 'ರೂಮಲ್' ಎಂಬ ಕೆಂಪು ಅಂಚಿನ ಕರವಸ್ತ್ರದಂಥ ಬಟ್ಟೆ

[illegible]

ತಯಾರಿಸುತ್ತಿದ್ದರು.'' ಬುಕಾನನ್‌ರವರು ಈ ನಗರವನ್ನು ಸಂದರ್ಶಿಸಿದ ಸಮಯದಲ್ಲಿ ಅನೇಕ ರೀತಿಯ ವರ್ತಕ ಸಮುದಾಯಗಳ ಹೆಸರುಗಳನ್ನು ದಾಖಲಿಸಿದ್ದು ಅವುಗಳು ಈ ರೀತಿಯಾಗಿವೆ.

೧. ಪಂಚಾಳರು - (ಕಬ್ಬಿಣದ, ಬಡಿಗೆ, ಕಂಚುಗಾರ, ಕಲ್‌ಕುಟಿಗ, ಅಕ್ಕಾಲ,)

೨. ಭೇರಿಚೆಟ್ಟಿ - (ವೈಶ್ಯರೆಂದು ತೋರಿಸಿಕೊಳುವ ವ್ಯಾಪಾರಿಗಳು)

೩. ದೇವಾಂಗ - (ನೇಕಾರರ ಒಂದು ವರ್ಗ)

೪. ಹೆಗ್ಗಾಣಿಗರು - (ಎರಡು ಎತ್ತು ಗಾಣಕ್ಕೆ ಹೂಡುವ ಎಣ್ಣೆಗಾರರು)

೫. ಗೊಲ್ಲರ್ ಮತ್ತು ಗೊಲ್ಲವಾಣ್ಣು - (ಇವರು ನಗದು ಹಣ ಸಾಗಿಸುತ್ತಾರೆ.)

೬. ಪಂಚಮ - (ಬಣಜಿಗರು ಇವರು ವ್ಯಾಪರಿಗಳು, ಲಿಂಗಧಾರಿಗಳು)

೭. ರಂಗಾರು - (ಬಟ್ಟೆಗೆ ಅಚ್ಚು ಹಾಕುವವರು)

೮. ಲಾಡರು - (ಒಂದು ರೀತಿಯ ಮುಸ್ಮಲ್ಮಾನ ವ್ಯಾಪಾರಿಗಳು)

೯. ಗುಜಾರಾತಿ - (ಗುಜಾರಾತಿನ ವ್ಯಾಪಾರಿಗಳು)

೧೦. ಪದ್ಮಶಾಲಿಯವರು - (ಒಂದು ರೀತಿಯ ನೇಯ್ಗೆಯವರು)

ಬೆಂಗಳೂರು ಆಗ ೭೦ ರಿಂದ ೮೦,೦೦೦ ಜನಸಂಖ್ಯೆಯ ಗಣ್ಯ ಉದ್ಯಮದ ನಗರವಾಗಿತ್ತು. ಮುಂದೆ ಒಂದೆರೆಡು ದಶಕಗಳಲ್ಲೆ ಬ್ರಿಟನ್ನಿನಲ್ಲಾದ ಕೈಗಾರಿಕಾ ಕ್ರಾಂತಿ ಮತ್ತು ಬ್ರಿಟಿಷರು ತಮ್ಮ ದೇಶದಲ್ಲಿ ಜಾರಿಗೆ ತಂದ ಆಮದು ತೆರಿಗೆಯಿಂದ, ಇಲ್ಲಿನ ಅತಿ ಸಮೃದ್ಧ ನೇಯ್ಗೆ ಉದ್ಯಮ ಮೂಲೆಗುಂಪಾಯಿತು.[೨೦] ಭಾರತವು ಕೃಷಿ ಪ್ರಧಾನವಾಗಿಯೇ ಉಳಿಯಬೇಕು, ಕಚ್ಚಾಸಾಮಗ್ರಿಗಳನ್ನು ಪೂರೈಸುತ್ತಿರಬೇಕು. ಹಾಗೂ ಯುರೋಪಿನಿಂದ ಬರುವ ವ್ಯಾಪಾರಿ ಸರಕುಗಳಿಗೆ ಮಾರುಕಟ್ಟೆ ಯಾಗಬೇಕು ಎನ್ನುವ ಬ್ರಿಟಿಷ್ ಧೋರಣೆಗೆ ಭಾರತದ ಇತರ ನಗರಗಳಂತೆ ಬೆಂಗಳೂರು ಸಹ ಒಳಗಾಗಬೇಕಾಯಿತು.

ಅಡಿ ಟಿಪ್ಪಣಿಗಳು

೧. ಮೋಹನ್‌ಕೃಷ್ಣ ರೈ ಕೆ., ವಸಾಹತು ಪೂರ್ವ ಕರ್ನಾಟಕ ನಗರ ಚರಿತ್ರೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ-೩೨

೨. ಷೇಕ್ ಆಲಿ ಬಿ., ಕರ್ನಾಟಕ ಚರಿತ್ರೆ, ಸಂಪುಟ ೫, ಪ್ರಸಾರಾಂಗ, ಕನ್ನಡ ವಿಶ್ವ ವಿದ್ಯಾಲಯ, ಹಂಪಿ, ೧೯೯೭, ಪುಟ-೪೪೯

೩. ಸುಂದರ್‌ರಾವ್ ಬ.ನ., ವನವಿಹಾರಿ, ಬೆಂಗಳೂರು ಇತಿಹಾಸ, ವಸಂತ ಕಾವ್ಯ ಗ್ರಂಥ ಮಾಲಾ, ಬೆಂಗಳೂರು, ೧೯೮೫, ಪುಟ

೪. ಫ್ರಾನಿನ್ಸ್ ಬುಕಾನನ್, ಎ ಜರ್ನಿ ಫ್ರಮ್ ಮದ್ರಾಸ್ ಥ್ರೊ ದಿ ಕಂಟ್ರೀಸ್ ಆಫ್ ಮೈಸೂರು, ಕೆನಾರಾ. ಎಂಡ್ ಮಲಬಾರ್ ೧೮೦೦-೦೧, ಸಂಪುಟ-೧ ಪುಟ-೨೦೨

೫. ಹುತಾತ್ಮ ಟಿಪ್ಪು ಸುಲ್ತಾನ್, ಸ್ವತಂತ್ರ್ಯ ಕರ್ನಾಟಕದ ಹರಿಕಾರ, ಕರ್ನಾಟಕ ವಿಮೋಚನಾ ರಂಗ, ಬೆಂಗಳೂರು, ೨೦೦೩, ಪುಟ-೨೩

೬. ಬಾರ್ಕೂರು ಉದಯ, ಹೈದರಾಲಿ-ಟಿಪ್ಪು: ಇತಿಹಾಸ ಕಥನ, ಮಾನವತಾ ವೇದಿಕೆ, ಮಂಗಳೂರು, ೨೦೦೩, ಪುಟ-೮೪

೭. ಚಂದ್ರಮೌಳಿ ಕೆ., ಬೆಂಗಳೂರು ನೋಟಗಳು, ಪ್ರಿಸಮ್ಸ್ ಬುಕ್ಸ್ ಪ್ರೈ.ಲಿ, ಬೆಂಗಳೂರು ೨೦೦೨, ಪುಟ-೮೪

೮. ಷೇಕ್ ಅಲಿ ಬಿ., ಪೂರ್ವೋಕ್ತ ೧೯೯೭, ಪುಟ-೪೨೮

೯. ಚಂದ್ರಶೇಖರ್ ಎಸ್., ಆಧುನಿಕ ಕರ್ನಾಟಕದ ಆಂದೋಲನಗಳು, ನಮ್ಮ ಪ್ರಕಾಶನ, ಬಳಿಗೆರೆ, ೨೦೦೨ ಪುಟ-೯

೧೦. ಹುತಾತ್ಮ ಟಿಪ್ಪು ಸುಲ್ತಾನ್, ಪೂರ್ವೋಕ್ತ, ೨೦೦೩, ಪುಟ-೩೩

೧೧. ಬಾರ್ಕೂರು ಉದಯ, ಪೂರ್ವೋಕ್ತ, ೨೦೦೩ ಪುಟ-೮೫

೧೨. ಹುತಾತ್ಮ ಟಿಪ್ಪು ಸುಲ್ತಾನ್, ಪೂರ್ವೋಕ್ತ, ೨೦೦೩, ಪುಟ-೩೫

೧೩. ಸುರೇಶ್ ಮೂನ, ಇದು ನಮ್ಮ ಬೆಂಗಳೂರು, ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೯, ಪುಟ-೧೧

೧೪. ಶೇಷಗಿರಿರಾವ್ ಎಲ್.ಎಸ್., ಬೆಂಗಳೂರು ದರ್ಶನ, ಉದಯ ಬಾನು ಕಲಾ ಸಂಘ ಬೆಂಗಳೂರು, ೨೦೦೫ ಪುಟ-೩೦

೧೫. ಕನ್ನಡ ವಿಶ್ವ ಕೋಶ, ಸಂಪುಟ ೧೨, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೮೬, ಪುಟ-೮೨೫

೧೬. ಲಕ್ಷ್ಮಣ್ ತೆಲಗಾವಿ, (ಸಂ), ಚರಿತ್ರೆ ಅಧ್ಯಯನ, ಸಂಪುಟ ೧, ಸಂಚಿಕೆ ೧, ಪ್ರಸಾರಾಂಗ ಕನ್ನಡ ವಿಶ್ವ ವಿದ್ಯಾಲಯ, ಹಂಪಿ, ೨೦೦೦೬, ಪುಟ-೧೭೮

೧೭. ಷೇಕ್ ಅಲಿ ಬಿ., ಪೂರ್ವೋಕ್ತ, ೧೯೯೭, ಪುಟ-೪೬೭

೧೮. ಹುತಾತ್ಮ ಟಿಪ್ಪು ಸುಲ್ತಾನ್, ಪೂರ್ವೋಕ್ತ, ೨೦೦೩, ಪುಟ-೨೮

೧೯. ಬಾರ್ಕೂರು ಉದಯ, ಪೂರ್ವೋಕ್ತ, ೨೦೦೩, ಪುಟ-೮೯

೨೦ ಫ್ರಾನಿನ್ಸ್ ಬುಕಾನನ್, ಎ ಜರ್ನಿ ಫ್ರಮ್ ಮದ್ರಾಸ್ ಥ್ರೂ ದಿ ಕಂಟ್ರೀಸ್ ಆಫ್ ಮೈಸೂರು, ಕೆನರಾ. ಎಂಡ್ ಮಲಬಾರ್ ೧೮೦೦-೦೧, ಸಂಪುಟ-೧ ಪುಟ-೮೮

* * *

ಅಧ್ಯಾಯ ಐದು

ಸಮಾರೋಪ

ಅಧ್ಯಾಯ ಐದು

ಸಮಾರೋಪ

ಕರ್ನಾಟಕ ಚರಿತ್ರೆಯಲ್ಲಿ ಮೈಸೂರು ಸುಲ್ತಾನರ ಆಳ್ವಿಕೆಯ ಕಾಲಾವಧಿ ಅತ್ಯಲ್ಪವಾದರೂ ಅನೇಕ ದೃಷ್ಟಿಯಿಂದ ಇವರ ಆಳ್ವಿಕೆಯ ಕಾಲ ಮಹತ್ವಪೂರ್ಣವಾಗಿದೆ. ಬ್ರಿಟಿಷರ ವಿರುದ್ಧ ಪ್ರಬಲ ಪ್ರತಿಭಟನೆಯನ್ನು ತೋರಿಸಿದ್ದು ಅವರ ಜೀವನದ ಪ್ರಮುಖ ಅಂಶವಾಗಿದೆ. ಬ್ರಿಟಿಷರನ್ನು ದೇಶದಿಂದ ಓಡಿಸುವುದೇ ಅವರ ಜೀವನದ ಪರಮ ಧ್ಯೇಯವಾಗಿತ್ತು. ಮೈಸೂರು ರಾಜ್ಯಕ್ಕೆ ಉತ್ತರ ಭಾಗದ ಬಲಿಷ್ಠ ಮಿಲಿಟರಿ ನೆಲೆಯಾಗಿ ಬೆಂಗಳೂರನ್ನು ಸುಲ್ತಾನರು ಬಳಸಿಕೊಂಡರು. ಹೈದರನು ಬ್ರಿಟಿಷರನ್ನು ಸದೆ ಬಡಿಯಲು ಫ್ರೆಂಚರ ಸ್ನೇಹ ಬೆಳೆಸಿದ್ದನು. ಫ್ರೆಂಚ್ ಕುಶಲಕರ್ಮಿಗಳ ಸಹಕಾರದೊಂದಿಗೆ 'ತಾರಮಂಡಲ' ಪೇಟೆಯಲ್ಲಿ ಮದ್ದುಗುಂಡು, ಫಿರಂಗಿಗಳನ್ನು ತಯಾರಿಸುವ ಕಾರ್ಖಾನೆ ಆರಂಭಿಸಿದನು. ಸುಮಾರು ಮೂರು ದಶಕಗಳ ಕಾಲ ಕ್ರಿ.ಶ. ೧೭೬೦ರಿಂದ ೧೭೯೧ರ ವರೆಗೆ ಇವರ ಆಳ್ವಿಕೆಯಲ್ಲಿನ ಬೆಂಗಳೂರು ಯುದ್ಧಗಳ ಕಾಲದಲ್ಲಿ ಸಹಜವಾಗಿಯೇ ಮುಖ್ಯ ಆಯುಧ ತಯಾರಿಕೆ ಕೇಂದ್ರವಾಗಿ ರೂಪುಗೊಂಡಿತು. ಭಾರತದ ರಾಜಕಾರಣವು ಗೊಂದಲದ ಕಾಲವಾಗಿದ್ದು, ಈ ಕಾಲಾವಧಿಯಲ್ಲಿ ಎಲ್ಲರ ದೃಷ್ಟಿಯು ಬೆಂಗಳೂರಿನ ಮೇಲೆ ಕೇಂದ್ರಿತವಾಗಿತ್ತು. ಇದನ್ನರಿತ ಸುಲ್ತಾನರು ನಗರವನ್ನು ರಕ್ಷಿಸಲು ಕೋಟೆಗೆ ಕಾವಲು ಪಡೆಯೊಂದನ್ನು ನೇಮಿಸಿದರು. ಕಾವಲು ಪಡೆಯು ಶತ್ರುಗಳ ದಾಳಿಗಳನ್ನು ಸಮರ್ಥವಾಗಿ ಹಿಮ್ಮೆಟ್ಟಿಸಬೇಕಾಗಿತ್ತು. ಈ ಕಾರ್ಯವನ್ನು ನಿರ್ವಹಿಸಲು ಹೈದರನು ಖಿಲ್ಲೇದಾರ್, ಅಮಲ್ದಾರ್, ಹಾಗೂ ಟಿಪ್ಪು 'ಅಸೂಫ್' ಎಂಬ ಅಧಿಕಾರಿಗಳನ್ನು ನೇಮಿಸಿದರು. ಈ ಅಧಿಕಾರಿಗಳು ಕೋಟೆಯ ಸುರಕ್ಷತೆಯ ದೃಷ್ಟಿಯಿಂದ ಎಚ್ಚರವಹಿಸಬೇಕಾಗಿತ್ತು. ಶತ್ರುಗಳ ದಾಳಿಯ ಸಂಧರ್ಭದಲ್ಲಿ ರಕ್ಷಣೆಯ ವಿಚಾರವನ್ನು ಆ ದಿನದ ಸಂಜೆಯೇ ಸುಲ್ತಾನರಿಗೆ ತಲುಪಿಸಬೇಕಾಗಿತ್ತು. ಬೆಂಗಳೂರಿನ ಶ್ರೀಮಂತಿಕೆಯೊಂದಿಗೆ ಈ ಸುಭದ್ರ ಕೋಟೆ ವೈರಿಗಳನ್ನು ಹಿಮ್ಮೆಟ್ಟಿಸುವಲ್ಲಿ ಸುಲ್ತಾನರಿಗೆ ನೆರವಾಯಿತು.

[illegible]

[illegible]

[illegible]

ಸುಲ್ತಾನರು ತಮ್ಮ ರಾಜಧಾನಿಯನ್ನು ಶ್ರೀರಂಗಪಟ್ಟಣವನ್ನಾಗಿ ಮಾಡಿಕೊಂಡಿದ್ದರೂ ಇವರ ಅವಧಿಯಲ್ಲಿ ಬೆಂಗಳೂರು ತೀವ್ರವಾಗಿ ಬೆಳೆಯಿತು. ದಕ್ಷಿಣದ ಒಳನಾಡಿನ ವಾಣಿಜ್ಯ ರಾಜಧಾನಿಯನ್ನಾಗಿ ನಗರವನ್ನು ಬೆಳೆಸಿದರು. ಶ್ರೀರಂಗಪಟ್ಟಣವು ರಾಜಧಾನಿಯಾಗಿ ಶೀಘ್ರವಾಗಿ ಬೆಳೆದು ೧೭೯೯ರ ಹೊತ್ತಿಗೆ ೧.೫೦ಲಕ್ಷ ಜನಸಂಖ್ಯೆ ಹೊಂದಲು ಅಲ್ಲಿನ ಶ್ರೀಮಂತರ, ಆಸ್ಥಾನಿಕರ ಅಮೂಲ್ಯ ವಸ್ತ್ರಾಭರಣ, ವಿಲಾಸದ ವಸ್ತುಗಳನ್ನು ಪೂರೈಸುವ ಕೇಂದ್ರವಾಗಿ ಬೆಂಗಳೂರು ಅಪಾರ ಬೆಳೆವಣಿಗೆಯನ್ನು ಕಂಡಿತು. ತೋಟಗಾರಿಕೆಯನ್ನು ಅಭಿವೃದಿ ಪಡಿಸುವ ಸಲುವಾಗಿ ತಮಿಳುನಾಡಿನ ವ್ಯಾಪರಿಗಳೂ ಆದ ತಿಗಳರು ಬಂದು ನೆಲೆಸಲು ಕ್ರಮ ಕೈಗೊಂಡರು. ಇವರುಗಳನ್ನು ಸೈನ್ಯದ ಕಾರ್ಯಗಳಿಗೆ ಹಾಗೂ ರಚನಾತ್ಮಕ ಕಾರ್ಯಗಳಿಗೆ ಬಳಸಿಕೊಳ್ಳಲಾಯಿತು. ಲಾಲ್‌ಬಾಗ್ ಉದ್ಯಾನವನ್ನು ನಿರ್ಮಿಸಿ ಅದರ ನಿರ್ವಹಣೆ ಹೊಣೆಯನ್ನು ಇವರಿಗೆ ನೀಡಿದರು.

ಹದಿನೆಂಟನೆಯ ಶತಮಾನದ ಉತ್ತಾರಾರ್ಧ ಬೆಂಗಳೂರು ದಕ್ಷಿಣದಲ್ಲೇ ಪ್ರಮುಖವಾದ ವಾಣಿಜ್ಯ ಮತ್ತು ಕೈಗಾರಿಕೆಗಳ ತವರಾಯಿತು. ನೇಯ್ಗೆ ಮತ್ತು ತತ್ಸಬಂದಿ ಕೈಗಾರಿಕೆಗಳು ನಗರದ ಬಹುಪಾಲು ಜನರಿಗೆ ಉದ್ಯೋಗವನ್ನು ಕಲ್ಪಿಸಿದ್ದವು. ದಕ್ಷಿಣ ಭಾರತದ ಆಳುವ ವರ್ಗಗಳಿಗೆ ಬಟ್ಟೆಯ ಬೇಡಿಕೆಗಳನ್ನು ಬೆಂಗಳೂರು ಪೂರೈಸುತ್ತಿತ್ತು. ವಿದೇಶಗಳಲ್ಲಿಯೂ ಸಹ ನಗರದಲ್ಲಿ ತಯಾರಾದ ಬಟ್ಟೆಗೆ ಅಪಾರವಾದ ಬೇಡಿಕೆ ಇತ್ತು. ಬೇಡಿಕೆಯನ್ನು ಪೂರೈಸಲು ಸುಲ್ತಾನರು ವಿದೇಶಗಳಲ್ಲಿ ಕಾರ್ಖಾನೆಗಳನ್ನು ಸ್ಥಾಪಿಸಿದರು. ೧೭೬೮ರಲ್ಲಿ ಹೈದರನು ಆರ್ಕಾಟಿನಿಂದಲೂ, ೧೭೯೫ರಲ್ಲಿ ಟಿಪ್ಪು ತಂಜಾವೂರಿನಿಂದಲೂ ಗುಜಾರಾತಿ ಖಾತ್ರಿಗಳನ್ನು ನೇಯ್ಗೆ ಕೆಲಸಕ್ಕಾಗಿ ಬೆಂಗಳೂರಿಗೆ ಬರಮಾಡಿಕೊಂಡರು. ಆಮದು-ರಫ್ತು ವ್ಯಾಪಾರದಲ್ಲಿ ನಗರವು ಪ್ರಮುಖ ಪಾತ್ರವಹಿಸಿತು. ಉಣ್ಣೆ, ಕಚ್ಚಾರೇಷ್ಮೆ, ಕಚ್ಚಾಹತ್ತಿ, ಗೋಣಿದಾರಗಳನ್ನು ಆಮದು ಮಾಡಿಕೊಂಡರೆ ಬಟ್ಟೆ, ಎಣ್ಣೆ, ಹುಣಸೆಹಣ್ಣು, ಶ್ರೀಗಂದ,ರೇಷ್ಮೆ ಬಟ್ಟೆಗಳನ್ನು ರಫ್ತು ಮಾಡಲಾಗುತ್ತಿತ್ತು. ವಿವಿಧ ಜಾತಿಯ ಜನ ವಿವಿಧ ರೀತಿಯ ವಸ್ತುಗಳ ನೇಯ್ಗೆಯಲ್ಲಿ ತೊಡಗಿದ್ದು ಒಂದೊಂದು ಜಾತಿಯವರು ಒಂದೊಂದು ರೀತಿಯ ನೇಯ್ಗೆಯಲ್ಲಿ ಪರಿಣಿತಿ ಹೊಂದಿದ್ದರು.

ಬೆಂಗಳೂರು ದೊಡ್ಡ ವ್ಯಾಪಾರ ಕೇಂದ್ರವಾಗಿ ಬೆಳೆಯಲು ಮುಖ್ಯ ಕಾರಣ ಟಿಪ್ಪು ಅನುಸರಿಸಿದ ವಾಣಿಜ್ಯ ನೀತಿ. ತನ್ನ ರಾಜ್ಯದ ಹೊರಗೆ ತಯಾರಾದ ವಸ್ತುಗಳ ಮೇಲೆ ನಿರ್ಬಂಧ ವಿಧಿಸಲಾಗಿತ್ತು. ಪರಿಣಿತ ನೇಯ್ಗೆಯವರನ್ನು, ತಂತ್ರಜ್ಞರನ್ನು ಎಲ್ಲಾ ಸವಲತ್ತುಗಳನ್ನು ಕೊಟ್ಟು ಬೆಂಗಳೂರಿಗೆ ಆಹ್ವಾನಿಸಲಾಯಿತು. ಕೆಲವು ಉದ್ದಿಮೆಗಾರರನ್ನಂತೂ ಸುಲ್ತಾನ ತಾನೇ ವೈಯುಕ್ತಿಕವಾಗಿ ಬರೆದು ಆಹ್ವಾನಿಸಿದ. ರಕ್ಷಣೆ, ಕಾರ್ಖಾನೆಗಾಗಿ ಸ್ಥಳ, ಬಂಡವಾಳದ ಜೊತೆಗೆ ಮೊದಲ ಎರಡು ವರ್ಷಗಳು ಗಳಿಸಿದ ಪೂರ್ಣ ಲಾಭವನ್ನು ಪೂರ್ಣವಾಗಿ ಅವರಿಗೆ ಬಿಡುವುದರೊಂದಿಗೆ, ಎಲ್ಲಾ ತೆರಿಗೆ ಮನ್ನಾ ಮಾಡುವುದಾಗಿ ಟಿಪ್ಪು ಆಶ್ವಾಸನೆ ನೀಡಿದ. ಟಿಪ್ಪುವಿನ ಈ ವ್ಯಾಪಾರ ವಾಣಿಜ್ಯ ನೀತಿ ಆತನಿಗೆ ಹಲವಾರು ಶತ್ರುಗಳನ್ನು ಸೃಷ್ಟಿಸಿತು. ರಾಜಾಜ್ಞೆಯನ್ನು ಮೀರಿದ ವ್ಯಾಪಾರಿಗಳನ್ನು ಟಿಪ್ಪು ನಿರ್ದಯವಾಗಿ ಶಿಕ್ಷಿಸಿದ, ವಿದೇಶಿ ವಸ್ತುಗಳ ಮೇಲೆ

ವಿಧಿಸಿದ ನಿರ್ಬಂಧ ಯೂರೋಪಿಯನ್ ಮತ್ತು ಮೈಸೂರಿನ ವ್ಯಾಪಾರಿಗಳನ್ನು ಕೆರಳಿಸಿತು. ಹೀಗಾಗಿ ಬ್ರಿಟೀಷರು ಬೆಂಗಳೂರಿನ ಮೇಲೆ ಆಕ್ರಮಣ ಮಾಡಿದಾಗ ಒಳಗಿನ ಅತೃಪ್ತ ವ್ಯಾಪಾರಿಗಳು ವಸಾಹತುಶಾಹಿಗಳಿಗೆ ಬೆಂಬಲವಾಗಿ ನಿಂತರು.

ಬಟ್ಟೆ ಉದ್ಯಮದೊಡನೆ ನಗರದಲ್ಲಿ ಬೆಳೆದ ಮತ್ತೊಂದು ಉದ್ಯಮವೇನೆಂದರೆ ಯುದ್ಧೋಪಕರಣಗಳ ತಯಾರಿಕ ಘಟಕಗಳು. ಕಬ್ಬಿಣ ಮತ್ತು ಮಿಶ್ರ ಲೋಹಗಳಿಂದ ಅಲ್ಲಿ ಶಸ್ತ್ರಾಸ್ತ್ರಗಳನ್ನು ಬೃಹತ್ ಪ್ರಮಾಣದಲ್ಲಿ ಉತ್ಪಾದಿಸುತ್ತಿದ್ದರು. ಯುದ್ಧನಿರತ ಮೈಸೂರು ಮತ್ತು ದೇಶದಲ್ಲೆಡೆಗೆ ಈ ವಸ್ತುಗಳು ಅನಿವಾರ್ಯವಾಗಿ ಬೇಕಾಗಿದ್ದವು. ಹಾಗೆಯೇ ಸುಲ್ತಾನರ ಆಳ್ವಿಕೆಯಲ್ಲಿ ಬೆಂಗಳೂರು ಸೈನ್ಯದ ವಾಸಸ್ಥಾನವಾಗಿತ್ತು.

ಸುಲ್ತಾನರ ಕಾಲಾವಧಿಯಲ್ಲಿ ಬೆಂಗಳೂರಿನ ದಕ್ಷಿಣ ಭಾಗ ಮಿಲಿಟರಿ ಕಾರ್ಯಚರಣೆಯ ಕೇಂದ್ರಸ್ಥಾನವಾಗಿತ್ತು. ಬ್ರಿಟಿಷರು ೧೮೦೦ರಲ್ಲಿ ಬೆಂಗಳೂರನ್ನು ಪಡೆದು ಇಲ್ಲಿ ಆಡಳಿತ ಪ್ರಾರಂಭಿಸಿ ನಂತರ ನಗರದ ಪಶ್ಚಿಮ ಭಾಗ ಅವರ ಸೈನ್ಯದ ಕಾರ್ಯಚರಣೆಯ ಕೇಂದ್ರವಾಗಿ "ದಂಡು ಪ್ರದೇಶ" ಅಥವಾ ಕಂಟೋನ್ಮೆಂಟ್ ಎಂದೂ ಪ್ರಸಿದ್ಧವಾಯಿತು. ಇದರಿಂದ ಬೆಂಗಳೂರಿಗೆ ಹೊಸ ಅವಳಿ ನಗರ ಹುಟ್ಟುವಂತಾಗಿ ಕಾಲಕ್ರಮದಲ್ಲಿ ಅದು ಬೆಂಗಳೂರಿನ ಹಿರಿಯ ಪ್ರದೇಶವಾಯಿತು. ಹಾಗೆ ನೋಡಿದರೆ ಬೆಂಗಳೂರು ೧೯ನೇ ಶತಮಾನದ, ಅಂದರೆ ಬ್ರಿಟಿಷರ ಕೈವಶವಾದ ಮೇಲೆ ತನ್ನ ಪ್ರಾಮುಖ್ಯತೆಯನ್ನು ಕಳೆದುಕೊಂಡಿತು. ಇದಕ್ಕೆ ಟಿಪ್ಪುವಿನ ಕಾಲದಲ್ಲಿ ದೇಶೀ ಕೈಗಾರಿಕೆ-ಉತ್ಪಾದನೆಗಳಿಗೆ ಇದ್ದ ರಕ್ಷಣೆ, ಬ್ರಿಟಿಷರ ಕಾಲದಲ್ಲಿ ರದ್ದಾಗಿದ್ದು ಒಂದು ಕಾರಣವಾದರೆ, ಹಲವಾರು ಉತ್ಪಾದನೆಗಳು ಮತ್ತು ವ್ಯಾಪಾರದ ಮೇಲಿನ ರಾಜ್ಯದ ಏಕಸ್ವಾಮ್ಯವನ್ನು ಹಿಂತೆಗೆದುಕೊಂಡದ್ದು ಮತ್ತೊಂದು ಮುಖ್ಯ ಕಾರಣವಾಯಿತು. ಹಾಗೆಯೇ ಟಿಪ್ಪು ಹೊರ ದೇಶಗಳಲ್ಲಿ ಸ್ಥಾಪಿಸಿದ ಕೈಗಾರಿಕೆಗಳು ಮತ್ತು ವ್ಯಾಪಾರ-ವಾಣಿಜ್ಯ ಮಳಿಗೆಗಳನ್ನು ಮುಚ್ಚಲಾಯಿತು. ಬೆಂಗಳೂರಿನಲ್ಲಿದ್ದ ಕೈ ಮಗ್ಗಗಳು ಅದರ ಪ್ರಾಮುಖ್ಯತೆಗೆ ಒಂದು ಮಾನದಂಡವಾಗಿದ್ದವೆಂದು ಒಪ್ಪಿಕೊಳ್ಳುವುದಾದರೆ, ಅವುಗಳ ಸಂಖ್ಯೆ ೧೮೫೦ರ ವೇಳೆಗೆ ಶೇಕಡ.೫೦ ರಷ್ಟು ಕಡಿಮೆಯಾಗಿತ್ತು. ಶೇಕಡಾವಾರು ವ್ಯಾಪಾರ ಹೆಚ್ಚಾದರೂ, ಉತ್ಪಾದನೆ ತೀವ್ರ ಇಳಿಮುಖವಾಗಿತ್ತು ಅಂದರೆ ಬೆಂಗಳೂರು ಸರಕು ಸಂಸ್ಕೃತಿಯ ಗ್ರಾಹಕರ ನಗರವಾಗಿ ಮಾರ್ಪಾಡಾಗುತ್ತಿತ್ತು. ವಸಾಹತುಶಾಹಿ ಆಡಳಿತದ ಪರಿಣಾಮ, ಇದರಿಂದಾಗಿ ಬೆಂಗಳೂರು ವಸಾಹತು ಆಳ್ವಿಕೆಯ ಅವಧಿಯಲ್ಲೂ ಪ್ರಮುಖ ನಗರ ಕೇಂದ್ರವಾಗಿ ಬೆಳೆಯುವಂತಾಗಿದೆ.

೧೯ನೇ ಶತಮಾನದಲ್ಲಿ ಯಲಹಂಕ ನಾಡ ಪ್ರಭುಗಳಿಂದ ಸ್ಥಾಪಿತವಾದ ಬೆಂಗಳೂರು ಮರಾಠರು, ಆದಿಲ್‌ಷಾಹಿಗಳು, ಪಾಳೇಯಗಾರರು, ಮೊಘಲರು, ಮೈಸೂರಿನ ಒಡೆಯರು ಅನಂತರ ಬ್ರಿಟೀಷರ ಪ್ರಭುತ್ವಗಳ ಆಳ್ವಿಕೆಯಲ್ಲಿ ರಾಜಕೀಯವಾಗಿ ಮತ್ತು ಆರ್ಥಿಕವಾಗಿ ಬೆಳವಣಿಗೆಯನ್ನು ಕಂಡಿತು. ಬೆಂಗಳೂರು ಮೊದಲಿನಿಂದಲೂ ಹೊರನಾಡಿನವರನ್ನು ತನ್ನೆಡೆಗೆ ಆಕರ್ಷಿಸುತ್ತದೆ. ಹೈದರಾಲಿ ಕಾಲದಿಂದ ಇತ್ತೀಚಿನ ವರ್ಷಗಳವರೆಗೂ ವಿಶ್ವದ ನಾನಾ ದೇಶಗಳ ವಿವಿಧ ಸಮುದಾಯದವರು ಬೆಂಗಳೂರಿಗೆ ಬಂದು ನೆಲೆಸಿದ್ದಾರೆ.

[illegible]

ಬೆಂಗಳೂರು ಪಾರಂಪರಿಕತೆ ಮತ್ತು ಆಧುನಿಕತೆಯನ್ನು ಸಮರ್ಪಕವಾಗಿಯೇ ಮೇಳೈಸಿಕೊಂಡಿರುವುದಕ್ಕೆ ಉತ್ತಮ ಉದಾಹರಣೆಗಳಿವೆ. ಇಲ್ಲಿನ ಟಿಪ್ಪುಸುಲ್ತಾನರ ಅರಮನೆ, ಬೆಂಗಳೂರಿನ ಕೋಟೆ, ಆರ್ಮ್ಮರಿ ಮೈಸೂರು ಸುಲ್ತಾನರ ಆಳ್ವಿಕೆಯನ್ನು ತಿಳಿಸುವ ಸ್ಮಾರಕಗಳಾಗಿದ್ದು, ಐತಿಹಾಸಿಕ ಪರಂಪರೆಯನ್ನು ಬಿಂಬಿಸುತ್ತವೆ. ಬೆಂಗಳೂರಿನಲ್ಲಿ ಸುಲ್ತಾನರ ಆಳ್ವಿಕೆಯನ್ನು ಪರಿಚಯಿಸುವ ಸ್ಮಾರಕ ಪ್ರವಾಸಿಗರ ಆಕರ್ಷಣೀಯ ಕೇಂದ್ರಗಳಾಗಿದ್ದು, ಬೆಂಗಳೂರಿನ ಸೌಂದರ್ಯವನ್ನು ಹೆಚ್ಚಿಸಿವೆ.

ಬೆಂಗಳೂರು ಇಂದು ಕರ್ನಾಟಕದ ರಾಜಧಾನಿ ಮಾತ್ರವಾಗಿರದೆ, ಮಾಹಿತಿ ತಂತ್ರಜ್ಞಾನ, ಶಿಕ್ಷಣ, ಉದ್ದಿಮೆ, ಆರೋಗ್ಯ ಹಾಗೂ ವ್ಯಾಪಾರದ ದೃಷ್ಟಿಯಿಂದ ಜಗತ್ತಿನ ಆಕರ್ಷಣೆಯ ಕೇಂದ್ರವಾಗಿದೆ. ಬೆಂಗಳೂರು ಈ ಬಗೆಯಲ್ಲಿ ಬೆಳವಣಿಗೆ ಹೊಂದುವುದಕ್ಕೆ ಅದರ ಭೌಗೋಳಿಕ ಹಾಗೂ ಚಾರಿತ್ರಿಕ ಪರಿಸರ ಪ್ರಮುಖವಾದ ಕಾರಣವಾಗಿದೆ. ಮೈಸೂರು ಸುಲ್ತಾನರ ಆಳ್ವಿಕೆಯ ಅವಧಿಯಲ್ಲಿ ಈ ನಗರವು ದಕ್ಷಿಣ ಭಾರತದ ರಾಜಕಾರಣದ ಕೇಂದ್ರ ಬಿಂದುವಾಗಿತ್ತು. ಬ್ರಿಟಿಷರು, ಫ್ರೆಂಚರು, ಮರಾಠರು, ನಿಜಾಮರು, ಮೈಸೂರು ಸುಲ್ತಾನರು ಮುಂತಾದ ಅಂದಿನ ಹಲವಾರು ರಾಜಕೀಯ ಶಕ್ತಿಗಳಿಗೆ ರಾಜಕೀಯವಾಗಿ ಹಾಗೂ ಆರ್ಥಿಕವಾಗಿ ಪ್ರಮುಖವಾದ ಕೇಂದ್ರವಾಗಿತ್ತು. ಟಿಪ್ಪುವಿನ ಪತನದ ಬಳಿಕ ವಸಾಹತು ಆಳ್ವಿಕೆಯಲ್ಲಿ ಬೆಂಗಳೂರು ತಾತ್ಕಾಲಿಕ ಹಿನ್ನೆಡೆಯನ್ನು ಕಂಡರೂ, ಅದರಿಂದ ಚೇತರಿಸಿಕೊಂಡು ವಸಾಹತು ಅರ್ಥವ್ಯವಸ್ಥೆಗೆ ಪೂರಕವಾಗಿ ತನ್ನನ್ನು ಸಜ್ಜುಗೊಳಿಸಿಕೊಂಡಿತು. ಹೀಗೆ ಚರಿತ್ರೆಯುದ್ದಕ್ಕೂ ನಾನಾ ಸ್ವರೂಪದ ಅನುಭವಗಳಿಗೆ ಒಳಗಾಗುತ್ತಲೇ ತನ್ನ ಆಸ್ತಿತ್ವವನ್ನು ಗಟ್ಟಿಗೊಳಿಸುತ್ತಾ ಅಭಿವೃದ್ಧಿಯತ್ತ ಮುನ್ನಡೆಯಿತು.

* * *

ಅನುಬಂಧ

೧. ಪರಾಮರ್ಶನ ಗ್ರಂಥಗಳು

೨. ನಿಯತಕಾಲಿಕೆಗಳು

೩. ನಕ್ಷೆಗಳು

೪. ಛಾಯಾಚಿತ್ರಗಳು

೧. ಪರಾಮರ್ಶನ ಗ್ರಂಥಗಳು

೧. ಎಂ. ಚಿದಾನಂದಮೂರ್ತಿ, ಕರ್ನಾಟಕ ಸಂಸ್ಕೃತಿ, ಕನ್ನಡ ಸಾಹಿತ್ಯ ಪರಿಷತ್ತು, ೨೦೦೭, ಬೆಂಗಳೂರು

೨. ಕರ್ನಾಟಕದ ಪರಂಪರೆ, ಸಂಪುಟ-೨, ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೬.

೩. ಕಿರ್ಮಾನಿ ಹುಸೇನ್ ಆಲಿಖಾನ್, ದಿ ಹಿಸ್ಟರಿ ಆಫ್ ಹೈದರ್‌ನಾಯ್ಕ ಲಂಡನ್, ೧೮೧೧

೪. ಕೃಷ್ಣರಾವ್ ಎಂ.ವಿ. ಬೆಂಗಳೂರು ಕೆಂಪೇಗೌಡ, ಕಾರ್ಪೋರೇಶನ್ ಪ್ರಕಟನೆ, ಬೆಂಗಳೂರು, ೧೯೬೪

೫. ಕಷ್ಣರಾವ್ ಎಂ.ವಿ. ಮತ್ತು ಎಂ. ಕೇಶವಭಟ್ಟ, ಕರ್ನಾಟಕದ ಇತಿಹಾಸ ದರ್ಶನ, ಕರ್ನಾಟಕ ಸಹಕಾರ ಪ್ರಕಾಶನ ಮಂದಿರ, ಬೆಂಗಳೂರು ೧೯೭೦

೬. ಗೋಪಾಲ್‌ರಾವ್ ಎಚ್.ಎಸ್., ಕರ್ನಾಟಕ ಏಕೀಕರಣ ಇತಿಹಾಸ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೧೯೯೬

೭. ಗೋಪಾಲ್‌ರಾವ್ ಎಚ್.ಎಸ್., ಇತಿಹಾಸದ ಇಣಕು ನೋಟ; ಅನಂತ ಪ್ರಗತಿ ಎಂಟರ್‌ಪ್ರೈಸಸ್, ಬೆಂಗಳೂರು, ೨೦೦೭

೮. ಗೋಪಾಲ್‌ರಾವ್ ಎಚ್.ಎಸ್., ನಮ್ಮ ನಾಡು ಕರ್ನಾಟಕ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೧೦೦೩

೯. ಗೋವಿಂದರಾಜು ಸಿ.ಆರ್. (ಸಂ), ಇತಿಹಾಸ, ಪ್ರಸಾರಾಂಗ, ಕನ್ನಡ ವಿಶ್ವ ವಿದ್ಯಾಲಯ, ಹಂಪಿ, ೨೦೦೪

೧೦. ಗೌರಿ ಸುಂದರ್, (ಸಂ), ಟಿಪ್ಪು ಸುಲ್ತಾನ್ ಕನ್ನಡ ದ್ರೋಹಿಯೇ? ಸುಂದರ ಪ್ರಕಾಶನ, ಬೆಂಗಳೂರು, ೨೦೦೬

೧೧. ಚಂದ್ರಶೇಖರ್ ಎಸ್., ವಸಾಹತುಕಾಲೀನ ಕರ್ನಾಟಕ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೬

೧೨. ಚಂದ್ರಶೇಖರ್ ಎಸ್., ಆಧುನಿಕ ಕರ್ನಾಟಕದ ಆಂದೋಲನಗಳು, ನಮ್ಮ ಪ್ರಕಾಶನ, ಬಿಳಿಗೆರೆ (ತಿಪಟೂರು), ೨೦೦೨

೧೩. ಚಂದ್ರಮೌಳಿ ಕೆ., ಬೆಂಗಳೂರಿನ ನೋಟಗಳು ಅಂದು-ಇಂದು, ಪ್ರಿಸಮ್ಸ್ ಬುರ್ಕ್ ಪ್ರೈ.ಲಿ., ಬೆಂಗಳೂರು, ೨೦೦೨

೧೪. ಚಿನ್ನಸ್ವಾಮಿ ಸೋಸಲೆ ಎನ್., ಸಾಮ್ರಾಜ್ಯ ಮತ್ತು ಸಂಸ್ಥಾನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪

೧೫. ಚಿನ್ನಸ್ವಾಮಿ ಸೋಸಲೆ ಎನ್., ನಮ್ಮ ಗ್ರಾಮಗಳು ಅಂದು-ಇಂದು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪

೧೫. ಚಂದ್ರಶೇಖರಯ್ಯ ಬಿ.ಎಂ., ಕರ್ನಾಟಕ ಸಾಂಸ್ಕೃತಿಕ ಪರಂಪರೆ, ಸಿ.ವಿ.ಜಿ. ಪ್ರಕಾಶನ, ಬೆಂಗಳೂರು, ೨೦೦೫

೧೬. ಜಮುನ ಎಂ. (ಪ್ರ.ಸಂ), ಬೆಂಗಳೂರು ಬಖೈರುಗಳು, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೨೦೦೬

೧೭. ತಂಬಂಡ ವಿಜಯ್ ಪೂಣಚ್ಚ (ಪ್ರ.ಸಂ.), ಚರಿತ್ರೆ ವಿಶ್ವಕೋಶ, ಸಂಪುಟ-೪, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೧.

೧೮. ತಿ.ತಾ. ಶರ್ಮ, ಮೈಸೂರಿನ ಇತಿಹಾಸದ ಹಳೆಯ ಪುಟಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೬

೧೯. ಬರಗೂರು ರಾಮಚಂದ್ರಪ್ಪ, ಕರ್ನಾಟಕ ಸಂಗಾತಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು, ೨೦೦೨

೨೦. ಬಾರ್ಕೂರು ಉದಯ, ಹೈದರಾಲಿ-ಟಿಪ್ಪು: ಇತಿಹಾಸ ಕಥನ, ಮಾನವತಾ ವೇದಿಕೆ, ಮಂಗಳೂರು, ೨೦೦೩

೨೧. ಬೌರಿಂಗ್, ಲೆವಿನ್, ಹೈದರಾಲಿ ಎಂಡ್ ಟಿಪ್ಪು ಸುಲ್ತಾನ್, ಡೆಲ್ಲಿ ೧೯೬೮

೨೨. ಮೋಹನ್‌ಕೃಷ್ಣ ರೈ.ಕೆ., ವಸಾಹತುಶಾಹಿ ಮತ್ತು ನಗರೀಕರಣ ಪ್ರಸಾರಾಂಗ, ಕನ್ನಡ ವಿಶ್ವ ವಿದ್ಯಾಲಯ, ೨೦೦೭

೨೩. ಮೋಹನ್‌ಕೃಷ್ಣ ರೈ.ಕೆ., ವಸಾಹತುಪೂರ್ವ ಕರ್ನಾಟಕದ ನಗರ ಚರಿತ್ರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬

೨೪. ಮೋಹನ್‌ಕೃಷ್ಣ ರೈ.ಕೆ. ಪ್ರಭುತ್ವ ಮತ್ತು ಜನತೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪

೨೬. ಮುದ್ದಾಚಾರಿ, ಬಿ., ಮರಾಠರ ಅತಿಕ್ರಮಣ-ಮೈಸೂರಿನ ಪ್ರತಿಭಟನೆ, ಪ್ರಸಾರಾಂಗ, ಮಾನಸಗಂಗೋತ್ರಿ,ಮೈಸೂರು ೨೦೦೧

[illegible]

೨೭. ಮುಜಂದಾರ್ ಆರ್.ಸಿ., ಮರಾಠರ ಪಾರಮ್ಯ, ನರಸಿಂಹಮೂರ್ತಿ ಎ.ವಿ. (ಅನು) ಸಂಪುಟ೧೭, ಭಾರತೀಯ ವಿಧ್ಯಾಭವನ, ಬೆಂಗಳೂರು, ೨೦೦೪

೨೮. ರಮೇಶ ನಾಯಕ (ಸಂ.), ಕರ್ನಾಟಕ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನಗಳ ಮರುಚಿಂತನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮.

೨೯. ರಾಮಚಂದ್ರಗೌಡ ಹಿ.ಶಿ, ಕನ್ನಡ ವಿಷಯ ವಿಶ್ವಕೋಶ (ಪರಿಷ್ಕೃತ) ಸಂಪುಟ-೨, ೨೦೦೭

೩೦. ಲಕ್ಷ್ಮಣ್ ತೆಲಗಾವಿ, (ಸಂ) ಚರಿತ್ರೆ ಅಧ್ಯಯನ, ಸಂಪುಟ ೧, ಸಂಚಿಕೆ ೧, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬

೩೧. ವಸು ಎಂ.ವಿ., ದಕ್ಷಿಣ ಕರ್ನಾಟಕದ ಅರಸು ಮನೆತನಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧

೩೨. ಶರ್ಮ.ಎಚ್.ಡಿ., ಟಿಪ್ಪು ನಿಜ ಸ್ವರೂಪ, ಸಾಹಿತ್ಯ ಸಿಂಧು ಪ್ರಕಾಶನ ೨೦೦೩.

೩೩. ಶಂಕರನಾರಾಯಣರಾವ್ ಎನ್.ಪಿ., ಸ್ವಾತಂತ್ರ ಗಂಗೆಯ ಸಾವಿರ ತೊರೆಗಳು, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೧೯೯೬

೩೪. ಷೇಕ್ ಅಲಿ ಬಿ., ಟಿಪ್ಪುಸುಲ್ತಾನ್, ನ್ಯಾಷನಲ್ ಬುಕ್‌ಟ್ರಸ್ಟ್, ಹೊಸ ದೆಹಲಿ, ೧೯೯೦

೩೫. ಷೇಕ್ ಅಲಿ ಬಿ., ಕರ್ನಾಟಕ ಚರಿತ್ರೆ ಸಂಪುಟ-೫, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭

೩೬. ಶಿವತಾರಕ ಕೆ.ಬಿ., ಕರ್ನಾಟಕದ ಪುರಾತತ್ವ ನೆಲೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧

೩೭. ಶೇಷಗಿರಿರಾವ್ ಎಲ್.ಎಸ್. (ಸಂ.), ಬೆಂಗಳೂರು ದರ್ಶನ, ಸಂಪುಟ ೧ ಮತ್ತು ೨, ಉದಯ ಬಾನು ಕಲಾ ಸಂಘ, ಬೆಂಗಳೂರು ೨೦೦೫

೩೮. ಸುರೇಶ್ ಮೂನ, ಬೆಂಗಳೂರು ನಗರ ನಿರ್ಮಾಪಕರು, ಸಾಧನಾ ಪ್ರಕಾಶನ, ಬೆಂಗಳೂರು, ೨೦೦೪

೩೯. ಸುರೇಶ್ ಮೂನ, ಇದು ನಮ್ಮ ಬೆಂಗಳೂರು, ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೯

೪೦. ಸುಂದರ್‌ರಾವ್ ಬ.ನ. (ವನವಿಹಾರಿ), ಬೆಂಗಳೂರು ಇತಿಹಾಸ ವಸಂತ ಕಾವ್ಯ ಗ್ರಂಥ ಮಾಲಾ, ಬೆಂಗಳೂರು, ೧೯೮೫

೪೧. ಸೂರ್ಯನಾಥ ಯು. ಕಾಮತ್, ಕರ್ನಾಟಕ ರಾಜ್ಯ ಗೆಜೆಟಿಯರ್ ಭಾಗ-೨ ಕರ್ನಾಟಕ, ಬೆಂಗಳೂರು, ೧೯೮೬

೪೨. ಸೂರ್ಯನಾಥ ಯು. ಕಾಮತ್, ಕರ್ನಾಟಕ ರಾಜ್ಯ ಗೆಜೆಟಿಯರ್ ಭಾಗ-೩ ಕರ್ನಾಟಕ ಸರ್ಕಾರ, ಬೆಂಗಳೂರು ೧೯೮೫

[illegible]

೪೩. ಹುತಾತ್ಮ ಟಿಪ್ಪು ಸುಲ್ತಾನ್ ಸ್ವತಂತ್ರ ಕರ್ನಾಟಕದ ಹರಿಕಾರ, ಕರ್ನಾಟಕ ವಿಮೋಚನಾ ರಂಗ, ಬೆಂಗಳೂರು, ೨೦೦೩

ಇಂಗ್ಲೀಷ್ ಗ್ರಂಥಗಳು

೪೪. Anuradha Matur, dilipnaeunha Deean Traverers,- the making of Bangalore's terrain, rupe, co. New Delhi, 2006

೪೫. Bhattacharya, B., Urban Development in India (Since Pre-historic Times), Shree, Delhi 1979.

೪೬. Buchanan Francis, A Journey from Madras through the countries of Mysore, Canara and Malabar, 3 Volums, 1807

೪೭. Champakalakshmi, R., Urbanisation in South India; The Role of Ideology and Policy, Presidential Address Ancient Indian Section, Proceedings of Indian History Congress, Srinagar 1986.

೪೮. Chattopadhayaya, B.D., Trade and Urban Centres in Early Medieval India, Indian Historical Review, I., 1974.

೪೯. Childe, V. Gordon, The Urban Revolution, Town Planning Review, XXI, 1950.

೫೦. Dharama Kumar, cambridge Economic History of India Vol-II, orient Longman, New Delhi, 1984.

೫೧. Forrest, C.W., Cities of India: Past and Present, London 1903.

೫೨. Hayavadana Rao, History of Mysore, 3 Voumes, Bangalore, 1943

೫೩. Indu Banga, (ed.) The City in Inidian History - Urban Demography, Society and Politics, New Delhi - 2005.

೫೪. Indu Banga, (ed,) Urbaniam in South India, Eighteenth - Nineteenth Centuries.

೫೫. Irfan Habib.(ed.) Confronting Colonialism, Resistance and Modernization under Haidar Ali and Tippu Sultan, Tulika, New Delhi-2001

೫೬. Janaki Nair, The Promise of the Metropolies - Bangalore's Twentieth century, New Delhi - 2005.

೫೭. Kale, B.D., Growth of Towns in Mysore State, Journal of Institute of Economic Research, July 1967.

೫೮. Kabir Kausar Secret Correspondence of Tippu sultan, Karanataka State Archives, Bangalore, 1998

೫೯. Mohibbul Hasan, History of Tippu Sultan, Aakar Books, Delhi-2006

೬೦. M. Fazzul Hasan, Bangalore through the Centuries, Historical Publications, Bangalore, 1970

೬೧. M.H. Gopal, Tippu Sultan's Mysore-An Economic Study, Bombay Popular Prakashana, Bombay-1971

೬೨. Maya Jayapal, Bangalore the story of a City, East West Books Madras pvt Ltd, chennai, 1997

೬೩. M. Shama Rao, Modern Mysore from the beginning to 1868, Vol.I Bangalore, 1936.

೬೪. Narasinga Rajan B., Bangalore As a Commercial City-1721-1809, Q.J.M.S.(4), 1988

೬೫. Place Names of Mysore, Q.J.M.S., 6(4), Mythic Society Bangalore 1916.

೬೬. Prakasarao, V.L.S., Towns of Mysore State, Asia, Bombay 1964.

೬೭. Sabyasachi Bhattacharya and Romila Thaper, (ed), B.D. Chattopadhyaya, Urban Centres in early Medieval India, An Overview, Delhi, 1986.

೬೮. Shadaksharaiah, Uraban Growth in Modern South India: A Study of Bangalore Metropols, South Indian History Congress, 2007

೬೯. Saki, Making History: Karnataka's People and thier Past, Volume-I Stone Age to Merantilism, Vimukthi Prakashana, Bangalore, 1998.

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

೨೦. Suryanath Kamath, Bangalore: Urbanization during Pre- British Period, Q.J.M.S. 97(2), 2006

೨೧. Times of India, Bangalore was Home to Man in 2300 B.C. dated, 16th Octobar, 1996.

೨೨. T.V. Anna Swamy, Bangalore to Bangalore, Vengadam Publication, Bangalore, 2003

೨೩. T.P. Issar, The City is Beautiful - A celebration of the Architectural Heritage and city - Acstheties of Bangalore, 1988.

೨೪. Vikram Sampath, Splenders of Royal Mysore, New delhi, 2008

* * *

೨. ನಿಯತಕಾಲಿಕೆಗಳು

೧. ಪ್ರಜಾವಾಣಿ

೨. ಸಂಯುಕ್ತ ಕರ್ನಾಟಕ

೩. ಉದಯವಾಣಿ

೪. ಡೆಕ್ಕನ್ ಹೆರಾಲ್ಡ್

೫. ಟೈಮ್ಸ್ ಆಫ್ ಇಂಡಿಯಾ

೩. ನಕ್ಷೆಗಳು

ಕ್ರಿ.ಶ – 1800ರ ಬೆಂಗಳೂರು ಪ್ರದೇಶದ ನಕ್ಷೆ

ಕೃಪೆ

ಡೆಕ್ಕನ್ ಟವರೆಸ್ ಕೃತಿ



ಕ್ರಿ.ಶ – 1791–92 ಆಂಗ್ಲೋ – ಮೈಸೂರು ಯುದ್ದದ
ಸಂದರ್ಭದಲ್ಲಿ ಬೆಂಗಳೂರು ಪೇಟೆಯ ನಕ್ಷೆ

ಕೃಪೆ
ಡೆಕ್ಕನ್ ಟವರೆಸ್ ಕೃತಿ



The Map of Lalbagh Showing Periodical Expansion of Area

ಹೈದರನ ಕಾಲದ ಲಾಲಬಾಗ್ ಉದ್ಯಾನವನ

ಕೃಪೆ

ಜುವೆಲ್ಸ್ ಆಫ್.

ಲಾಲಬಾಗ್ ಕೃತಿ

ಛಾಯಾಚಿತ್ರಗಳು

ಬೆಂಗಳೂರು ಕೋಟೆ

ಟಿಪ್ಪು ಅರಮನೆ

ಮೈಸೂರು ಸುಲ್ತಾನರ ಕಾಲದ ಆರ್ಮರಿ

ಬೆಂಗಳೂರು ಕೋಟೆಯ ದಿಡ್ಡಿ ದ್ವಾರ